
ಸಂಪುಟ 22 ಸಂಚಿಕೆ 27 ಜೂನ್ 28-ಜುಲೈ 4, 1999 ಬೆಲೆ ರೂ: 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಪೋಲೀಸರಿದ್ದಾರೆ! ಮಾಲಕರ ರಕ್ಷಣೆಗೆ! ಕಾರ್ಮಿಕರ ದಮನಕ್ಕೆ!!



ಬೀಜಿಂಗ್‌ನಲ್ಲಿ ತಿಪ್ಪರಲಾಗ

ಹುಸಿ ದೇಶಭಕ್ತಿಯ ಬಿಜೆಪಿ 'ಬೋಫೋರ್ಸ್'

ರಾಜಕೀಯ ವಲಸೆಯ ಸೀಝನ್

ಕರ್ನಾಟಕದಲ್ಲೀಗ ವಿವಿಧ ಪಕ್ಷಗಳಿಗೆ ವಲಸೆ ಹೋಗುವ ಮಾತು. ಲೋಕಶಕ್ತಿಯ ಮುಖಂಡ ಮಾಜಿ ಎಂ.ಪಿ.ಯಾಗಿದ್ದ ಕೋದಂಡರಾಮಯ್ಯ ಮತ್ತಿತರರು ಕಾಂಗ್ರೆಸ್ ಸೇರಿದರು. ಬೆಸಗೊಂಬ ಭರದಲ್ಲಿ ತಾವೇ ಕರೆದುಕೊಳ್ಳುತ್ತಿರುವ ಲೋಹಿಯ ವಿಚಾರಧಾರೆ ಕಾಂಗ್ರೆಸ್‌ನಲ್ಲಿ ಪ್ರವಹಿಸುತ್ತದೆಯೆಂದೂ, ಕಾಂಗ್ರೆಸ್ ನಿಜವಾಗಿ ಹಿಂದುಳಿದವರಿಗೆ ನೆಲೆ, ಉಳಿದಿರುವ ದಾರಿಯೆಂಬಂತೆ ಅವರು ಮಾತನಾಡಿದ್ದಾರೆ. ಪೊಲೀಸ್ ಅಧಿಕಾರಿಯಾಗಿದ್ದ ಅವರು ರಾಜೀನಾಮೆ ನೀಡಿ ಜನತಾದಳ ಸೇರಿ, ನಂತರ ಎಂ.ಪಿ ಯಾಗುವ ಆಸೆಗಳು ಈಡೇರದೇ ಲೋಕಶಕ್ತಿ ಸೇರಿ, ಹೆಗಡೆಯವರ ಆರಾಧನೆಯ ನಂತರವೂ ಅಂದುಕೊಂಡಷ್ಟು ಆಗದೇ ಈಗ ಕಾಂಗ್ರೆಸ್‌ನ ಕದ ಬಡಿದು ಗುಂಪಿನೊಳಗೆ ಸೇರಿಕೊಂಡಿದ್ದಾರೆ. ತತ್ವನಿಷ್ಠೆ(?)ಯೆಂಬುದು ಅಧಿಕಾರನಿಷ್ಠೆ ಎಂಬುದರ ಅರ್ಥವಾಗಿದೆ. ತೇಲುವ ದೋಣಿಯೆಂದೇ ಅನೇಕರು ಭಾವಿಸಿರುವ ಕಾಂಗ್ರೆಸ್‌ನತ್ತ ಕಾಲುಹಾಕಲು ಅಕ್ಕಪಕ್ಕದ ಪಕ್ಷಗಳಲ್ಲಿ ಹಳಸಲಾಗುತ್ತಿರುವವರು ಯೋಚಿಸುತ್ತಿರುವ ವದಂತಿಗಳು ದಟ್ಟವಾಗುತ್ತಿವೆ.

'ಸಮಾನ ಮನಸ್ಕ'ರು ಸಭೆ ನಡೆಸಲು ಛತ್ರಗಳನ್ನು ಕಾಯ್ದಿರಿಸಿಕೊಳ್ಳಿ ಎಂದು ಚಾಟಿಏಟಿನ ಮಾತನ್ನಾಡಿದ್ದ ಮುಖ್ಯಮಂತ್ರಿ ಪಟೇಲರು ಸಮಾನ ಮನಸ್ಕರು ಸಭೆ ಸೇರಿ ಕಷ್ಟ-ಸುಖ ಹಂಚಿಕೊಳ್ಳುವುದು ತಪ್ಪೇನಲ್ಲ ಎಂದು ಹೇಳಿದ್ದಾರೆ. ವಿಶೇಷವಾಗಿ ಸದ್ಯ ಜನತಾದಳದ ಪ್ರಸಕ್ತ ರಾಜಕೀಯ ನಿಲುವು ಹಾಗೂ ರಾಜ್ಯದ ನಾಯಕತ್ವದ

> **ತತ್ವನಿಷ್ಠೆ(?)ಯೆಂಬುದು ಅಧಿಕಾರನಿಷ್ಠೆ ಎಂಬುದರ ಅರ್ಥವಾಗಿದೆ. ತೇಲುವ ದೋಣಿಯೆಂದೇ ಅನೇಕರು ಭಾವಿಸಿರುವ ಕಾಂಗ್ರೆಸ್‌ನತ್ತ ಕಾಲುಹಾಕಲು ಅಕ್ಕಪಕ್ಕದ ಪಕ್ಷಗಳಲ್ಲಿ ಹಳಸಲಾಗುತ್ತಿರುವವರು ಯೋಚಿಸುತ್ತಿರುವ ವದಂತಿಗಳು ದಟ್ಟವಾಗುತ್ತಿವೆ.**

ಸಂಪಾದಕೀಯ


ಮೇಲೆ ತೀವ್ರ ಧಾಳಿಯನ್ನು ನಡೆಸಿರುವ ಎಂ.ಎಸ್. ಪಾಟೀಲರ ಊರಿನಲ್ಲೇ ಪಟೇಲರು ಆಡಿರುವ ಮಾತು ಹಲವು ಅರ್ಥಗಳನ್ನು ಹೊರಡಿಸುತ್ತಿದೆ. ಮಾತ್ರವಲ್ಲ-ವಿಧಾನ ಸಭೆ ನಡೆದಿರುವಾಗಲೇ ಅಥವಾ ನಂತರದಲ್ಲಿ ಜನತಾದಳದೊಳಗೆ ತುಂಬಾ ಬಿಕ್ಕಟ್ಟು ಉಲ್ಬಣವಾಗಬಹುದೆಂಬ ಊಹಾಪೋಹಗಳಿಗೆ ಎಡೆಮಾಡಿದೆ. ರಾಜ್ಯದಲ್ಲಿ ಬಿ.ಜೆ.ಪಿ. ಕಾಂಗ್ರೆಸ್‌ಗಳೆರಡನ್ನೂ ಎದುರಿಸಿ ಹೋರಾಡುವ ಮಾತನ್ನಾಡಿದರು ಪಟೇಲರು, ಒಂದೆಡೆ ಶರದ್ ಪವಾರ್‌ರತ್ತ ಸ್ನೇಹ ಹಸ್ತ ಚಾಚಿದ್ದಾರೆ ಎಂಬ ಮಾತುಗಳಿವೆ.

ಈ ನಡುವೆಯೇ ಭಿನ್ನಮತೀಯ ಸಚಿವ ಎಂ.ಎಸ್. ಪಾಟೀಲರು ಲೋಕಶಕ್ತಿಯೊಂದಿಗೆ ಜನತಾದಳ ಮೈತ್ರಿ ಮಾಡಿಕೊಳ್ಳಬೇಕೆಂದು ಸೂಚನೆ ಇಟ್ಟಿದ್ದಾರೆ. ಈ ಮೂಲಕ ಕೋಮುವಾದಿ ಮೈತ್ರಿಕೂಟವನ್ನು ಎದುರಿಸಿ ಹೋರಾಡಬೇಕೆಂಬ ಜನತಾದಳದ ಧೋರಣೆಗೆ ವಿರುದ್ಧವಾಗಿ, ಅದರೊಂದಿಗೆ ಜನತಾದಳದ ಹಿರಿಯ ಮುಖಂಡರನ್ನು ಇರುಸು-ಮುರುಸು ಮಾಡುವ ಮತ್ತು ಪ್ರತ್ಯೇಕಗೊಳ್ಳುವ ತಂತ್ರವೂ ಆಗಿದೆ.

ದಳದ ಸಭೆಗಳಿಗೂ ಕೆಲವು ಶಾಸಕರು ಗೈರುಹಾಜರಾಗುತ್ತಿರುವುದು ಜನತೆಗೆ ತಪ್ಪಾದ, ಗೊಂದಲಗಳ ಸೂಚನೆಗಳನ್ನು ನೀಡುತ್ತಿವೆ. ಈಗ ನಡೆದಿರುವ ಅಧಿವೇಶನವೂ ಕೂಡ ಭಿನ್ನಮತದ, ಅನೇಕ ಊಹಾಪೋಹಗಳ ನೆರಳಿನ ನಡುವೆ ನಡೆಯುತ್ತಿದೆ.

ಪರಸ್ಪರ ತಳ್ಳಾಟದಲ್ಲಿ ತೊಡಗಿದ್ದ ಬಿಜೆಪಿ ಲೋಕಶಕ್ತಿ ನಡುವೆ ಮೈತ್ರಿ ಕುದುರಿಸಲು ಬಿಜೆಪಿಯ ರಾಷ್ಟ್ರಮುಖಂಡರು ಯತ್ನಿಸುತ್ತಿರುವುದು ಹೊಸ ಬೆಳವಣಿಗೆಯಾಗಿದೆ. ಕಾರ್ಗಿಲ್ ಹೋರಾಟವನ್ನು ಒಳಗೊಂಡು ಯುದ್ಧೋನ್ಮಾದ ಸೃಷ್ಟಿಸಲು ಮತ್ತು ಇಂದಿನ ಸ್ಥಿತಿಯನ್ನು ತನ್ನ ಹೀನ ರಾಜಕೀಯಕ್ಕೆ ಬಳಸಿಕೊಳ್ಳಲು ಕೋಮುವಾದಿಗಳ ಕೂಟ ಯತ್ನ ನಡೆಸಿದೆ ಎಂಬುದು ಗಂಭೀರ ವಿಷಯ. ಇಂತಹ ಸಂದರ್ಭದಲ್ಲಿ ಎಡ ಹಾಗೂ ಧರ್ಮ ನಿರಪೇಕ್ಷ ಶಕ್ತಿಗಳು ಹಾಗೂ ಜನತೆ ಜಾಗೃತಗೊಳ್ಳಬೇಕು, ಜನರನ್ನು ಜಾಗೃತಗೊಳಿಸಬೇಕು.

ವಾರದ ವ್ಯಂಗ್ಯಚಿತ್ರ 'ಹಿಂದು ನಲ್ಲಿ ಸುರೇಂದ್ರನ್'



ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೂ 'ಅಕೃತಿಮ' ಕಮ್ಯುನಿಸ್ಟ್ ಪಕ್ಷ ಎಂದು ಹೇಳಿಕೊಳ್ಳುವ ಎಸ್.ಯು.ಸಿ.ಐ., ಸಿಪಿಐ ಮತ್ತು ನಕ್ಸಲ್‌ವಾದಿ ಪಕ್ಷಗಳಿಗೂ ಇರುವ ವ್ಯತ್ಯಾಸವೇನು?

ಎ.ಸಾಗರರಾಜನ್
ಬೆಂಗಳೂರು

ಈ ಪ್ರಶ್ನೆಗೆ ಉತ್ತರ ನೀಡಲು ಬಹಳ ದೀರ್ಘವಾದ ಸೈದ್ಧಾಂತಿಕ ಚರ್ಚೆ ಬೇಕಾಗುತ್ತದೆ. ಆದರೆ ಸರಳವಾಗಿ ಹೀಗೆ ಹೇಳಬಹುದು - ವ್ಯತ್ಯಾಸಗಳಿರುವುದು ಭಾರತದಲ್ಲಿ ಕ್ರಾಂತಿ ತರುವ ಅಥವಾ ಸಮಾಜವಾದ ಕಟ್ಟುವ ದಾರಿಯ ಬಗ್ಗೆ. ಅಕೃತಿಮ ಕಮ್ಯುನಿಸ್ಟ್ ಪಕ್ಷ ಎಂಬ ಮಾತಿಗೆ ಏನೂ ಅರ್ಥವಿಲ್ಲ. ಒಮ್ಮೆಲೇ ಸಮಾಜವಾದ ಕಟ್ಟಬೇಕು, ಇಲ್ಲಿ ಪಾಳೆಯಗಾರಿಕೆ ವ್ಯವಸ್ಥೆಯ ಉಳಿಕೆ, ಅರೆ-ಪಾಳೆಯಗಾರಿ ಇವೆಲ್ಲಾ ಇಲ್ಲ ಎನ್ನುವ ಅಭಿಪ್ರಾಯ ಎಸ್.ಯು.ಸಿ.ಐ.ನದ್ದು. ಇದು ಖಂಡಿತ ಒಪ್ಪತಕ್ಕ ಮಾತಲ್ಲ ಎಂಬುದು ಭಾರತ ದಲ್ಲಿ ಈಗಾಗಲೇ ಅನುಭವ ಸಿದ್ಧ ಮಾತು. ಆದ್ದರಿಂದ ಅವರ ಆಡಂಬರದ ಮಾತುಗಳಿಗೆ ಅಷ್ಟು ಮಹತ್ವ ಕೊಡಬೇಕಾಗಿಲ್ಲ.

ಸಿಪಿಐ, ನಕ್ಸಲ್‌ವಾದಿಗಳು, ಸಿಪಿಐ(ಎಂ)ಗೆ ಇರುವ ಮೂಲಭೂತವಾದ ವ್ಯತ್ಯಾಸಗಳು ಹೀಗಿವೆ - ಮೊದಲನೆಯದಾಗಿ ಯಾವುದೇ ಕಮ್ಯುನಿಸ್ಟ್ ಪಕ್ಷ ಒಂದು ದೇಶದಲ್ಲಿನ ಪ್ರಭುತ್ವದ ವರ್ಗಸ್ವರೂಪವನ್ನು(Class character of State) ವಿಶ್ಲೇಷಣೆ ಮಾಡುವುದು ಬಹಳ ಮುಖ್ಯ ಹಾಗೆ ಮಾಡುವಾಗ ಸಿಪಿಐ ಈ ದೇಶದ ಪ್ರಭುತ್ವದ ಅಧಿಕಾರವು ರಾಷ್ಟ್ರೀಯ ಬಂಡವಾಳಗಾರ ನಾಯಕತ್ವದಲ್ಲಿದೆ, ಅಂದರೆ ಭೂಮಾಲಕ- ಬಂಡವಾಳಗಾರರ ವರ್ಗಗಳ ನಾಯಕತ್ವವನ್ನು ರಾಷ್ಟ್ರೀಯ ಬಂಡವಾಳಗಾರರು ವಹಿಸಿದ್ದಾರೆಂದು ವಿಶ್ಲೇಷಣೆ ಮಾಡುತ್ತದೆ. ಎಡ ಸಾಹಸವಾದಿಗಳು ಅಂದರೆ ನಕ್ಸಲಿಯರು ಪ್ರಭುತ್ವ, ಊಳಿಗಮಾನ್ಯ ಪ್ರಭುಗಳ, ದಲ್ಲಾಳಿ, ಬಂಡವಾಳಗಾರ ನಾಯಕತ್ವದಲ್ಲಿ ಇದೆ ಎಂದು ವಿಶ್ಲೇಷಿಸುತ್ತಾರೆ. ಸಿಪಿಐ(ಎಂ) ಈ ಪ್ರಭುತ್ವದ ವರ್ಗಗುಣವನ್ನು ಭೂಮಾಲಕರು ಮತ್ತು ಬಂಡವಾಳಗಾರ ವರ್ಗ, ಹಿರೇ ಬಂಡವಾಳಗಾರ ನಾಯಕತ್ವದಲ್ಲಿ ಇದೆ ಎಂದು ವಿಶ್ಲೇಷಣೆ ಮಾಡುತ್ತದೆ.

ಈ ರೀತಿ ಪ್ರಭುತ್ವದ ವರ್ಗಗುಣವನ್ನು ವಿಶ್ಲೇಷಣೆ ಮಾಡಿದಾಗ ಅವರ ಹೋರಾಟದ ದಾರಿಯನ್ನು ನಿರ್ಣಯಿಸಬೇಕಾಗುತ್ತದೆ. ಅಂದ ಹಾಗೆ ಈ ದೇಶದಲ್ಲಿ ಕ್ರಾಂತಿಯ ಹಾದಿಯನ್ನು ನಿರ್ಧರಿಸುತ್ತದೆ. ಇದು ಒಂದು ಮೂಲಭೂತವಾದ ವ್ಯತ್ಯಾಸ.

2. ಬಹಳ ಪ್ರಮುಖ ಮತ್ತು ನಿರ್ಣಾಯಕವಾದ ವ್ಯತ್ಯಾಸ : ಮಾರ್ಕ್ಸ್‌ವಾದ-ಲೆನಿನ್‌ವಾದವೆಂದರೆ ಕ್ರಾಂತಿಕಾರಿ ವಿಜ್ಞಾನ. ಕ್ರಾಂತಿಕಾರಿ ವಿಜ್ಞಾನವೆಂದರೆ ಇದರಲ್ಲಿರುವ ವೈಜ್ಞಾನಿಕ ಅಂಶವನ್ನು ಮತ್ತು ಕ್ರಾಂತಿಕಾರಕ ಅಂಶವನ್ನು ಸರಿಯಾದ ರೀತಿಯಲ್ಲಿ ಅಳವಡಿಸಿದರೆ ಮಾತ್ರ ಸರಿಯಾದ ಕ್ರಾಂತಿಕಾರಿ ಮಾರ್ಗವನ್ನು ಅನುಸರಿಸಲು ಸಾಧ್ಯವಾಗುತ್ತದೆ. ಇದರಲ್ಲಿ ಯಾವುದನ್ನು ಸಡಿಲಗೊಳಿಸಿದರೂ ಕ್ರಾಂತಿಯ ಹಾದಿಯ ತಪ್ಪುದಾರಿಗೆ ಹೋಗುತ್ತದೆ. ಇದರಲ್ಲಿ ಸಿಪಿಐ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿರುವ ಕ್ರಾಂತಿಕಾರಿ ಅಂಶವನ್ನು ಮರೆತು ಇದರಲ್ಲಿರುವ ವೈಜ್ಞಾನಿಕ ಅಂಶಕ್ಕೆ ಮಾತ್ರ ಒತ್ತುಕೊಟ್ಟು ಬದಲಾವಣೆ ಅದಷ್ಟಕ್ಕೇ ಅದು ಕ್ರಾಂತಿ ಆಗುತ್ತದೆ, ಇದು ಸಾಮಾಜಿಕ ನಿಯಮ ಹಾಗಾಗಿ ವರ್ಗ ಹೋರಾಟದ ಅವಶ್ಯಕತೆ ಇಲ್ಲ ಎಂದು ಅರ್ಥ. ಹಾಗಾಗಿ ಇದರಲ್ಲಿರುವ ಕ್ರಾಂತಿಕಾರಿ ಅಂಶವಾದ ವರ್ಗ ಹೋರಾಟವನ್ನು ಕೈಬಿಟ್ಟದ್ದು ಮತ್ತು ಹಲವಾರು ಉದಾಹರಣೆಗಳನ್ನು ನೀಡಬಹುದು. ಉದಾಹರಣೆಗೆ ಅವರ ಬಾಟಿಂಡಾ ಅಧಿವೇಶನದ ನಿರ್ಣಯ, ತುರ್ತುಪರಿಸ್ಥಿತಿಗೆ ಬೆಂಬಲ ಕೊಟ್ಟದ್ದು, 20ನೇ ಸಿಪಿಐನ್‌ಯು ಮಹಾಧಿವೇಶನದ ನಿರ್ಣಯವನ್ನು ಬೆಂಬಲಿಸಿದ್ದು, 1977 ರವರೆವಿಗೂ ಕಾಂಗ್ರೆಸ್ಸಿಗೆ ಬೆಂಬಲ ಕೊಡುತ್ತಾ ಬಂದದ್ದು - ಇತ್ಯಾದಿ.

ಎಡ ಸಾಹಸವಾದಿಗಳು ಅಂದರೆ ನಕ್ಸಲಿಯರು ಮಾರ್ಕ್ಸ್‌ವಾದದಲ್ಲಿರುವ ವೈಜ್ಞಾನಿಕ ಅಂಶವನ್ನು ಬಿಟ್ಟು ಬರಿ ಕ್ರಾಂತಿಕಾರಿ ಅಂಶವನ್ನು ಮಾತ್ರ ಒತ್ತು ಕೊಟ್ಟು ಅದರಲ್ಲಿನ ವೈಜ್ಞಾನಿಕ ಅಂಶವನ್ನು ಕೈಬಿಟ್ಟರು. ಯಾವುದೇ ದೇಶದಲ್ಲಿ ಕ್ರಾಂತಿಯನ್ನು ಮಾಡಬೇಕೆಂದರೆ ಅಲ್ಲಿನ ನಿಖರವಾದ ಪರಿಸ್ಥಿತಿಯ ಖಚಿತವಾದ ವಿಶ್ಲೇಷಣೆ ಮಾಡಿ ಆಯಾ ಪರಿಸ್ಥಿತಿಗೆ ಹೊಂದಿಕೊಂಡು ಮಾರ್ಕ್ಸ್‌ವಾದ ಅದನ್ನು ಅಳವಡಿಸಬೇಕಾಗಿದೆ. ಯಾಂತ್ರಿಕವಾಗಿ ಮಾರ್ಕ್ಸ್‌ವಾದವನ್ನು ಅಳವಡಿಸುವುದು ಮಾರ್ಕ್ಸ್‌ವಾದ-ಲೆನಿನ್‌ವಾದಿ ವಿರೋಧಿ ಗುಣವಾಗುತ್ತದೆ. ಹಾಗಾಗಿಯೇ ಎಡ ಸಾಹಸವಾದಿಗಳು ಜನತೆಯಿಂದ ದೂರವಾಗಿ ಕಾಡುಗಳನ್ನು ಸೇರಿರುವುದು.

ಸಿಪಿಐ(ಎಂ) ಪಕ್ಷವು ಮಾರ್ಕ್ಸ್‌ವಾದದಲ್ಲಿರುವ ಕ್ರಾಂತಿಕಾರಿ ಹಾಗೂ ವೈಜ್ಞಾನಿಕ ಗುಣವನ್ನು ಸಮಾನ ರೀತಿಯಲ್ಲಿ ಅಳವಡಿಸಿ ಈ ಪ್ರಭುತ್ವದ ವರ್ಗಗುಣವನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿ ಈ ದೇಶದ ಜನರಲ್ಲಿ ಗಟ್ಟಿಯಾದ ನೆಲೆಯನ್ನು ಪಡೆದುಕೊಂಡಿದೆ. ಹಾಗೆಯೇ ಅಂತರ್ರಾಷ್ಟ್ರೀಯ ಮಟ್ಟದಲ್ಲಿನ ಕಮ್ಯುನಿಸ್ಟ್ ಪಕ್ಷಗಳಳು ಎಷ್ಟೇ ಬಿಕ್ಕಟ್ಟುಗಳನ್ನು ಎದುರಿಸಿ ಮುಗ್ಗರಿಸಿದರೂ ಅವರು ಹೆಸರುನ್ನು ಬದಲಾಯಿಸಿದರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಮಾರ್ಕ್ಸ್‌ವಾದ-ಲೆನಿನ್ ವಾದದ ಮೇಲೆ ಎಷ್ಟೇ ದಾಳಿ ನಡೆದರೂ ಅದನ್ನು ಸಮರ್ಥನೆ ಮಾಡಿದ್ದೇ ಅಲ್ಲದೆ ಮಾರ್ಕ್ಸ್‌ವಾದದ ಔನ್ನತ್ಯವನ್ನು ಎತ್ತಿ ಹಿಡಿದಿದೆ.

- ಜಿ.ವಿ.ಶ್ರೀರಾಮರೆಡ್ಡಿ

ಐಕ್ಯರಂಗ ಪುರವಣಿ

'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕತಾವಾದ'

'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ಜನ್ಮದಿನದ ಸಂದರ್ಭದಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲೆ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮ ಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.


ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನೆಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನೆಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನೆ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

ಜುಲೈ 10-20 ರಾಜ್ಯವ್ಯಾಪಿ ಪ್ರಚಾರಾಂದೋಲನ ಸಿಪಿಐ(ಎಂ) ಕರೆ

ರಾಷ್ಟ್ರದ ಹಾಗೂ ರಾಜ್ಯದ ಪ್ರಸಕ್ತ ವಿದ್ಯಮಾನಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ವ್ಯಾಪಕವಾದ ಪ್ರಚಾರಾಂದೋಲನವನ್ನು ನಡೆಸಲು ಜೂನ್ 21 ರಂದು ಸಭೆ ಸೇರಿದ ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ. ಜುಲೈ 10 ರಿಂದ 20ರ ವರೆಗೆ ನಡೆಯುವ ಈ ಪ್ರಚಾರಾಂದೋಲನದಲ್ಲಿ ಸಮಾವೇಶಗಳು, ಬಹಿರಂಗ ಸಭೆಗಳು, ಮನೆ-ಮನೆ ಪ್ರಚಾರ ಇತ್ಯಾದಿಗಳನ್ನು ನಡೆಸಲಾಗುವುದು, ಬಿಜೆಪಿಯ ವಿನಾಶಕಾರಿ ಆಡಳಿತ, ರಾಜ್ಯದಲ್ಲೂ ಅವರ ಧ್ವಂಸಕಾರಿ ಕೃತ್ಯಗಳು, ಕಾಂಗ್ರೆಸ್‌ನ ಮುಂದುವರೆಯುತ್ತಿರುವ ಜನ-ವಿರೋಧಿ ನೀತಿ, ಗುಂಪುಗಾರಿಕೆ, ಲೋಕಶಕ್ತಿಯ ಆಟ, ಜನತಾದಳದ ವಿಫಲತೆಗಳನ್ನು ವಿಶ್ಲೇಷಿಸುವ ಒಂದು ಕಿರುಹೊತ್ತಿಗೆಯನ್ನು ಈ ಅವಧಿಯಲ್ಲಿ ಹೊರತರಲಾಗುವುದು ಎಂದು ಸಿಪಿಐ(ಎಂ) ವಕ್ತಾರರು ತಿಳಿಸಿದ್ದಾರೆ.



ಬಾಂಬ್ ನೀತಿಯ ವಿಫಲತೆಯನ್ನು ಮುಚ್ಚಿಕೊಳ್ಳಲು ಈಗ ಹುಸಿ ದೇಶಭಕ್ತಿಯ ಪ್ರದರ್ಶನ

ಕಾರ್ಗಿಲ್‌ನಲ್ಲಿ ಅತಿಕ್ರಮಣಕೋರರನ್ನು ಹಿಂದಕ್ಕಟ್ಟುವ ಮಿಲಿಟರಿ ಕಾರ್ಯಾಚರಣೆ ಆರಂಭವಾಗಿ ಒಂದು ತಿಂಗಳು ದಾಟಿದೆ. ಭಾರತೀಯ ಸೈನಿಕರು ಅತ್ಯಂತ ದುರ್ಗಮ ಪರಿಸ್ಥಿತಿಯಲ್ಲಿ ಹಿಮಾಚ್ಛಾದಿತ ಪರ್ವತ ಶ್ರೇಣಿಗಳಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಸಶಸ್ತ್ರ ಅತಿಕ್ರಮಣಕೋರರನ್ನು, ಪಾಕಿಸ್ತಾನಿ ಸೈನಿಕರನ್ನು ಹಿಂದಕ್ಕಟ್ಟುತ್ತಿದ್ದಾರೆ. ಸಮರ ಇನ್ನೂ ಸಾಗಿದೆ. ಪ್ರತಿದಿನ ಇನ್ನಷ್ಟು ಸೈನಿಕರ ಬಲಿದಾನವಾಗುತ್ತಿದೆ. ಮಡಿದ ಸೈನಿಕರ ದೇಹಗಳು ದೇಶದ ಮೂಲೆ-ಮೂಲೆಗೂ ತಲುಪುತ್ತಿವೆ. ಜೂನ್ 22 ರ ವೇಳೆಗೆ ಮರಣವನ್ನಪ್ಪಿದ ಭಾರತೀಯ ಸೈನಿಕರ ಸಂಖ್ಯೆ 163, ಗಾಯಗೊಂಡವರ ಸಂಖ್ಯೆ 323, ಕಾಣೆಯಾದವರು 9. ಇವು ಅಧಿಕೃತ ಅಂಕೆ-ಸಂಖ್ಯೆಗಳು. ನಿಜವಾದ ಸಾವು, ನೋವು ಇನ್ನೂ ಹೆಚ್ಚಿರಬಹುದು. ಇಡೀ ದೇಶ ಆತಂಕದಿಂದ ಕಾರ್ಗಿಲ್‌ನ ಸಮರವನ್ನು ನೋಡುತ್ತಿದೆ. ಸೈನಿಕರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತಿದೆ.

ಆದರೆ ಈ ಗಂಭೀರ ವಾತಾವರಣದಲ್ಲಿ ಮತ್ತೆ ಕೇಳಲಾರಂಭಿಸಿವೆ ಕರ್ಕಶ ಧ್ವನಿಗಳು. ಕೇವಲ ಕೆಲವೇ ದಿನಗಳ ಹಿಂದೆಯಷ್ಟೆ ಕಾರ್ಗಿಲ್‌ನ ಘರ್ಷಣೆಯ ರಾಜಕೀಯ ಲಾಭ ಪಡೆಯಬೇಡಿ ಎಂದು ಇತರರಿಗೆ ಉಪದೇಶಿಸುತ್ತಿದ್ದ ಕೇಂದ್ರದ ಉಸ್ತುವಾರಿ ಸರಕಾರದ ನೇತೃತ್ವ ವಹಿಸಿರುವ ಬಿಜೆಪಿಯದ್ದೇ ಧ್ವನಿಗಳು ಅವು. ಜೂನ್ 23 ರಂದು ಅದು 'ಕಾಶ್ಮೀರ ದಿನ' ಆಚರಿಸಿದೆ. ಅದನ್ನು ಆಚರಿಸಿದ ರೀತಿ ಅದರ ಬೆಂಬಲಿಗರಲ್ಲೂ ಆತಂಕ ಹುಟ್ಟಿಸಿದೆ. ('ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಪಾದಕೀಯ ನೋಡಿ). ದೇಶದ ಎಲ್ಲಾ ಪತ್ರಿಕೆಗಳಲ್ಲಿ ಎರಡೆರಡು ಪುಟಗಳಲ್ಲಿ ಜಾಹೀರಾತುಗಳು(ಇವಕ್ಕೆ ಅಪಾರ ಹಣ ಎಲ್ಲಿಂದ ಬಂತು ಎಂದು ಕೇಳಬೇಡಿ)- ಬಿಜೆಪಿಯ ಹಿಂದಿನ ಅವತಾರವಾದ ಭಾರತೀಯ ಜನಸಂಘದ ಸಂಸ್ಥಾಪಕ ಅಧ್ಯಕ್ಷ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ನಿಧನವಾದ ದಿನವನ್ನು ಬಿಜೆಪಿ 'ಕಾಶ್ಮೀರ ದಿನ'ವನ್ನಾಗಿ ಆಚರಿಸಿತು. ಆಚರಿಸಲಿ! ಆದರೆ ಅವರ ಬೆಂಬಲಿಗರೂ ಅವಾಕ್ಕಾದ ಒಂದು ಮಹಾ ಸುಳ್ಳಿನೊಂದಿಗೆ ಆಚರಿಸಿತು! ಇತಿಹಾಸವನ್ನು ವಿಕೃತಗೊಳಿಸುವ ತನ್ನ ಹುಟ್ಟುಗುಣದೊಂದಿಗೆ ಆಚರಿಸಿತು! 1953 ರಲ್ಲಿ ನಿಧನರಾದ ಶ್ಯಾಮಪ್ರಸಾದ್ ಮುಖರ್ಜಿಯವರು ಕಾಶ್ಮೀರಕ್ಕಾಗಿ ಹುತಾತ್ಮರಾದ ಮೊದಲಿಗರಲ್ಲಿ ಒಬ್ಬರಂತೆ! ಅದಕ್ಕೂ 5 ವರ್ಷಗಳ ಮೊದಲೇ 1948 ರಲ್ಲಿ ಕೈಯಲ್ಲಿ ಶಸ್ತ್ರ ಹಿಡಿದು ಪಾಕಿಸ್ತಾನೀ ಅತಿಕ್ರಮಣಕೋರರ ವಿರುದ್ಧ ಹೋರಾಡಿದ ನೂರಾರು ಕಾಶ್ಮೀರಿಗಳಿಗೆ ಅವರ 'ಇತಿಹಾಸ'ದಲ್ಲಿ ಸ್ಥಾನವಿಲ್ಲ. ಏಕೆಂದರೆ ಅವರೆಲ್ಲಾ ಮುಸ್ಲಿಮರು! ಭಾರತದೊಡನೆ ಸೇರದೆ 'ಸ್ವತಂತ್ರ'ವಾಗಿದ್ದು ಸಾಮ್ರಾಜ್ಯಶಾಹಿಗಳ ಬಾಲಬಡುಕರಾಗಬೇಕೆಂದಿದ್ದ ಆಗಿನ ಕಾಶ್ಮೀರದ ಹಿಂದು ರಾಜನ ಹಾಗೂ ಆತನ ಬೆಂಬಲಕ್ಕೆ ನಿಂತಿದ್ದ ಬಿಜೆಪಿಯ ಪೂರ್ವಜರ ಸಂಚನ್ನು ವಿಫಲಗೊಳಿಸಿ ಭಾರತದೊಡನೆ ಸೇರಿಕೊಳ್ಳಲು ನಿರ್ಧರಿಸಿದ್ದ ಜನ ಅವರು. ಆದರೆ ಈಗ ಬಿಜೆಪಿಯವರು ತಾವು ಮಾತ್ರವೇ ಕಾಶ್ಮೀರದ ಬಗ್ಗೆ ಕಾಳಜಿ ಹೊಂದಿರುವವರು ಎಂದು ಪ್ರದರ್ಶಿಸುವ ಪ್ರಯತ್ನಕ್ಕಿಳಿದಿದ್ದಾರೆ. ಅದಕ್ಕಾಗಿ ಅನಿವಾರ್ಯವಾಗಿ ಇತಿಹಾಸವನ್ನು ತಿರುಚುತ್ತಿದ್ದಾರೆ. ಅತ್ತ ಅವರ ಸಂಘ ಪರಿವಾರದ ಮುಖವಾಣಿ "ಪಾಂಚಜನ್ಯ" 'ಪರಮಾಣು ಅಸ್ತ್ರ ಬಳಸಿ, ಪಾಕಿಸ್ತಾನಕ್ಕೆ ಬುದ್ಧಿ ಕಲಿಸಿ' ಎಂದು ಅರಚಿದೆ.

ಕೆಲವೇ ದಿನಗಳ ಹಿಂದೆ ಈ ಪ್ರಶ್ನೆಯ ರಾಜಕೀಯ ಲಾಭ ಪಡೆಯಬೇಡಿ ಎಂದು ಇತರರಿಗೆ ಉಪದೇಶಿಸುತ್ತಿದ್ದವರು ಈಗೇಕೆ ತಾವೇ ಆ ಕೃತ್ಯಕ್ಕೆ ಕೈ ಹಾಕಿದ್ದಾರೆ?

ಅತಿಕ್ರಮಣಕೋರರು ಹತೋಟಿ ರೇಖೆಯ ಈಚೆ ಇಷ್ಟು ದೂರ ಬರುವವರೆಗೂ ನೀವೇನು ಮಾಡುತ್ತಿದ್ದಿರಿ ಎಂದು ಪ್ರಶ್ನಿಸುವ ಸಮಯ ಇದಲ್ಲ ಎಂದು ದೇಶಪ್ರೇಮಿ ಶಕ್ತಿಗಳು ಸುಮ್ಮನಿದ್ದರೂ ಸರಕಾರದ ಶೋಚನೀಯ ವಿಫಲತೆಯನ್ನು ಮುಚ್ಚಿಕೊಳ್ಳಲು ಇಂತಹ ಕರ್ಕಶ, ಹುಸಿ ದೇಶಪ್ರೇಮದ ಘೋಷಣೆಗಳೇ, ಇತಿಹಾಸದ ವಿಕೃತಿಗಳೇ ತಾನೇ ಬಿಜೆಪಿಗೆ ಸಿಗುವ ಆಯುಧಗಳು?

'ಬ'ಗಳ ಬಡಾಯಿ ಕೊಚ್ಚಿಹೋಗಿದೆ

ಈ ಹಿಂದೆ ಬಿಜೆಪಿ ನೇತೃತ್ವದ ಕೂಟ ಮೂರು 'ಬ'ಗಳನ್ನು - ಅಂದರೆ ಬಾಂಬ್, (ಲಾಹೋರ್) ಬಸ್ ಪ್ರಯಾಣ ಹಾಗೂ ಬಜೆಟ್ - ತನ್ನ ಪ್ರಮುಖ ಚುನಾವಣಾ ವೇದಿಕೆಯಾಗಿ ಮಾಡಲು ನಿರ್ಧರಿಸಿತ್ತು. ವಾಜಪೇಯಿ ಸರಕಾರದ ಪತನದ ನಂತರ ಇಂಗ್ಲೀಷ್ ವರ್ಣಮಾಲೆಯ ಇನ್ನೊಂದು 'ಬಿ'(betrayal ವಿಶ್ವಾಸಘಾತ) ಯನ್ನು ಅಡ್ವಾಣಿಯವರು ಇದಕ್ಕೆ ಸೇರಿಸಿದ್ದರು. ಆದರೆ ಈಗ ಎಂತಹ ಪರಿಸ್ಥಿತಿ ಬಂದಿದೆಯೆಂದರೆ 'ಯಾರ ವಿಶ್ವಾಸಘಾತ' ಎಂದು ಜನ ಚರ್ಚಿಸುವಂತಾಗಿದೆ - ವಾಜಪೇಯಿ ಸರಕಾರವನ್ನು ಪತನಗೊಳಿಸಿದ್ದೋ ಅಥವಾ ಕಾರ್ಗಿಲ್‌ನಲ್ಲಿಯ ಶೋಚನೀಯ ವಿಫಲತೆಯೋ?

ವಾಸ್ತವವಾಗಿ ಕಾರ್ಗಿಲ್‌ನ ಬೆಳವಣಿಗೆಗಳು

ಬಿಜೆಪಿ-ಆರ್.ಎಸ್.ಎಸ್. ನ 'ಶಕ್ತಿ' ಅಂದರೆ ಬಾಂಬ್ ಆಧಾರಿತ ರಣನೀತಿ ಕುಸಿದು ಬಿದ್ದಿರುವುದರ ಸಂಕೇತ. ಕಳೆದ ವರ್ಷ ಮೇ ತಿಂಗಳಲ್ಲಿ ಪೋಖ್ರಾನ್‌ನಲ್ಲಿ ಅಣುಸ್ಫೋಟ ನಡೆಸಿ "ಇದೀಗ ನಾವು ಶಾಂತಿ ಮತ್ತು ಸ್ಥಿರತೆ ನೀಡುವ, ದೇಶದ ಭದ್ರತೆಯನ್ನು ಕಾಪಾಡುವ ಮಹಾ ಶಕ್ತಿ ಪಡೆದಿದ್ದೇವೆ" ಎಂದು ಸಾರಿದರು. ಈ ಸಂತೃಪ್ತ ಮನೋಭಾವನೆಯಿಂದಾಗಿಯೇ, ಹುಸಿ ಆತ್ಮವಿಶ್ವಾಸದಿಂದಾಗಿಯೇ ಕಾರ್ಗಿಲ್‌ನಲ್ಲಿ ಐದಾರು ತಿಂಗಳಿಂದ ಸಾವಿರಾರು ಅತಿಕ್ರಮಣಕೋರರು ಹಲವಾರು ಕಿಲೋಮೀಟರ್‌ಗಳಷ್ಟು ನುಸುಳಿ ಬರುತ್ತಿದ್ದ ಅರಿವೇ ಸರಕಾರಕ್ಕೆ ಬರಲಿಲ್ಲ.

ಈ ಹಿನ್ನೆಲೆಯಲ್ಲಿ "ಹಲವು ದಶಕಗಳಲ್ಲಿ ಮೊದಲ ಬಾರಿಗೆ ಪಾಕಿಸ್ತಾನಕ್ಕೆ ಒಂದು ಸರಿಯಾದ ಉತ್ತರ ನೀಡುವ ಒಂದು ಬಲಿಷ್ಠ ಸರಕಾರವನ್ನು ಭಾರತ ಪಡೆದಿದೆ" ಎಂದು ಬೆಂಗಳೂರಿನಲ್ಲಿ 'ಕಾಶ್ಮೀರ ದಿನ'ದಂದು ಬಿಜೆಪಿಯ ಅಧ್ಯಕ್ಷರು ಉದುರಿಸಿದ ನುಡಿಮುತ್ತು ಎಷ್ಟು ಹಾಸ್ಯಾಸ್ಪದ ಎಂದು ಬೇರೆ ಹೇಳಬೇಕಾಗಿಲ್ಲ. ಕಳೆದ 28 ವರ್ಷಗಳ ನಂತರ ಮೊದಲ ಬಾರಿಗೆ ಪಾಕಿಸ್ತಾನೀ ಆಳರಸರು ಈ ದುಸ್ಸಾಹಸಕ್ಕಿಳಿಯುವ ಧೈರ್ಯ ತೋರಿದ್ದಾರೆ. 1965 ರಲ್ಲಿ ಹಾಗೂ 1971 ರಲ್ಲಾದಂತೆ ಭಾರತ ಪಾರಂಪರಿಕ ಯುದ್ಧ ವಿಧಾನಗಳನ್ನೇ ಈ ಬಾರಿ ಉಪಯೋಗಿಸಲು ಸಾಧ್ಯವಿಲ್ಲ, ಏಕೆಂದರೆ ಆಗ ಪರಮಾಣು ಸಂಘರ್ಷ ನಡೆಯುತ್ತದೆ, ಬೇರೆ ದೇಶಗಳು ಮಧ್ಯಪ್ರವೇಶಿಸುತ್ತವೆ, ಕಾಶ್ಮೀರ ಒಂದು ಅಂತರ್ರಾಷ್ಟ್ರೀಯ ಪ್ರಶ್ನೆಯಾಗುತ್ತದೆ ಎಂಬ ಲೆಕ್ಕಾಚಾರದಿಂದಲೇ ಅವರು ಹೀಗೆ ಮಾಡುತ್ತಿದ್ದಾರೆ. ಬಿಜೆಪಿಯ ಪರಮಾಣು ನೀತಿ ಪಾಕಿಸ್ತಾನಕ್ಕೆ ಎಂತಹ ಅವಕಾಶ ಸೃಷ್ಟಿಸಿಕೊಟ್ಟಿದೆ ಎಂದು ಈಗಲಾದರೂ ಅರ್ಥವಾಗಿದೆಯೇ ಇವರಿಗೆ?

ಅಮೆರಿಕಾ-ಅಮೆರಿಕಾ!

ಪಾಕಿಸ್ತಾನ ಕಾಶ್ಮೀರವನ್ನು ಒಂದು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿಸುವಲ್ಲಿ ವಿಫಲವಾಗಿದೆ ಎಂದು ಅದೇ 'ಕಾಶ್ಮೀರ ದಿನ'ದ ಬೆಂಗಳೂರು ಸಮಾರಂಭದಲ್ಲಿ ಬಿಜೆಪಿ ವಕ್ತಾರ ವೆಂಕಯ್ಯನಾಯ್ಡು ಕೂಡಾ ಬಡಾಯಿಕೊಚ್ಚಿಕೊಂಡರು. ಆದರೆ ವಾಜಪೇಯಿ ಸರಕಾರವೇ ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿಸುವ ಪ್ರಯತ್ನದಲ್ಲಿರುವಂತಿದೆ. ಕಳೆದ ವರ್ಷ ಪರಮಾಣು ಸ್ಫೋಟ ನಡೆಸಿ ಅಡ್ವಾಣಿಯವರು "ನಾವೀಗ ಪರಮಾಣು ಶಸ್ತ್ರ ಸಂಪನ್ನ ದೇಶ" ಎಂದು ಪರಮಾಣು ಖಡ್ಗ ಝಳಪಿಸಿ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದಾಗಲೇ ಇದಕ್ಕೆ ನಾಂದಿಯಾಗಿತ್ತು. ಮೊನ್ನೆ ಜೂನ್ 16 ರಂದು ವಾಜಪೇಯಿಯವರು ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರವರಿಗೆ ಬರೆದ ಒಂದು ಪತ್ರವನ್ನು ಅಮೇರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಸ್ಯಾಂಡಿ ಬರ್ಗರ್‌ಗೆ ನೀಡಲಾಯಿತಂತೆ. ಅದರಲ್ಲಿ ಏನು ಬರೆದಿದೆ ಎಂಬುದನ್ನು ಸರಕಾರ ಪ್ರಕಟಿಸಿಲ್ಲ. ಆದರೆ ಜರ್ಮನಿಯ ಕ್ಯೋಲ್ನ್ ನಗರದಲ್ಲಿ ಜಿ-8 ರ ಸಭೆಯ ಮೊದಲು ಪಾಕಿಸ್ತಾನ ಐಎಂಎಫ್ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯದಂತೆ ತಡೆಯಬೇಕು ಎಂದು ಅದರಲ್ಲಿ ಮನವಿ ಮಾಡಲಾಗಿದೆಯೆಂದು ಹೇಳಲಾಗಿದೆ. ಕಾಶ್ಮೀರದ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿಸುವ ಅಪಾಯ ಈ ಪ್ರಯತ್ನದಲ್ಲಿ ಅಡಗಿಲ್ಲವೇ ಎಂದು ಯಾರಾದರೂ ಕೇಳಲು ಸಾಧ್ಯ.

ಆಳುವ ಪಕ್ಷ 'ಕಾಶ್ಮೀರ ದಿನ'ದ ಆಚರಣೆಗೆಂದು ಹೊರಡಿಸಿದ ಜಾಹೀರಾತುಗಳ ಸರಣಿ ಅದರ ಬಗ್ಗೆ ಒಳ್ಳೆಯ ಬೆಳಕನ್ನೇನು ಚೆಲ್ಲುತ್ತಿಲ್ಲ. ಜನಸಂಘದ ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ ಕಾಶ್ಮೀರಕ್ಕಾಗಿ ದುಡಿದ ಮೊದಲಹುತಾತ್ಮ ಎಂದು ಹೇಳಿಕೊಂಡು ಅವರ ಹೆಸರನ್ನು ಈಗ ನಡೆಯುತ್ತಿರುವ ಗಡಿ ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡಿದವರ ಹೆಸರುಗಳೊಂದಿಗೆ ಜೋಡಿಸಿ ಬಿಜೆಪಿ ತನ್ನ ರಾಜಕೀಯ ಉದ್ದೇಶಗಳನ್ನು ಬಯಲುಗೊಳಿಸಿದೆಯಷ್ಟೆ. ಜನಸಂಘ ರಚನೆಯಾಗುವುದಕ್ಕಿಂತಲೂ ಮೊದಲೇ ನೂರಾರು ಸಾಮಾನ್ಯ ಕಾಶ್ಮೀರಿಗಳು ಹಾಗೂ ಭಾರತೀಯ ಸೈನಿಕರು ದೇಶ ವಿಭಜನೆಯ ಬೆನ್ನಲ್ಲಿ ಭಾರತದಿಂದ ಕಾಶ್ಮೀರವನ್ನು ಬೇರ್ಪಡಿಸಲು ಪಾಕಿಸ್ತಾನ ಕಳಿಸಿದ ಮಂದೆಗಳಿಂದ ಜಮ್ಮು-ಕಾಶ್ಮೀರವನ್ನು ರಕ್ಷಿಸುತ್ತಾ ಪ್ರಾಣಾರ್ಪಣೆ ಮಾಡಿದ್ದಾರೆ ಎಂಬ ಅರಿವೇ ಅದಕ್ಕಿದ್ದಂತಿಲ್ಲ.

- ಇಂಡಿಯನ್ ಎಕ್ಸ್‌ಪ್ರೆಸ್
25.6.1999

ಜಾಹೀರಾತುಗಳು ಅಸಹ್ಯವಾಗಿವೆಯಷ್ಟೇ ಅಲ್ಲ, ಅಸತ್ಯಕರವೂ ಆಗಿವೆ. 1953 ರಲ್ಲಿ ಕಾಶ್ಮೀರದಲ್ಲಿ ಒಂದು ಚಳುವಳಿ ನಡೆಸಿದಾಗ ಶೇಖ್ ಅಬ್ದುಲ್ಲಾ ಸರಕಾರ ಮುಖರ್ಜಿಯವರನ್ನು ಬಂಧಿಸಿದಾಗ ಜೈಲಿನಲ್ಲಿ ಹೃದಯಾಘಾತದಿಂದ ಅವರು ನಿಧನರಾದರು. ಸಹಜ ಸಾವು ಕಂಡ ಒಬ್ಬರನ್ನು 'ಹುತಾತ್ಮ' ಎಂದು ಕರೆಯುವುದು ಎಷ್ಟು ಸೂಕ್ತ ಎಂಬ ಮಾತು ಒತ್ತಟ್ಟಿಗಿರಲಿ, ಅದಕ್ಕೂ ಎಷ್ಟೋ ಮೊದಲು 1947-48 ರಲ್ಲಿ ನಮ್ಮ ಪಡೆಗಳು ಪಾಕಿಸ್ತಾನೀ ಆಕ್ರಮಣದಿಂದ ಕಾಶ್ಮೀರವನ್ನು ರಕ್ಷಿಸಲು ಕಟುವಾದ ಹೋರಾಟ ನಡೆಸಿದವು ಎಂಬುದನ್ನು ಬಿಜೆಪಿ ಮರೆತಿದೆ. ಈ ಘರ್ಷಣೆಯಲ್ಲಿ 1103 ಸೈನಿಕರು ಬಲಿಯಾದರು, 3000 ಗಾಯಗೊಂಡರು, 1000 ಸೈನಿಕರು ಕಾಣೆಯಾದರು.

- ಟೈಂಸ್‌ಆಫ್ ಇಂಡಿಯಾ
25.6.1999

ಈ ಜಿ-8 ರಾಷ್ಟ್ರಗಳ ಹೇಳಿಕೆ ಭಾರತಕ್ಕೊಂದು ದೊಡ್ಡ ವಿಜಯ ಎಂದು ವಾಜಪೇಯಿ ಸರಕಾರ ಹೇಳಿಕೊಂಡಿದೆ. ಅತ್ತ ಅದು ತಮ್ಮ ವಿಜಯ ಎಂದು ಪಾಕಿಸ್ತಾನದ ನವಾಜ್ ಶರೀಫ್ ಸರಕಾರವೂ ಹೇಳಿಕೊಂಡಿದೆ. ನಿಜ, ಹತೋಟಿ ರೇಖೆಯ ಉಲ್ಲಂಘನೆಯನ್ನು ಆ ಹೇಳಿಕೆ ಗಮನಿಸಿದೆ, ಘರ್ಷಣೆಗಳನ್ನು ನಿಲ್ಲಿಸಬೇಕು ಎಂದು ಆ ಹೇಳಿಕೆ ಕರೆ ನೀಡಿದೆ. ಅತಿಕ್ರಮಣಕೋರರ ವಿರುದ್ಧ ಕಾರ್ಯಾಚರಣೆಯನ್ನು ಭಾರತ ನಿಲ್ಲಿಸಬೇಕು ಎಂದೂ ಅರ್ಥ ಹುಡುಕಲು ಪಾಕಿಸ್ತಾನಕ್ಕೆ ಅವಕಾಶ ಇಲ್ಲದೆ.

ಇಷ್ಟೇ ಅಲ್ಲ, ಈ ಹೇಳಿಕೆಯೊಂದಿಗೆ ಈ 8 ಬಲಿಷ್ಠ ದೇಶಗಳು ಇನ್ನೊಂದು ಹೇಳಿಕೆಯನ್ನು ಅಂಗೀಕರಿಸಿದವು. ಅದೆಂದರೆ ಕಳೆದ ವರ್ಷ ಎರಡೂ ದೇಶಗಳ ಕ್ಷಿಪಣಿ ಮತ್ತು ಪರಮಾಣು ಪರೀಕ್ಷೆಗಳನ್ನು ಖಂಡಿಸಿ, ಎರಡೂ ದೇಶಗಳು ಎನ್.ಪಿ.ಟಿ ಸಂಧಿಗೆ ಸಹಿ ಹಾಕಬೇಕೆಂದು ಕರೆ ನೀಡುವ ಹೇಳಿಕೆ. ಇದು ಮುಂದೆ ಕಾಶ್ಮೀರ ಪ್ರಶ್ನೆಯಲ್ಲಿ ಮಧ್ಯಪ್ರವೇಶಿಸಲು ಹಾದಿ ಮಾಡಿಕೊಂಡಿರುವ ಹೇಳಿಕೆ ಎಂಬುದು ವಿದೇಶಾಂಗ ವ್ಯವಹಾರಗಳ ಪರಿಣತರ ಸ್ಪಷ್ಟ ಅಭಿಪ್ರಾಯ.


ಈ ಹಿನ್ನೆಲೆಯಲ್ಲಿ ಅಮೆರಿಕಾ ನಮ್ಮ ಪರವಾಗಿದೆ ಎಂದು ಬೀಗುವ ಅಗತ್ಯವಿಲ್ಲ. ಏಕೆಂದರೆ ಕಾಶ್ಮೀರದಲ್ಲಿ ಅಮೆರಿಕಾಕ್ಕೆ ತನ್ನದೇ ಆದ ಹಿತಾಸಕ್ತಿಗಳಿವೆ. ಯುಗೋಸ್ಲಾವಿಯದ ಕೊಸೊವೊ ಸಮಸ್ಯೆಗೆ 'ನಾಟೋ ಪರಿಹಾರ' ನಮಗೆ ಪಾಠ ಕಲಿಸಬೇಕಲ್ಲವೇ?

ಇನ್ನೊಂದು ವಿಷಯ - ಈಗ ಭಾರತಕ್ಕೆ ಅಂತರ್ರಾಷ್ಟ್ರೀಯ ಬೆಂಬಲ ದೊರೆತಿದ್ದರೆ ಅದು ಭಾರತ ಹತೋಟಿ ರೇಖೆಯ ಬಗ್ಗೆ ತಳೆದಿರುವ ಸರಿಯಾದ ನಿಲುವಿನಿಂದ. ಆದರೆ ಈಗ ಬಿಜೆಪಿ-ಆರ್‌ಎಸ್‌ಎಸ್ ವಲಯಗಳಿಂದ ಕೇಳ ಬರುತ್ತಿರುವ ಕರ್ಕಶ ದನಿಗಳು 'ಕಾಶ್ಮೀರದಲ್ಲಿ ನುಗ್ಗಬೇಕು', 'ಪರಮಾಣು ಅಸ್ತ್ರ ಬಳಸಬೇಕು', 'ಪಾಠ ಕಲಿಸಬೇಕು' ಎಂಬಿತ್ಯಾದಿ ಯುದ್ಧ ಪಿಪಾಸು ಭಾಷೆಯ ಮಾತುಗಳಿಂದ ಈ ಅಂತರ್ರಾಷ್ಟ್ರೀಯ ಬೆಂಬಲಕ್ಕೆ ಧಕ್ಕೆ ಬರಬಹುದು. ಪಾಕಿಸ್ತಾನದೊಂದಿಗೆ ಯುದ್ಧ ಭಾರತಕ್ಕೆ ಫಲಕಾರಿಯಾಗಿರುತ್ತದೆಂಬ ಗ್ಯಾರಂಟಿಯೇನಿಲ್ಲ. ಪರಮಾಣು ಅಸ್ತ್ರಗಳ ಹಿನ್ನೆಲೆಯಲ್ಲಿ ಅದು ಎರಡೂ ದೇಶಗಳ ಜನರಿಗೆ ವಿನಾಶಕಾರಿಯಾಗುವ, ಯುಗೋಸ್ಲಾವಿಯದಲ್ಲಾದಂತೆ ನೇರವಾಗಿ ಸಾಮ್ರಾಜ್ಯಶಾಹಿಗಳ ಮಧ್ಯಪ್ರದೇಶಕ್ಕೆ ಅವಕಾಶ ಮಾಡಿಕೊಡುವ ಅಪಾಯವಂತೂ ಬಹಳ ಇದೆ.

ಉಸ್ತುವಾರಿ ಸರಕಾರ ಎಂಬುದು ನೆನಪಿರಲಿ

ಈ ಎಲ್ಲಾ ಕರ್ಕಶ ದನಿಗಳನ್ನು ಹೊರಡಿಸುವ ಬಿಜೆಪಿಗೆ ವಾಜಪೇಯಿ ಸರಕಾರ ಒಂದು ಉಸ್ತುವಾರಿ ಸರಕಾರ ಮಾತ್ರ ಎಂಬುದು ನೆನಪಿರಬೇಕು. ಇಡೀದೇಶ ಸರಕಾರದ ಬೆಂಬಲಕ್ಕೆ ನಿಂತರೂ ಅದು ಜನರನ್ನು ವಿಶ್ವಾಸಕ್ಕೆ ತಗೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ರಾಜ್ಯಸಭೆಯ ಅಧಿವೇಶನ ಕರೆಯಲೂ ಅದು ಹಿಂದೇಟು ಹಾಕುತ್ತಿದೆ - ಬಹುಶಃ ಈ ಪ್ರಮುಖ ರಾಷ್ಟ್ರೀಯ ಪ್ರಶ್ನೆಯಲ್ಲಿ ವಾಸ್ತವಾಂಶಗಳನ್ನು ಜನತೆಯಿಂದ ಮುಚ್ಚಿಡಲೆಂದು ಇರಬಹುದು. ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಲು ರಾಷ್ಟ್ರೀಯ ಪ್ರಯತ್ನ ಬೇಕು. ಇದಕ್ಕೆ ಉಸ್ತುವಾರಿ ಸರಕಾರ ಎಲ್ಲಾ ರಾಷ್ಟ್ರೀಯ ಪಕ್ಷಗಳನ್ನು ತೊಡಗಿಸುವ ಸಕ್ರಿಯ ಪ್ರಯತ್ನ ನಡೆಸಬೇಕು. ಭಾರತದ ರಾಷ್ಟ್ರಪತಿಗಳು ಈಗ ಈ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ದೇಶಪ್ರೇಮ ಎಂದರೆ ಭಾರತದ ಪ್ರದೇಶವನ್ನು ರಕ್ಷಿಸುತ್ತಾ ಮಡಿದವರಿಗೆ ಶ್ರದ್ಧಾಂಜಲಿ ಹಾಗೂ ಅತಿಕ್ರಮಣಕೋರರನ್ನು ಹತೋಟಿ ರೇಖೆಯಾಚೆ ತಳ್ಳುವ ಮಿಲಿಟರಿ ಕಾರ್ಯಾಚರಣೆಗಳಿಗೆ ಪೂರ್ಣ ಬೆಂಬಲ. ಅದರ ಬದಲು ಕುರುಡು ಭಾವೋನ್ಮಾದವನ್ನು ಬಡಿದೆಬ್ಬಿಸುವ ಬಿಜೆಪಿಯ ಪ್ರಯತ್ನ ತನ್ನ ವಿಫಲತೆಗಳನ್ನು ಮುಚ್ಚಿಕೊಳ್ಳುವ, ಚುನಾವಣಾ ಲಾಭ ಗಿಟ್ಟಿಸುವ ಹತಾಶ ಪ್ರಯತ್ನವಷ್ಟೆ. ನೈಜ ದೇಶಪ್ರೇಮ ಯಾವುದು ಹಾಗೂ ಹುಸಿ ದೇಶ ಭಕ್ತಿ ಯಾವುದು ಎಂಬುದನ್ನು ಅರಿಯುವಷ್ಟು ಭಾರತದ ಜನ ಪ್ರೌಢರಾಗಿದ್ದಾರೆ. ಬಿಜೆಪಿ ಮುಖಂಡರಿಗೆ ಇದು ತಿಳಿದಿರಲಿ.



ಬೆಸಗರಹಳ್ಳಿ ಗ್ರಾಮ ಪಂಚಾಯತಿಯ ದಲಿತ ಅಧ್ಯಕ್ಷೆಯ ದಾರುಣ ಕಥೆ

ಮಂಡ್ಯ ಜಿಲ್ಲೆಯ ಬೆಸಗರಹಳ್ಳಿಯ ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ ಆರಿಸಿಬಂದ ಆದಿಯಮ್ಮ ಅದಕೆ ಮೊದಲು ಬದುಕಿಗಾಗಿ ಅವಲಂಬಿಸಿದ್ದು ಜಾಡಮಾಲಿ ಕೆಲಸವನ್ನು ಮುಂದುವರೆಸಿದ್ದಕಾಗಿ ಆಕೆಯ ವಿರುದ್ಧ ಆಕೆಯ ಪಕ್ಷವಾದ ಕಾಂಗ್ರೆಸ್ ಅವಿಶ್ವಾಸ ನಿರ್ಣಯ ತಂದರು ಎಂಬ ಸುದ್ದಿ ಓದಿ ಅತ್ಯಂತ ಕಸಿವಿಸಿಗೊಂಡ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎನ್.ಕೆ.ಉಪಾಧ್ಯಾಯರ ಅನಿಸಿಕೆ

ದೇಶದ ಸ್ವಾತಂತ್ರ್ಯ ಸ್ವರ್ಣ ಮಹೋತ್ಸವದ ಅಲೆಗಳನ್ನು ಮರೆಯದೆ ಅಭಿಮಾನದಿಂದಲೇ ಅದರಲ್ಲಿ ತೇಲಾಡುತ್ತಿರುವಾಗ ಮಂಡ್ಯ ಜಿಲ್ಲೆಯ ಬೆಸಗರ ಹಳ್ಳಿಯ ಗ್ರಾಮ ಪಂಚಾಯತಿಯಲ್ಲಿ ನಡೆದ ಘಟನೆ ಸ್ವರ್ಣ ಮಹೋತ್ಸವ ಆಚರಣೆಯಲ್ಲಿ ಹುದುಗಿದ್ದ ಉತ್ಸಾಹ ಭರಿತ ಚಿಂತನೆಗೆ ಹೃದಯಾಘಾತವಾಗುವಂತೆ ಅಪ್ಪಳಿಸಿದ ತೆರೆಯೋಪಾದಿಯಲ್ಲಿದೆ. ಮನೆ ಮಠಗಳನ್ನು ತೊರೆದು, ತಂದೆ ತಾಯಂದಿರ ಅಡೆತಡೆಯನ್ನೆಲ್ಲ ಧಿಕ್ಕರಿಸಿ ಪ್ರಾಣ ಭಯವನ್ನೆಲ್ಲ ಮರೆತು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸಿಗರು, ಕಮ್ಯುನಿಸ್ಟರು, ಪುರೋಗಾಮಿ ಪಕ್ಷದವರು ಮಾತ್ರವಲ್ಲದೆ, ಸ್ವಾತಂತ್ರ್ಯ ಸಂಗ್ರಾಮವನ್ನು ವಿರೋಧಿಸಿ ಬ್ರಿಟಿಷರ ಜೊತೆ ಕೈಜೋಡಿಸಿದ ಬಿಜೆಪಿ ಯವರು ಕೂಡ ಸ್ವಾತಂತ್ರ್ಯ ಸ್ವರ್ಣ ಮಹೋತ್ಸವವನ್ನು ತಮ್ಮದಾಗಿಸಿಕೊಳ್ಳುವ ಪ್ರವೃತ್ತಿ ಹೊಂದಿದ್ದರು. ಅಂತೂ ದೇಶಕ್ಕೆ ಸ್ವಾತಂತ್ರ್ಯ ಪಡೆದ ಐವತ್ತನೇ ವರ್ಷ ವಿಜೃಂಭಣೆಯಿಂದಲೇ ನಡೆಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಸ್ವಲ್ಪ ಮಟ್ಟಿಗೆ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಬಿಟ್ಟರೆ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದು ತನ್ನಿಂದಲೇ ದೇಶಕ್ಕೆ ಸ್ವಾತಂತ್ರ್ಯ ದಕ್ಕಿತೆಂದು ಬೀಗಿಕೊಂಡು ಅದರ ಹೆಸರಿನಲ್ಲೇ ಮತಗಳಿಸುತ್ತಿರುವ ಕಾಂಗ್ರೆಸ್ ಪಕ್ಷವಾಗಲೀ ಅದರಿಂದಲೇ ಸಿಡಿದು ಹೋಗಿ ಬೇರೆ ಬೇರೆ ನಾಮಾಂಕಿತಗೊಂಡು ಮೆರೆಯುವ ಪಕ್ಷಗಳಾಗಲೀ ಓತಿಕ್ಯಾತನಂತೆ ಬಣ್ಣ ಬದಲಾಯಿಸಿಕೊಂಡ ಆರ್.ಎಸ್.ಎಸ್. ಮೂಲದ ಬಿಜೆಪಿಯಾಗಲೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನವಿಭಾಗಗಳನ್ನು ಅಣಿಗೊಳಿಸಿ ಚಳುವಳಿಯಲ್ಲಿ ಧುಮುಕುವಂತೆ ಮಾಡಲು ಅನುಸರಿಸಿದ ಮೂಲತತ್ವ ಸಿದ್ಧಾಂತವನ್ನೇ ಮರೆತು ಬಿಟ್ಟಿದ್ದಾರೆ. ರೈತ ಕಾರ್ಮಿಕ, ಮಹಿಳೆ, ವಿದ್ಯಾರ್ಥಿ ಯುವಜನ ಹಾಗೂ ದಲಿತ ಹಿಂದುಳಿದ ವರ್ಗಗಳಲ್ಲಿ ಅಸಮಾಧಾನದ ಹೊಗೆ ಎದ್ದು ಬೆಂಕಿಯಾಗಿ ಪರಿವರ್ತನೆಗೊಳ್ಳುತ್ತಿದೆ. ಮಂಡ್ಯ ಜಿಲ್ಲೆಯ ಬೆಸಗರಹಳ್ಳಿಯ ಘಟನೆಗಳ ರೂಪದಲ್ಲಿ ಹೊರ ಹೊಮ್ಮುತ್ತಿದೆ. ಬೆಸಗರ ಹಳ್ಳಿಯ ಘಟನೆ ಸಮಾಜದಲ್ಲಿ ಹಾಗೆಯೇ ಉಳಿದಿರುವ ಊಳಿಗಮಾನ್ಯ ಪದ್ಧತಿಯನ್ನು ಎತ್ತಿ ತೋರಿಸುತ್ತದೆ. ಸ್ವಾತಂತ್ರ್ಯ ಸ್ವರ್ಣ ಮಹೊತ್ಸವದ ಕಾರ್ಯಕ್ರಮಗಳಲ್ಲಿ ಕಾಂಗ್ರೆಸ್, ಬಿಜೆಪಿ ಜನತಾ ದಳಗಳ ಬೊಗಳೆಯನ್ನು ಬಯಲು ಗೊಳಿಸುತ್ತದೆ. ಊಳಿಗಮಾನ್ಯ ಪದ್ಧತಿಯಲ್ಲಿ ಅಡಗಿರುವ, ಜಾತಿ ಭೇದ, ವರ್ಗ ಭೇದಗಳನ್ನು ಮುಂದುವರಿಸುವ ನಿರ್ಧಾರವನ್ನು ಎತ್ತಿತೋರಿಸುತ್ತದೆ.

ಶೌಚಾಲಯ ಶುಚಿತ್ವಗೊಳಿಸುವ ಜಾಡಮಾಲಿ ಕೆಲಸವಮಾಡುತ್ತಿರುವ ಆದಿಯಮ್ಮ ಬೆಸಗರಹಳ್ಳಿ ಗ್ರಾಮ ಪಂಚಾಯತ್ತಿಗೆ ಸದಸ್ಯೆಯಾಗಿ ಆರಿಸಿ ಬಂದಿದ್ದರು. ಸರಕಾರದ ಮೀಸಲಾತಿ ನೀತಿಯಿಂದಾಗಿ ಆದಿಯಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಯಾದರೂ ತನ್ನ ಜೀವನ ನಿರ್ವಹಣೆಗೆ ಅವಶ್ಯಕವಾದ ಬಡಮಾಲಿ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋದರು.

ಬಡತನದ ಬೇಗೆಯಲ್ಲಿ ತೊಳಲಾಡುತ್ತಿರುವ ಆದಿಯಮ್ಮ ತನ್ನ ಮಂದಿ ಮಕ್ಕಳ ಉಪಜೀವನಕ್ಕೆ ಆದಿಕಾಲದಿಂದಲೂ ತನ್ನ ಮನೆತನಕ್ಕೆ ದಾರಿಮಾಡಿ ಕೊಟ್ಟಿರುವ ಉದ್ಯೋಗ ಶೌಚಾಲಯ ನಿರ್ಮಲೀಕರಣದ ಜಾಡಮಾಲಿ ಕೆಲಸವನ್ನೇ ಮುಂದುವರಿಸಿಕೊಂಡು ಹೋಗುವ ಅವಶ್ಯಕತೆಯನ್ನು ಈ ಸಮಾಜ ಹುಟ್ಟುಹಾಕಿದೆ. ಗ್ರಾಮ ಪಂಚಾಯತಿಯ ಅಧ್ಯಕ್ಷ ಪದವಿ ಎರಡೂವರೆ ವರ್ಷ ಮಾತ್ರ. ಈ ಅವಧಿಯಲ್ಲಿ ತನ್ನ ಉಪಜೀವನಕ್ಕಾಗಿ ಆದಿಯಮ್ಮ ತನ್ನ ಹಿರಿಯರ ದಂಧೆಯನ್ನೇ ಮುಂದುವರಿಸಬೇಕು. ಅಥವಾ ಈಗ ಈ ಸಮಾಜದಲ್ಲಿ ಚಾಲ್ತಿಯಲ್ಲಿರುವಂತೆ ಗ್ರಾಮ ಪಂಚಾಯತಿಯ ಸಂಪತ್ತಿನಲ್ಲಿ ಪಾಲುದಾರಳಾಗಿ ತನ್ನನ್ನು ಆರಿಸಿತಂದ ಗ್ರಾಮಸ್ಥರಿಗೆ ಅನ್ಯಾಯವೆಸಗಬೇಕು. ಅದಾದರೂ ಎರಡುವರೆ ವರ್ಷ ಮಾತ್ರ.

ತಾಕತ್ತಿನಿಂದ ಸದಸ್ಯೆಯಾಗಿರುವ ಐದುವರ್ಷ ಈ ಕೊಳಕು ಸಮಾಜದಲ್ಲಿದ್ದರೂ, ಆಸೆ-ಆಮಿಷೆಗಳು ತನ್ನ ಕಣ್ಮುಂದೆ ಕುಣಿದಾಡಿ ಆಕರ್ಷಿಸುತ್ತಿದ್ದರೂ ಅಂಥ ಆಮೀಷಗಳಿಗೆ ಬಲಿಬೀಳದೆ ಸಮಾಜದಲ್ಲಿ ಅತ್ಯಂತ ಕೀಳ್ವರ್ಗದ ಜಾತಿಯಲ್ಲಿ ಜನ್ಮತಾಳಿ ಅತೀ ಕೀಳ್ಮಟ್ಟದ ಅಸಹ್ಯ ಕೆಲಸದಲ್ಲಿ ತೊಡಗಿದ್ದು ಆದಿಯಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷ ಪದವಿಗೇರಿದರೂ ಅದು ಕ್ಷಣಿಕ ಗೌರವ ಮಾತ್ರ, ಅದರಿಂದ ಪ್ರಾಮಾಣಿಕ ಉಪ ಜೀವನ ನಡೆಸುವುದು ಸಾಧ್ಯವಿಲ್ಲ, ನನ್ನ ಸಂಸಾರದ ಉಪ ಜೀವನಕ್ಕೆ ಬೇರೆ ಉದ್ಯೋಗ ಭರವಸೆ ಲಭ್ಯವಾಗುವ ತನಕ ಶೌಚಾಲಯ ಸ್ವಚ್ಛತೆಯೇ ಗತಿ ಎಂಬುದನ್ನು ಮನದಟ್ಟು ಮಾಡಿಕೊಂಡು ಅಧ್ಯಕ್ಷೆಯಾಗಿ ತನ್ನ ಗೌರವ ಕಾಪಾಡಿಕೊಂಡು ಉಪಜೀವನದ ಉದ್ಯೋಗ ಮುಂದುವರಿಸಿಕೊಂಡು ಹೋದರು. ಅಧ್ಯಕ್ಷೆಯಾಗಿ ಉತ್ತಮ ಕಾರ್ಯ ನೆರವೇರಿಸುತ್ತಾ ಜನರಿಂದ ಶಹಾಬಾಸ್‌ಗಿರಿ ಪಡೆದರು. ದುರಾದೃಷ್ಟದಿಂದ ನಮ್ಮ ಸಮಾಜದಲ್ಲಿ ಮೇಲ್ವರ್ಗದ ಪಂಚಾಯತಿ ಸದಸ್ಯರಿಗೆ ಅಧ್ಯಕ್ಷೆಯಾಗಿದ್ದರೂ ತನ್ನ ಉಪಜೀವನಕ್ಕಾಗಿ ನಿಷ್ಠೆಯಿಂದ ತನ್ನ ಕೆಲಸ ಮುಂದುವರಿಸುತ್ತಿರುವುದು ತಮ್ಮ ಗೌರವಕ್ಕೆ ಕುಂದು ಎಂದೆನಿಸಿರಬೇಕು. ತಮ್ಮ ಗೌರವವನ್ನೇ ಪ್ರಧಾನವನ್ನಾಗಿ ಮಾಡಿಕೊಂಡು ಅಧ್ಯಕ್ಷೆ ಆದಿಯಮ್ಮನ ವಿರುದ್ಧ ಅವಿಶ್ವಾಸ ನಿರ್ಣಯ ಪಾಸು ಮಾಡಿದ್ದಾರೆ.

ಆದಿಯಮ್ಮ ಯಾವ ಪಕ್ಷದವರು ಗೊತ್ತೆ? ಸಮಾಜದಲ್ಲಿಯ ಅತಿ ಕೀಳ್ಮಟ್ಟದ ಜನಾಂಗವಾಗಿರುವ, ಎಲ್ಲರಿಂದಲೂ ಬಹಿಷ್ಕರಿಸಲ್ಪಡುತ್ತಿರುವ 'ಹೊಲೆಯ' ಎಂದು ಕರೆಯಲ್ಪಡುತಿದ್ದವರನ್ನು 'ಹರಿಜನ' ಎಂದು ನಾಮಕರಣ ಮಾಡಿ ಅವರಿಗೆ ಸಮಾಜದಲ್ಲಿ ಸರಿಸಮಾನ ಸ್ಥಾನ ಒದಗಿಸಲು ದುಡಿದ ಮಹಾತ್ಮಗಾಂಧಿಯವರ ಕಾಂಗ್ರೆಸ್ ಪಕ್ಷ, ದಲಿತರ ಓಟು ಬ್ಯಾಂಕಿನಿಂದ ಆರಿಸಿ ಬರುತ್ತಿರುವ ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಪಕ್ಷದ ಅವಿಶ್ವಾಸ ನಿರ್ಣಯದ ಮೂಲಕ ಆದಿಯಮ್ಮನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದವರು ಮತ್ತಾರೂ ಅಲ್ಲ, ಕಾಂಗ್ರೆಸ್ಸಿನವರೇ. ಅವರ ಜೊತೆಯಲ್ಲಿ ಕೈಜೋಡಿಸಿದವರು ಆಳುವ ಪಕ್ಷದ ಜನತಾದಳದವರು. ಕಾಂಗ್ರೆಸ್ ಮತ್ತು ಜನತಾದಳ ಸದಸ್ಯರು ಸೇರಿ ಆದಿಯಮ್ಮನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದ್ದಾರೆ. ಅದಕ್ಕೆ ಕಾರಣ ತನ್ನ ಉಪಜೀವನಕ್ಕಾಗಿ ಶೌಚಾಲಯ ಶುಚಿತ್ವಗೊಳಿಸುವ ಕೆಲಸವನ್ನು ಮುಂದುವರಿಸಿದ್ದು. ಒಬ್ಬ ಶೌಚಾಲಯ ಶುದ್ಧಿ ಮಾಡುವಾಕೆ ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ ಉತ್ತಮ ಆಡಳಿತೆ ನಿರ್ವಹಣೆ ಮಾಡಿದ್ದು ಇಲ್ಲಿ ಗೌಣ. ಅಧ್ಯಕ್ಷ ಸ್ಥಾನ ಕಳೆದುಕೊಳ್ಳಲು ಜಾಡಮಾಲಿ ವೃತ್ತಿಯೇ ಮುಖ್ಯ ಕಾರಣವೆಂದು ಅರಿತ ಆದಿಯಮ್ಮ ತನ್ನ ಅಧ್ಯಕ್ಷ ಸ್ಥಾನಕ್ಕೇರಿಸಿದ ಪಕ್ಷವಾದ ಕಾಂಗ್ರೆ ಪಕ್ಷದ ಅಧ್ಯಕ್ಷ ಎಸ್.ಎಂ.ಕೃಷ್ಣ ಅವರಿಗೆ ದೂರು ಸಲ್ಲಿಸಿದ್ದಾರಂತೆ. ಬಂಡವಾಳಶಾಹಿ ಪಕ್ಷಗಳಲ್ಲಿ ಅಂಥ ದೂರುಗಳು ತನ್ನಿಂದ ತಾನೇ ಕರಗಿ ಹೋಗುತ್ತವೆ. ಸಮಾಜ ಇಂಥ ದೂರುಗಳನ್ನು ಸ್ವೀಕರಿಸಿ ನ್ಯಾಯ ಕೊಡಿಸಬೇಕಾಗಿದೆ

ಬೆಸಗರಹಳ್ಳಿಯ ಈ ಘಟನೆ ಚಿಕ್ಕ ವಯಸ್ಸಿನಲ್ಲಿ ನಮ್ಮ ಮನೆಯಲ್ಲಾದ ವಿಷಯವನ್ನು ನೆನಪಿಸುತ್ತಿದೆ. ಸಮಾಜದಲ್ಲಿರುವ ಮೇಲ್ಜಾತಿ-ಕೀಳ್ಜಾತಿ ಬೇಧಭಾವವನ್ನು ಕಿತ್ತೊಗೆಯಲು ಮಹಾತ್ಮಗಾಂಧಿಯವರು ತಮ್ಮದೇ ಆದ ಮಾರ್ಗವನ್ನನುಸರಿಸುತ್ತಿದ್ದರು. ಕಾಂಗ್ರೆಸ್ ಚಳುವಳಿಯ 1930-35 ರ ಕಾಲಘಟ್ಟದಲ್ಲಿ ತಕ್ಲಿ ಮತ್ತು ಚರಕ ನೂಲುವ ಜೊತೆಯಲ್ಲಿಯೇ ಹರಿಜನರ ಜೊತೆಯಲ್ಲಿ 'ಸಹಭೋಜನ' ಕಾರ್ಯಕ್ರಮಗಳು ನಡೆಯುತ್ತಿದ್ದವು.

ಎನ್.ಎಲ್.ಉಪಾಧ್ಯಾಯರು ಕಾಲೇಜಿನಲ್ಲಿ, ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ ಸ್ವಾತಂತ್ರ್ಯ ಸಂಗ್ರಾಮದತ್ತ ಆಕರ್ಷಿತರಾಗಿದ್ದವು. ನಮ್ಮ ಹಿರಿಯಣ್ಣನ ಆಶ್ರಯದಲ್ಲಿ ನಮ್ಮ ಅಭ್ಯಾಸ (ಮಂಗಳೂರಲ್ಲಿ). ಅವರು ಸಂಪ್ರದಾಯವಾದಿ ವೈದಿಕ ಬ್ರಾಹ್ಮಣರು, ದೇವ ಭಕ್ತರು. ಪೂಜೆ, ಸಂಧ್ಯಾವಂದನೆ ಮೊದಲಾದ ಆಚರಣೆಯಲ್ಲಿ ನಾವೂ ಪಾಲ್ಗೊಂಡವರೇ.

ಒಂದು ದಿವಸ ಎನ್.ಎಲ್.ಉಪಾಧ್ಯಾಯರು ಮಧ್ಯಾಹ್ನ ಊಟಕ್ಕೆ ಬರಲಿಲ್ಲ. ಸಂಜೆ ತಡವಾಗಿ ಮನೆ ಸೇರಿದರು. ಹಿರಿಯಣ್ಣನ ವಾಗ್ದಾಳಿಗೆ ತುತ್ತಾದರು. 'ಸಹಭೋಜನ' ಕಾರ್ಯಕ್ರಮದಿಂದಾಗಿ ಮಧ್ಯಾಹ್ನ ಮನೆ ಊಟಕ್ಕೆ ಬರಲಿಲ್ಲೆಂಬ ಅಂಶ ಹೊರಬಿತ್ತು. ಅದಕ್ಕೆ ಶಿಕ್ಷೆ ಏನು ಗೊತ್ತೆ? ಆ ದಿವಸ ಎನ್.ಎಲ್.ಅವರನ್ನು ಮನೆಯೊಳಗೆ ಬಿಡಲಿಲ್ಲ. ಮರುದಿವಸ ಅವರಿಗೆ ಹೊಸ ಜನಿವಾರ ತೊಡಿಸಿ, ಸ್ನಾನ ಮಾಡಿಸಿದ ನಂತರ ಮನೆಯೊಳಗೆ ಪ್ರವೇಶ. ಶೂದ್ರರು ಶೂದ್ರರೇ, ಅವರನ್ನು ಮುಟ್ಟಿಸಿಕೊಳ್ಳುವಂತಿಲ್ಲ. ಅವರು ಮಾರು ದೂರದಲ್ಲೇ ಇರಬೇಕು.

1956 ರಲ್ಲಿ ನಾನು ಪ್ರಥಮ ಸಲ ಬಿಜಾಪುರ ನಗರ ಸಭೆಗೆ ಸದಸ್ಯನಾಗಿ ಆರಿಸಿ ಬಂದೆ. ನಾನು ಮುನಿಸಿಪಲ್ ಕಾಮಗಾರ ಯೂನಿಯನ್ನಿನ ಅಧ್ಯಕ್ಷನಾಗಿದ್ದೆ. ಮುನಿಸಿಪಾಲಿಟಿ ಕೆಲಸಗಾರರ ಕುರಿತು(ಕಸಗುಡಿಸುವವರು, ಶೌಚಾಲಯ ಶುದ್ದೀಕರಿಸುವವರು) ತಕರಾರುಗಳ ಸುರಿಮಳೆ. ನಾನು ಆ ಕೆಲಸಗಾರರ ಸಂಘದ ಅಧ್ಯಕ್ಷನಾಗಿದ್ದುದರಿಂದ ನನಗೆ ಬುದ್ಧಿ ಕಲಿಸಬೇಕೆಂಬ ಇರಾದೆಯಿಂದ ನನ್ನನ್ನು ಸ್ಯಾನಿಟರಿ ಕಮಿಟಿ ಚಿರ್‌ಮನ್ ಮಾಡಿದರು. ಚೀರ್‌ಮನ್ ಆಗಿ ನಾನು ಕೆಲಸಗಾರರನ್ನು ಆಫೀಸಿಗೆ ಕರೆಸಿ ಕುರ್ಚಿಯಲ್ಲಿ ಕೂಡ್ರಿಸಿಕೊಂಡು ಚರ್ಚೆ ನಡೆಸುತಿದ್ದೆ. ಇದು ಇತರ ಸದಸ್ಯರಿಗೆ ಪಚನವಾಗುತ್ತಿರಲಿಲ್ಲ. ಆದರೆ ಅದನ್ನು ನುಂಗಿಕೊಂಡೇ ಇರಬೇಕಾಗುತ್ತಿತ್ತು. ನನ್ನನ್ನು ಕುರ್ಚಿಯಿಂದ ಇಳಿಸುವ ಧೈರ್ಯ ಯಾರಿಗೂ ಇರಲಿಲ್ಲ.

ಇವೆಲ್ಲ ಉದಾಹರಣೆ ಯಾಕೆ ಗೊತ್ತೆ? ಸ್ವಾತಂತ್ರ್ಯ ಪೂರ್ವದಲ್ಲಿದ್ದ ಊಳಿಗಮಾನ ಪದ್ಧತಿಯಲ್ಲಿ ಸ್ವಾತಂತ್ರ್ಯ ಪಡೆದು 51 ವರ್ಷವಾದರೂ ಶೂದ್ರರು, ದಲಿತರ ವಿಷಯದಲ್ಲಿ ಹೆಚ್ಚಿನ ಮೇಲ್ವರ್ಗದವರ ದೃಷ್ಟಿಯಲ್ಲಿ ಬದಲಾವಣೆಯಾಗಿಲ್ಲ. ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿರುವ ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ಸರಕಾರಗಳಲ್ಲಿ ಈ ರೀತಿಯ ದಬ್ಬಾಳಿಕೆ, ಭೇಧಭಾವ ಹರಿಜನರ, ಹಿಂದುಳಿದವರ ಜೊತೆಯಲ್ಲಿ ಇಲ್ಲದಂತಾಗಿರಬೇಕು. ನಮ್ಮ ರಾಜ್ಯದಲ್ಲಿ ನೆಲೆಸಿರುವ ಇಂಥ ಹೀನಾಯ ಅಭಿಪ್ರಾಯ, ನಿಲುವು, ಧೋರಣೆಗಳ ವಿರುದ್ಧ ಹೋರಾಟ ನಡೆಯಬೇಕು. ಆದಿಯಮ್ಮನಿಗಾದ ಗತಿ ಮರುಕಳಿಸದಂತೆ ನೋಡಿಕೊಳ್ಳಬೇಕು.

ಹಾನಗಲ್ ವಾರ್ತೆ

- ನಿತ್ಯಾನಂದ ಸ್ವಾಮಿ

ಹಿಂದೆ ಧಾರವಾಡ ಜಿಲ್ಲೆಗೆ ಸೇರಿದ್ದ ಹಾನಗಲ್ಲ ತಾಲೂಕ್ ಈಗ ಹಾವೇರಿ ಜಿಲ್ಲೆಯ ಭಾಗವಾಗಿದೆ. ಫಲವತ್ತಾದ ಭೂಮಿ, ನೂರಾರು ಸಣ್ಣ ದೊಡ್ಡ ಕೆರೆಗಳ ಮತ್ತು ವರ್ದಾ ಹಾಗೂ ಧರ್ಮ ನದಿಗಳ ಮಡಿಲ ಜಲ ನಿಧಿ ಮೊದಲಾದ ಪ್ರಕೃತಿಸಹಜ ಸೌಕರ್ಯಗಳನ್ನು ಹೊಂದಿದ್ದರೂ ಹಾನಗಲ್ಲ ತಾಲೂಕು ಆರ್ಥಿಕವಾಗಿ ಹಿಂದುಳಿದುಕೊಂಡು ಬಂದಿದೆ. ಇಲ್ಲಿ ಭೂಹಿಡುವಳಿದಾರರ ಸಂಖ್ಯೆ ಭೂಹೀನರ ಸಂಖ್ಯೆಗಿಂತ ಬಹಳ ಕಡಿಮೆ. ಭೂಹಿಡುವಳಿದಾರರಲ್ಲಿ ಅತೀ ಸಣ್ಣ ಹಿಡುವಳಿದಾರರ ಸಂಖ್ಯೆಯೇ ಹೆಚ್ಚು. ನೂರಕ್ಕೆ ಎಪ್ಪತ್ತರಷ್ಟು ಕುಟುಂಬಗಳು ಪ್ರತಿವರ್ಷ ಉದ್ಯೋಗ ಹುಡುಕಿಕೊಂಡು ಹೊರ ರಾಜ್ಯಗಳಲ್ಲಿ, ಹೊರ ಜಿಲ್ಲೆಗಳಲ್ಲಿ ಅಲೆಯುತ್ತಿರುತ್ತಾರೆ.

ಕೂಲಿಕಾರರ ಸಮ್ಮೇಳನ

1960 ದಶಕದಿಂದಲೇ ತಾಲೂಕಿನ ಬಡ ರೈತರು ಮತ್ತು ಭೂಹೀನ ಕೂಲಿಕಾರರು ತಮ್ಮ ಗ್ರಾಮಗಳ ಸುತ್ತಲು ಲಭ್ಯವಿರುವ ಸರ್ಕಾರಿ ಪಡಭೂಮಿಯನ್ನು ಅತಿಕ್ರಮಣ ಮಾಡಿ ಸಾಗುವಳಿ ಮಾಡುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಮಹಾನ್ ಕ್ರಾಂತಿಕಾರಿ ಎ.ಕೆ.ಗೋಪಾಲನ್ ಅವರ ಬದುಕು ಮತ್ತು ಭೆಟ್ಟಿಯಿಂದ ಪ್ರಭಾವಿತರಾದ ಅಕ್ಕಿಆಲೂರಿನ ಫಕೀರಪ್ಪ ಹೊತನಳ್ಳಿ ಮೊದಲಾದವರು ತಾಲೂಕಿನಲ್ಲಿ ಭೂ ಆಕ್ರಮಣ ಚಳುವಳಿಗೆ ನೇತೃತ್ವ ನೀಡಿದ್ದರು. ಕರ್ನಾಟಕದಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘವು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭ ವಾದಂದಿನಿಂದ ಹಾನಗಲ್ಲ ತಾಲೂಕಿನ ಭೂಚಳುವಳಿ ಹೆಚ್ಚೆಚ್ಚು ವ್ಯವಸ್ಥಿತಗೊಳ್ಳತೊಡಗಿದ್ದು ಕಳೆದ ಮೇ 1 ರಂದು. ಕೂಲಿಕಾರರ ಸಂಘದ 2ನೇ ತಾಲೂಕ ಮಟ್ಟದ ಸಮ್ಮೇಳನ ವನ್ನು ಯಶಸ್ವಿಯಾಗಿ ನಡೆಸಲಾಯಿತು. ಕಳೆದ ಐದಾರು ವರ್ಷಗಳಲ್ಲಿ ತಾಲೂಕಿನಲ್ಲಿ ತೀವ್ರಗೊಂಡ ಭೂ ಚಳುವಳಿಯ ನೇತೃತ್ವವಹಿಸಿ ಒಮ್ಮೆ ಧಾರವಾಡ ಕಾರಾಗೃಹ ದಲ್ಲಿ ಮತ್ತೊಮ್ಮೆ ಬೆಳಗಾಂವ ಕೇಂದ್ರ ಕಾರಾಗೃಹದಲ್ಲಿ ಜೈಲುವಾಸ ಅನುಭವಿಸಿದ್ದ ಕೂಲಿಕಾರರ ಸಂಘದ ತಾಲೂಕ ಅಧ್ಯಕ್ಷರಾದ ಹಕ್ಕಲಗೌಡ ಪಾಟೀಲರು ಸಮ್ಮೇಳನದ ಅಂಗವಾಗಿ ಅಖಿಲ ಭಾರತ ಕೃಷಿಕೂಲಿಕಾರರ ಸಂಘ (AIAWU) ದ ಧ್ವಜವನ್ನು ಆರೋಹಣ ಮಾಡಿದರು. ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿಯವರು ಈ ಸಂದರ್ಭದಲ್ಲಿ ಮಾತನಾಡುತ್ತಾ "ಇಂದು ಮೇ ದಿನ. ಎಲ್ಲಾ ವಿವಿಧ ಸುಲಿಗೆಯ ವಿರುದ್ಧ ಹೋರಾಟವನ್ನು ಮುನ್ನಡೆಸಲು ವಿಶ್ವದ ಕಾರ್ಮಿಕ ವರ್ಗ ಪಣತೊಡುವ ದಿನ. ಕೃಷಿ ಕೂಲಿಕಾರರೂ ಕೂಡ ಕಾರ್ಮಿಕ ವರ್ಗದ ಅವಿಭಾಜ್ಯ ಅಂಗವಾಗಿದ್ದು ಕಾರ್ಮಿಕ ವರ್ಗದ ದಿನದಂದು ನಾವು ಕೂಲಿಕಾರರ ತಾಲೂಕ ಸಮ್ಮೇಳನ ನಡೆಸುತ್ತಿರುವುದು ಸೂಕ್ತವಾಗಿದೆ" ಎಂದರು.

ಕಛೇರಿ ಉದ್ಘಾಟನೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಧ ಹಾನಗಲ್ಲ ತಾಲೂಕ ಸಮಿತಿಯ ಕಛೇರಿಯನ್ನು ಇದೇ ಸಂದರ್ಭದಲ್ಲಿ ಉದ್ಘಾಟಿಸಲಾಯಿತು. " ಕಛೇರಿಯ ನಾಮಫಲಕವನ್ನು ಅನಾವರಣಗೊಳಿಸಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ಜಿ.ಎನ್. ನಾಗರಾಜ್ ಮಾತನಾಡುತ್ತಾ "ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಕಾಯಕ ಜೀವಿಗಳು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಸ್ಥಾಪಿಸಿದ್ದ ಮಹಾಮನೆಯಂತೆ ಹಾನಗಲ್ಲ ತಾಲೂಕಿನ ಹೋರಾಟನಿರತ ಕೂಲಿಕಾರರಿಗೆ ಈ ಕಛೇರಿ ಮಹಾಮನೆ ಯಾಗಲಿ. ಕೂಲಿಕಾರರು ತಮ್ಮ ಬದುಕನ್ನು ಹಸನಗೊಳಿಸಲು ಕೈಕೊಳ್ಳಬೇಕಾಗುವ ಎಲ್ಲ ಹೋರಾಟಗಳಿಗೆ ಇದು ಗರಡಿಮನೆಯಾಗಲಿ" ಎಂದು ಹಾರೈಸಿದರು.

ಮೇ 31 ರ ಪ್ರದರ್ಶನ


ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 2ನೇ ರಾಜ್ಯ ಸಮ್ಮೇಳನದ ಕರೆಯ ಮೇರೆಗೆ 31-5-99 ರಂದು ಹಾನಗಲ್ಲಿನಲ್ಲಿ ಕೂಲಿಕಾರರು ಮೆರವಣಿಗೆ ಮತ ಪ್ರದರ್ಶನ ನಡೆಸಿದರು. ತಾಲೂಕ ತಹಶಿಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾದ ಮನವಿಯಲ್ಲಿ ಎಲ್ಲ ಅಕ್ರಮ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಬೇಕೆಂದೂ ನಮೂನೆ 53 ರಲ್ಲಿ ಸಲ್ಲಿಸಲಾದ ಮನವಿಗಳನ್ನು ಕೂಡಲೇ ಇತ್ಯರ್ಥಗೊಳಿಸಬೇಕೆಂದೂ, ಕೂಲಿಕಾರರ ಮೇಲೆ ಹೂಡಲಾದ ಎಲ್ಲ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕೆಂದೂ, ಅರಣ್ಯ ಇಲಾಖೆಯವರು ಕೂಲಿಕಾರರ ವಿರುದ್ಧ ನೀಡುವ ಸುಳ್ಳು ದೂರುಗಳನ್ನು ಪೋಲಿಸರು ದಾಖಲು ಮಾಡಿಕೊಳ್ಳಬಾರದೆಂದೂ ವಸತಿ ಹೀನ ಕೂಲಿಕಾರರಿಗೆ ನಿವೇಶನಗಳನ್ನು ಒದಗಿಸಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಆಗ್ರಹಿಸಲಾಗಿದೆ. ಅನಂತರ ನಡೆದ ಸಭೆಯಲ್ಲಿ ನಿತ್ಯಾನಂದ ಸ್ವಾಮಿ, ಹಕ್ಕಲಗೌಡ ಪಾಟೀಲ್, ಎಂ.ಜಿನ್ನಾ, ಚಂದ್ರಶೇಖರ್ ಚೌಟಿ, ಅಲ್ಲದೆ ರೈತ ಸಂಘಧ ಸಿ.ಎಂ.ಪಾಟೀಲ್ ಮತ್ತು ಎಸ್. ಎಫ್. ಐ.ನ ವಿಜಯ ಕುಮಾರ್ ದೊಡ್ಡಮನಿ ಮಾತನಾಡಿದರು.

ರಾಜ್ಯ ಸಮಿತಿ ಸಭೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಧ ನೂತನ ರಾಜ್ಯ ಸಮಿತಿಯ ಎರಡು ದಿನಗಳ ಸಭೆಯು ಸಂಘದ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಹಾನಗಲ್ಲಿನಲ್ಲಿ ಜೂನ್ 7 ಮತ್ತು 8 ರಂದು ನಡೆಯಿತು. ಸಭೆಯು ರಾಜ್ಯ ಸಮ್ಮೇಳನದ ತೀರ್ಮಾನಗಳ ಜಾರಿಯ ಕುರಿತು ವಿಮರ್ಶೆ ಮಾಡಿತಲ್ಲದೆ ಸದಸ್ಯತ್ವ ನೊಂದಾಯಿಸುವ ಹಾಗೂ ಭೂ ಹೋರಾಟವನ್ನು ತೀವ್ರಗೊಳಿಸುವ ಕುರಿತು ತೀರ್ಮಾನ ಕೈಗೊಂಡಿತು.

ರಾಜ್ಯ ಸಮಿತಿ ಸಭೆಯ ಅಂಗವಾಗಿ ಜೂನ್ 7 ರಂದು ಸಂಜೆ ಬೆಳಗಾಲಪೇಟೆ ಎಂಬ ಗ್ರಾಮದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಗ್ರಾಮ ಘಟಕದ

ಪುಟ 10 ನೋಡಿ



ಜ್ಯೋತಿಬಸು ಆತ್ಮಕಥನ
ಧಾರಾವಾಹಿ 5

ಭಾರತದ ದುಡಿಯುವ ಅಪ್ರತಿಮ ನೇತಾರನ ಐದು ದಶಕಗಳಿಗೂ ಮೀರಿದ 'ಮಾಸದ ನೆನಪು' ಗಳಲ್ಲಿ ಇದುವರೆಗೆ ಬಾಲ್ಯದಲ್ಲಿ ರಾಷ್ಟ್ರೀಯವಾದಿ ಆಂದೋಲನದ ಪರಿಚಯ, ಬ್ರಿಟನ್ನಿನಲ್ಲಿ ಅಂತರ್ರಾಷ್ಟ್ರೀಯ ರಾಜಕೀಯದ ಪರಿಚಯ, ಸಮಾಜವಾದ ಕಮ್ಯುನಿಸಂನತ್ತ ಒಲವಿನೊಂದಿಗೆ ಲಂಡನ್ ಬಿಟ್ಟು ಸ್ವದೇಶಕ್ಕೆ ಮರಳಿದಾಗಿನ ಪರಿಸ್ಥಿತಿಯ ಬಗ್ಗೆ ಓದಿದ್ದಿರಿ. ಮುಂದೆ.......

ಮರಳಿ ತಾಯ್ನಾಡಿನಲ್ಲಿ

ಬ್ಯಾರಿಸ್ಟರ್ ಇಲ್ಲ; ಹೋರಾಟದ ಸಾಗರದಲ್ಲಿ

ಸ್ಕಾಟ್ಲೆಂಡ್ ಯಾರ್ಕ್ ಪತ್ತೇದಾರರು ನಮ್ಮ ಬೆನ್ನ ಹಿಂದೆ ಬಿದ್ದಿದ್ದಾರೆ ಎಂಬ ಅನುಮಾನ ನಮಗಿತ್ತು. ಆದ್ದರಿಂದ ಸಹಜವಾಗಿಯೇ ನಾವು ಜಾಗ್ರತರಾದೆವು. ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಎಂಬ ಪುಸ್ತಕವನ್ನು ನಮ್ಮ ಜೊತೆ ಪ್ರಯಾಣಿಸುತ್ತಿದ್ದ ಒಬ್ಬ ಮಹಿಳೆ ಜೊತೆ ಇಟ್ಟಿದ್ದು ಭಾರತ ತಲುಪಿದ ಮೇಲೆ ಆಕೆ ಅದನ್ನು ಮರಳಿಸಿದರು. ಉಳಿದ ಪ್ರತ್ರಿಕೆಗಳು ನಮ್ಮ ಹತ್ತಿರವೇ ಇದ್ದವು. ನಾವು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗಲಿಲ್ಲ ಎಂಬುದು ಭಾರತಕ್ಕೆ ಮರಳಿದಾಗ ನಮಗೆ ಗೊತ್ತಾಯಿತು. ಹಡಗು ಮುಂಬೈಯಿ ಬಂದು ತಲುಪುತ್ತಲೇ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಅದೃಷ್ಟವಶಾತ್ ಸಿ.ಪಿ.ಎಸ್.ಯು ಇತಿಹಾಸ ಪುಸ್ತಕ ಸುರಕ್ಷಿತವಾಯಿತು.

ಕಮ್ಯೂನಿಸ್ಟ್ ಪಕ್ಷದ ಪೂರ್ಣ ಕಾಲದ ಕಾರ್ಯಕರ್ತರಾಗಬೇಕೆಂದು ನಾವು ಆಗಲೇ ತೀರ್ಮಾನಿಸಿದೆವು. ನಮ್ಮ ಪ. ಕಿ., ಭೂತೇಶ್ ಗುಪ್ತ, ಎಂ.ಕೆ. ಮಂಗಳಂ, ಅರುಣ್ ಬೋಸ್ ಮತ್ತು ಮೊದಲಾದವರನ್ನು 1940 ರಲ್ಲಿ ಮುಂಬೈಯಲ್ಲಿ ನಮ್ಮ ಪಕ್ಷದ ನಾಯಕರನ್ನು ಬೇಟಿಯಾದೆವು. ಸ್ವಾಮಿ ಸಹಜಾನಂದ ಭಾಷಣ ಮಾಡಲಿರುವ ಸಾರ್ವಜನಿಕ ಸಭೆಯೊಂದಕ್ಕೆ ಅವರು ನನಗೆ ಸೂಚಿಸಿದರು. ನಾನು ಅಲ್ಲಿಗೆ ಹೋದೆ ಅದೊಂದು ಬೃಹತ್ ರ್‍ಯಾಲಿಯಾಗಿತ್ತು.

1940 ರಲ್ಲಿ ಕಲ್ಕತ್ತದಲ್ಲಿ ನಾನು ಪಕ್ಷದ ನಾಯಕರ ಜತೆ ಸಂಪರ್ಕ ಬೆಳೆಸಿದೆ. ಪಕ್ಷದ ನಿರ್ದೇಶನದ ಮೇರೆಗೆ ನಾನು ಭೂಗತನಾಗಲಿಲ್ಲ. ಆದರೆ ಭೂಗತರಾಗಿದ್ದವರ ಜತೆ ಸಂಪರ್ಕ ಇಟ್ಟುಕೊಳ್ಳುವುದು ನನ್ನ ಮುಖ್ಯ ಕೆಲಸಗಳಲ್ಲಿ ಒಂದಾಗಿತ್ತು.

ಕಲ್ಕತ್ತ ಹೈಕೋರ್ಟಿನಲ್ಲಿ ನಾನು ಬ್ಯಾರಿಸ್ಟರ್ ಆಗಿ ನೊಂದಾಯಿಸಿಕೊಂಡೆ. ಆದರೆ ಬ್ಯಾರಿಸ್ಟರ್ ಆಗಿ ನಾನು ಯಾವತ್ತೂ ಪ್ರಾಕ್ಟೀಸ್ ಮಾಡಲೇ ಇಲ್ಲ. ಯಾಕೆಂದರೆ ಭೂಪೇಶ್ ಮತ್ತು ನನ್ನಂಥ ಕೆಲವರು ಆಗಲೇ ನಮ್ಮನ್ನು ಪಕ್ಷಕ್ಕೆ ಸಮರ್ಪಿಸಿಕೊಂಡಿದ್ದೆವು. ಇದರಿಂದ ತಂದೆಗೆ ಅತೃಪ್ತಿಯಾಗಿದ್ದು ಸ್ಪಷ್ಟವಾಗಿತ್ತು. ನಾನು ಪ್ರಾಕ್ಟೀಸ್ ಮಾಡಿ ಜೀವನ ನಿರ್ವಹಣೆಗಾಗಿ ಸಂಪಾದಿಸಬೇಕೆಂಬುದು ಅವರ ಬಯಕೆಯಾಗಿತ್ತು. ಏನಿದ್ದರೂ ಅವರೊಬ್ಬ ಉದಾರವಾದಿಯಾಗಿದ್ದರು. ನಾನು ಪ್ರಾಕ್ಟೀಸ್ ಮಾಡುವುದಿಲ್ಲ ಮತ್ತು ಅದೇ ವೇಳೆಗೆ ರಾಜಕೀಯ ಜೀವನ ಸಾಗಿಸುತ್ತೇನೆ ಎಂಬುದಷ್ಟೆ ಅವರಿಗಿದ್ದ ಅತೃಪ್ತಿಯಾಗಿತ್ತು. ದೇಶಬಂಧು ಚಿತ್ತರಂಜನ್‌ದಾಸ್ ಅವರೇ ಹೀಗೆ ಮಾಡಿರುವಾಗ, ನಾನು ಹೇಗೆ ಬೇರೆಯಾಗಿರಲು ಸಾಧ್ಯ?.

ನನಗೆ ಒಂದು ಘಟನೆ ನೆನಪಾಗುತ್ತದೆ. ಒಂದು ದಿನ ಇದ್ದಕ್ಕಿದ್ದಂತೆ ಭೂಗತರಾಗಿದ್ದ ಮೂವರು ಮುಖಂಡರಾದ ಕಾಕಾಬಾಬು(ಮುಜಾಫರ್ ಅಹಮದ್) ಸರೋಜ್ ಬಾಬು(ಸರೋಜ್ ಮುಖರ್ಜಿ) ಮತ್ತು ಪಂಚು ಗೋಪಾಲ್ ಚೌಧುರಿ ಹಿಂದೂಸ್ತಾನ್ ಪಾರ್ಕ್‌ನಲ್ಲಿನ ನಮ್ಮ ಮನೆಯಲ್ಲಿ ನಡೆದ ಸಭೆ ವೇಳೆ ತಮ್ಮ ಮೇಲೆ ಸರಕಾರದ ಕಣ್ಣುಬಿದ್ದಿದ್ದು ತಾವೆಲ್ಲರೂ ನೆಲೆಯನ್ನು ಬದಲಾಯಿಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು. ನಾನು ತಕ್ಷಣವೇ ಅವರನ್ನು ಡೋವರ್ ಲೇನ್‌ನಲ್ಲಿನ ಗೆಳೆಯರೆಲ್ಲರ ಮನೆಗೆ ಕರೆದುಕೊಂಡು ಹೋದೆ. (ಈ ಮಿತ್ರ ಕೇಂದ್ರ ಸರಕಾರದ ಅನೇಕ ಸಂಸ್ಥೆಗಳ ಅಧ್ಯಕ್ಷ) ನಿದ್ದೆ ಮಾಡಿದ್ದ ಆತನನ್ನು ಎಚ್ಚರಿಸಿದೆ. ಆತ ತುಂಬಾ ಸೌಜನ್ಯದಿಂದ ವರ್ತಿಸಿ ನಮ್ಮ ನಾಯಕರನ್ನು ಅತಿಥಿಗಳಂತೆ ಉಪಚರಿಸಿದ ಆ ಮೇಲೆ ಬೇರೊಂದು ತಾಣವನ್ನು ನೋಡಿದ ನಂತರ ಡೋವರ್ ಲೇನ್‌ನಿಂದ ಮೂವರೂ ನಾಯಕರು ಸ್ಥಳಾಂತರಗೊಂಡರು.

1941 ಜೂನ್‌ನಲ್ಲಿ ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಆಕ್ರಮಣ ಮಾಡಿದ ನಂತರ ಯುದ್ಧದ ಸ್ವರೂಪದಲ್ಲಿ ಭಾರೀ ಬದಲಾವಣೆ ಆಯಿತು. ಸಾಮ್ರಾಜ್ಯಶಾಹಿ ಸ್ವರೂಪವಿದ್ದ ಯುದ್ಧ ಜನರ ಯುದ್ಧವಾಗಿ ಪರಿವರ್ತನೆಗೊಂಡಿತು. ಜೈಲಿನಲ್ಲಿದ್ದ ನಮ್ಮ ನಾಯಕರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಯುದ್ಧದ ಸ್ವರೂಪ ಬದಲಾದ್ದರಿಂದ ನಮ್ಮ ತಂತ್ರವನ್ನು ಬದಲಾಯಿಸಿಕೊಳ್ಳಬೇಕಾಯಿತು. ಹೊರಗಿದ್ದವರಲ್ಲಿ ಇದೀಗ ಇದು ಜನತಾಯುದ್ಧವಾಗಿದೆ ಎಂದು ಮನವರಿಕೆ ಮಾಡಿಕೊಂಡವರ ಪೈಕಿ ನಾನೂ ಒಬ್ಬನಾಗಿದ್ದೆ.

ಸೋವಿಯತ್ ಒಕ್ಕೂಟದ ಮಿತ್ರರು (ಎಫ್‌ಎಸ್‌ಯು) ಮತ್ತು ಲೇಖಕರು ಹಾಗೂ ಕಲಾವಿದರುಳ್ಳ ಫ್ಯಾಸಿಸ್ಟ್ ವಿರೋಧಿ ಬುದ್ಧಿಜೀವಿಗಳ ಸಂಘವೊಂದನ್ನು ರಚಿಸಲಾಯಿತು. ನಾನು ಅದರ ಮೊದಲ ಕಾರ್ಯದರ್ಶಿಯಾದೆ. ಈ ಎರಡೂ ಸಂಸ್ಥೆಗಳ ಕಛೇರಿ ಧರ್ಮತಲಾ ರಸ್ತೆಯ 46 ನೇ ಸಂಖ್ಯೆಯ ಮನೆಯಲ್ಲಿತ್ತು.

ನನ್ನ ಮದುವೆ ಬಗ್ಗೆ ಮನೆಯಲ್ಲಿ ತುಂಬಾ ಚರ್ಚಿಸುತ್ತಿದ್ದರು. ನಾನು ಈ ವಿಚಾರವಾಗಿ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಮದುವೆ ವಿಷಯವಾಗಿ ದೀರ್ಘ ಹಾಗೂ ಕಷ್ಟದ ಹೋರಾಟ ನಡೆಸಬೇಕಾಗುವುದೆಂದು ನನಗೆ ಗೊತ್ತಿತ್ತು. ಆದರೆ ಏನೋ ಎಂತೋ ನಾನು ಮದುವೆಯಾದೆ. ಅಮುಕುಲ ಘೋಷ್ ನನ್ನ ಮಾವನವರ ಹೆಸರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲೀಷ್ ಕಲಿಸುತ್ತಿದ್ದ ಪ್ರೊ. ಪ್ರಫುಲ್ಲಾ ಘೋಷ್ ಆ ಕುಟುಂಬದ ಭಾಗವಾಗಿದ್ದರು. ನನ್ನ ಮದುವೆಯಾದ ಕೆಲವೇ ದಿನಗಳಲ್ಲಿ ನನ್ನ ಹೆಂಡತಿ ನಿಧನಳಾದಳು. 1941ರಲ್ಲಿ ನನ್ನ ತಾಯಿ ಮೃತಪಟ್ಟರು. ಹೈಕೋರ್ಟ್ ಬಾರ್ ಲೈಬ್ರರಿಯಲ್ಲಿ ಕುಳಿತಿದ್ದಾಗ ತಂದೆ ಬಂದು ಈ ವಿಷಯ ತಿಳಿಸಿದರು. ನನ್ನ ಅಣ್ಣ ಅಂತಿಮ ವಿಧಿಗಳನ್ನು ನೆರವೇರಿಸಿದ. ಸಂಪ್ರದಾಯಕ್ಕೆ ಕಟ್ಟು ಬೀಳಬೇಕು ಹಾಗೂ ಸಸ್ಯಹಾರವನ್ನೇ ತಿನ್ನಬೇಕು ಎಂದೇನೂ ಇಲ್ಲ ಎಂದು ಸ್ವತಃ ತಂದೆಯೇ ನನಗೆ ಹೇಳಿದರು. ನನಗೆ ಬೇರೆ ದಾರಿಯೇ ತೋಚುತ್ತಿರಲಿಲ್ಲ. ಆಗ ತಂದೆಯೇ ನನ್ನ ಬೆಂಬಲಕ್ಕಿದ್ದರಿಂದ ನನ್ನ ಬಲ ಇಮ್ಮಡಿಗೊಂಡಿತು.

ಲಂಡನ್‌ನಿಂದ ಮರಳಿ ಬಂದ ಕೆಲವೇ ದಿನಗಳಲ್ಲಿ ಪೂರ್ಣಕಾಲದ ಕಾರ್ಯಕರ್ತನಾಗಿ ನನ್ನ ಜೀವನ ಆರಂಭವಾಗಿತ್ತು.

ಬ್ರಿಟಿಷ್ ಆಡಳಿತದ ವೇಳೆ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದಾಗ ನಮ್ಮ ಹಿಂದೂಸ್ತಾನ್ ರಸ್ತೆಯ ನಿವಾಸದಲ್ಲಿ ಗುಪ್ತ ಸಭೆಗಳು ನಡೆಯುತ್ತಿದ್ದವು. ಭೂಗತ ನಾಯಕರು ಕೂಡ ಇಲ್ಲಿ ಆಶ್ರಯ ಪಡೆದಿದ್ದರು. ನನ್ನ ಹೆತ್ತವರಿಗೆ ಇದು ಗೊತ್ತಿದ್ದರೂ ಅವರು ಇದನ್ನು ಆಕ್ಷೇಪಿಸಿರಲಿಲ್ಲ. ಭೂಗತ ನಾಯಕರ ಜತೆ ಸಂಪರ್ಕ ಇಟ್ಟುಕೊಳ್ಳುವುದು, ಅವರಿಗೆ ನೆಲೆಗಳನ್ನು ನಿಗದಿಪಡಿಸುವುದು ಹಾಗೂ ರಹಸ್ಯ ಸಭೆಗಳನ್ನು ವ್ಯವಸ್ಥೆಗೊಳಿಸುವುದು ನನ್ನ ಮುಖ್ಯ ಕಾರ್ಯಭಾರವಾಗಿತ್ತು.

ಮೂಲಭೂತವಾಗಿ ಇದೊಂದು ಸಂವಹನ (communications) ಕೆಲಸವಾಗಿತ್ತು. ಲಂಡನ್‌ನಲ್ಲಿದಾಗಲೇ ಕೊನೆಯ ದಿನಗಳಲ್ಲಿ ಕಮ್ಯುನಿಸ್ಟ್ ಒಲವಿದ್ದ ಒಬ್ಬ ಬ್ಯಾರಿಸ್ಟರ್ ಜತೆ ನಾನು ಸಂಪರ್ಕ ಬೆಳೆಸಿದ್ದೆ ಕಲ್ಕತ್ತಕ್ಕೆ ಮರಳಿದ ಮೇಲೆ ಪುನಃ ಸಂಪರ್ಕ ಬೆಳೆಸಿದೆ. ಕೆಲವು ಭೂಗತ ನಾಯಕರಿಗೆ ಆಶ್ರಯ ಕಲ್ಪಿಸುವ ಮೂಲಕ ಅವರು ಸ್ವಲ್ಪ ಅಪಾಯಕಾರಿ ಹೊಣೆಯನ್ನು ಹೊತ್ತುಕೊಂಡರು. ದಕ್ಷಿಣ ಕಲ್ಕತ್ತದಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆದು ಅದನ್ನೇ ರಹಸ್ಯ ನೆಲೆಯನ್ನಾಗಿ ಮಾಡಿಕೊಂಡೆವು. ಆದರೆ ಕೆಲವೇ ತಿಂಗಳಲ್ಲಿ ಈ ಬ್ಯಾರಿಸ್ಟರ್ ಮಿತ್ರ ಕೈಕೊಡುತ್ತಿರುವ ವಿಚಾರ ನಮಗೆ ಗೊತ್ತಾಯಿತು. ನಾವು ಆತನ ಜತೆ ಸಂಪರ್ಕ ಕಡಿದುಕೊಂಡೆವು ಹಾಗೂ ಆತನ ಹೆಸರಿನಲ್ಲಿ ಬಾಡಿಗೆ ಪಡೆದಿದ್ದ ಆ ಮನೆಯನ್ನು ಬಿಟ್ಟು ಬಿಟ್ಟೆವು. ಈ ಘಟನೆಯ ನಂತರ ಆ ಮಿತ್ರ ಸಿದ್ಧಾಂತಗಳನ್ನು ಬಿಟ್ಟನು.

ಪಕ್ಷಕ್ಕೆ ನಾನು ಹಣವನ್ನು ಸಂಗ್ರಹಿಸುತ್ತಿದ್ದೆ. ಅನೇಕ ಉನ್ನತ ಅಧಿಕಾರಿಗಳ ಸಹಿತ ಪಕ್ಷದ ಬಹಳಷ್ಟು ಅಭಿಮಾನಿಗಳು ನನ್ನ ಮೂಲಕ ಉದಾರ ಕೊಡುಗೆ ನೀಡುತ್ತಿದ್ದರು. ನಾನು ಪಕ್ಷದ ತರಗತಿಗಳನ್ನು ನೀಡುತ್ತಿದ್ದೆ. ಹಾಗೂ ನಾನಾ ಸಭೆಗಳಲ್ಲಿ ಭಾಷಣವನ್ನು ಮಾಡುತ್ತಿದ್ದೆ.

ಸೋವಿಯತ್ ಒಕ್ಕೂಟದ ಮೇಲೆ ಹಿಟ್ಲರ್ ದಾಳಿ ನಡೆಸಿದ್ದರಿಂದ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಒಂದು ಗುಣಾತ್ಮಕ ಬದಲಾವಣೆ ಆಯಿತು. ಸೋವಿಯತ್ ಒಕ್ಕೂಟ, ಬ್ರಿಟನ್ ಮತ್ತು ಅಮೇರಿಕ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ಮಿತ್ರ ಪಕ್ಷಗಳಾದವು. ನಮ್ಮ ಪಕ್ಷದ ಹಲವು ನಾಯಕರು ಸೆರೆಮನೆಯಲ್ಲಿದ್ದರು, ಕೆಲವರು ಭೂಗತರಾಗಿದ್ದರು. ಯುದ್ಧದ ಸ್ವರೂಪ ಬದಲಾಗಿರುವುದರಿಂದ ಫ್ಯಾಸಿಸಂ ವಿರುದ್ಧ ಪೂರ್ಣಪ್ರಮಾಣದ ಹೋರಾಟ ನಡೆಸಲು ಇದು ಸಕಾಲ ಎಂದು ಪಕ್ಷದ ನಾಯಕತ್ವ ನಿರ್ಧರಿಸಿತು. ಫ್ಯಾಸಿಸಂನ ಸೋಲು ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೇತನ ನೀಡಲಿತ್ತು.

ಸೋವಿಯತ್ ಒಕ್ಕೂಟದ ಮೇಲಿನ ದಾಳಿಯ ಆರಂಭದಲ್ಲಿ ನಾಜಿಗಳು ಪಡೆದ ಗಮನಾರ್ಹ ಯಶಸ್ಸಿನಿಂದ ಸಮಾಜವಾದದ ಶತ್ರುಗಳು ಉತ್ತೇಜಿತಗೊಂಡರು. ಬೋಲ್ಶೆವಿಸಂ ಕೊನೆಗೊಳ್ಳಲಿದೆ ಎಂದವರು ಭಾವಿಸಿದರು. ಆಗ ಸೋವಿಯತ್ ಒಕ್ಕೂಟ ಗೆದ್ದೇ ಗೆಲ್ಲುತ್ತದೆಂದು ವಿಶ್ವಾಸ ನಮಗಿತ್ತು. ಏನೆಂದರೂ ಸಮಾಜವಾದವನ್ನು ಸೋಲಿಸುವ ಶಕ್ತಿಯೇ ಈ ಇಳೆಯಲ್ಲಿ ಇಲ್ಲ ನೋಡಿ. ಸೋವಿಯತ್ ಒಕ್ಕೂಟದ ಗೆಲುವು ಅಷ್ಟು ಸುಲಭದ ಮಾತಲ್ಲ ಎನ್ನುವುದೂ ನಮಗೆ ಗೊತ್ತಿತ್ತು. ಸ್ವತಂತ್ರ ಭಾರತವಷ್ಟೇ ಫ್ಯಾಸಿಸಂನ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಬಲ್ಲದು ಎಂಬ ಸಿದ್ಧಾಂತವನ್ನು ನಮ್ಮ ಪಕ್ಷ ದೃಢವಾಗಿ ನೆಚ್ಚಿತ್ತು.

ಆದರೆ ಅಧಿಕಾರವನ್ನು ಹಸ್ತಾಂತರಿಸಲು ಬ್ರಿಟಿಷ್ ಸರಕಾರ ಇನ್ನೂ ಸಿದ್ಧವಿರಲಿಲ್ಲ. ದೇಶ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಸ್ವಾತಂತ್ರ್ಯದ ವಿಚಾರದಲ್ಲಿ ರಾಜಕೀಯ ರಂಗದಲ್ಲಿ ಗೊಂದಲದ ವಾತಾವರಣವಿತ್ತು.

1942 ಆಗಸ್ಟ್ 9 ರಂದು ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳುವಳಿ ಆರಂಭವಾಗುವುದಕ್ಕೆ ಸ್ವಲ್ಪವೇ ಮೊದಲು ಬ್ರಿಟಿಷ್ ಆಡಳಿತ ತನ್ನದೇ ಆದ ಹಿತಕ್ಕಾಗಿ ಕೆಲವು ಕೆಲಸ ಮಾಡಲೇಬೇಕಾಗಿತ್ತು. ಒತ್ತಡಕ್ಕೆ ಒಳಪಟ್ಟಿತ್ತು. ಅಂಡಮಾನ್ ದ್ವೀಪಗಳಲ್ಲಿ ಮರಣದಂಡನೆಗೆ ಒಳಗಾದ ಕೈದಿಗಳಾಗಿದ್ದ ಕೆಲವರು ಫ್ಯಾಸಿಸಂ ಖಂಡಿಸಿ ಕರಪತ್ರವೊಂದನ್ನು ಹೊರಡಿಸಿದರು. ಸರಕಾರ ಅವರನ್ನು ಬಿಡುಗಡೆಗೊಳಿಸಲಿಲ್ಲ. ಆದರೆ ಬ್ರಿಟಿಷ್ ಆಡಳಿತಗಾರರು ಆ ಕರಪತ್ರವನ್ನು ಮುಕ್ತವಾಗಿ ವಿತರಿಸಿದರು. ಫ್ಯಾಸಿಸ್ಟ್-ಜಪಾನಿ ಕೂಟದ ವಿರುದ್ಧ ಸ್ವತಂತ್ರ ಭಾರತ ಯಾವುದೇ ಹೋರಾಟ ನಡೆಸಬಲ್ಲದು ಎಂದು ನೆಹರೂರಂಥ ರಾಷ್ಟ್ರೀಯವಾದಿ ನಾಯಕರು ಘೋಷಿಸಿದರು. ಆದರೆ ಬ್ರಿಟಿಷ್ ಆಳರಸರು ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಮನೋಸ್ಥಿತಿಯಲ್ಲಿ ಇರಲಿಲ್ಲ. 1942 ಆಗಸ್ಟ್ 9 ರಂದು ಗಾಂಧಿ, ನೆಹರೂ ಮೌಲಾನ ಅಜಾದ್ ಮತ್ತಿತರ ಕಾಂಗ್ರೆಸ್ ಧುರೀಣರನ್ನು ಬಂಧಿಸಲಾಯಿತು. ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಈ ಚಳುವಳಿಯಿಂದಾಗಿ ಫ್ಯಾಸಿಸಂ ವಿರೋಧಿ ಹೋರಾಟ ದುರ್ಬಲವಾಗುತ್ತದೆಂಬ ಕಾರಣಕ್ಕಾಗಿ ಆ ಕಾಲಘಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷ ಆ ಆಂದೋಲನವನ್ನು ವಿರೋಧಿಸಿತು. ಫ್ಯಾಸಿಸಂ ಜಪಾನಿ ಕೂಟದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸುವಂತಾಗಲು ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡುವಂತೆ ನಾವು ಒತ್ತಾಯಿಸಿದೆವು.


ಆ ಕಾಲಘಟ್ಟದಲ್ಲಿ ಪಕ್ಷ ತೀವ್ರ ವಿರೋಧವನ್ನು ಹಾಗೂ ತಕ್ಷಣ ಟೀಕೆಯನ್ನು ಎದುರಿಸಿತು. ನಮ್ಮ ಪಕ್ಷದ ಅನೇಕ ಕಚೇರಿಗಳ ಮೇಲೆ ಆಕ್ರಮಣ ನಡೆಯಿತು. ಹಾಗೂ ಅಸಂಖ್ಯಾತ ಸಂಗಾತಿಗಳ ಮೇಲೆ ಫ್ಯಾಸಿಸ್ಟ್ ರೀತಿಯಲ್ಲೇ ದೈಹಿಕ ಹಲ್ಲೆ ನಡೆಯಿತು. ಆದರೆ ಅದಕ್ಕೆಲ್ಲಾ ಜಗ್ಗದ ನಾವು ಸಾರ್ವಜನಿಕ ಸಂಪರ್ಕ ಕಾರ್ಯಕ್ರಮವನ್ನು ಮುಂದುವರೆಸಿದೆವು. 1943ರ ಬರಗಾಲದ ವೇಳೆ ಅಂದಿನ ಅವಿಭಜಿತ ಬಂಗಾಲದಲ್ಲಿ ಪರಿಹಾರ ಕಾರ್ಯಕ್ರಮವನ್ನು ಸಂಘಟಿಸಿದೆವು. ನಮ್ಮ ಕಾಳಜಿ ಮೇರೆಗೆ ಬಂಗಾಳ ವೈದ್ಯಕೀಯ ಪರಿಹಾರ ಸಮನ್ವಯ ಸಮಿತಿ ರಚನೆಯಾಯಿತು. ಬಿದಾನ್ ಚಂದ್ರರಾಯ್ ಅವರು ಅಧ್ಯಕ್ಷರಾಗಿದ್ದರು. ಲೇಖಕರು ಮತ್ತು ಕಲಾವಿದ ಸಂಘದ ಅವಕಾಶ ಮತ್ತು ಕೆಲಸ ಹೆಚ್ಚಿತು. ಸಂಘವನ್ನು ನಂತರ ಪ್ರಗತಿಪರ ಲೇಖಕರ ವೇದಿಕೆಯೆಂದು ನಾಮಕರಣ ಮಾಡಲಾಯಿತು. ಅದಕ್ಕೆ ನನ್ನದೆಲ್ಲವನ್ನು ಸಮರ್ಪಿಸಿದೆ. ಭಾರಿ ವಿರೋಧವಿದ್ದರೂ ಪಕ್ಷವು ಒಂದು ರಾಜಕೀಯ ಸಂಸ್ಥೆಯಾಗಿ ಪ್ರಗತಿಗೊಂಡಿತು ಹಾಗೂ ಸದಸ್ಯತ್ವ ಹೆಚ್ಚಿತು. ಸಿಪಿಐ ನ ಮೊದಲ ಬಹಿರಂಗ ಮಹಾ ಅಧಿವೇಶನ (congress) 1943ರಲ್ಲಿ ಮುಂಬೈಯಲ್ಲಿ ನಡೆಯಿತು. ಆ ವರ್ಷದ ಆದಿಯಲ್ಲಿ ಪಕ್ಷದ ಬಂಗಾಳ ವಿಭಾಗ ತನ್ನ ಪ್ರಥಮ ಬಹಿರಂಗ ಅಧಿವೇಶನವನ್ನು ಕಲ್ಕತ್ತ ಇಂಡಿಯನ್ ಅಸೋಶಿಯೇಷನ್ ಹಾಲ್‌ನಲ್ಲಿ ನಡೆಸಿತು. 7 ಸದಸ್ಯರ ಒಂದು ಸಣ್ಣ ಪ್ರಾಂತೀಯ ಸಮಿತಿಯನ್ನು ರಚಿಸಲಾಯಿತು. ಪಕ್ಷದ ಪಾಲಿಟ್ ಬ್ಯೂರೋದ ಒಂದು ನಿರ್ದೇಶನದನ್ವಯ ಎಲ್ಲಾ ಪ್ರಾಂತ್ಯಗಳಲ್ಲಿ ಕೆಲವು ಪ್ರಾಂತೀಯ ಸಮಿತಿ ಸಂಘಟನೆಗಳನ್ನು (ಪಿಸಿಓ) ನೇಮಿಸಲಾಗಿದೆ ಎಂಬ ನೆನಪು ತಮಗಿದೆ ಎಂದು ಸರೋಜ್ ಬಾಬು ನನಗೆ ಹೇಳಿದರು. ನನ್ನನ್ನು ಒಬ್ಬ ಪಿಸಿಓ ಸದಸ್ಯನಾಗಿ ನೇಮಿಸಲಾಯಿತು. 1942-45ರ ಮಧ್ಯೆ ಅನೇಕ ಘಟನೆಗಳು ನಡೆದವು. ಉದಯೋನ್ಮುಖ ಕ್ರಾಂತಿಕಾರಿ ಲೇಖಕ ಹಾಗೂ ಢಾಕಾ ಕಮ್ಯುನಿಸ್ಟ್ ಪಕ್ಷದ ಸದಸ್ಯ ಸೋಮೇನ್ ಚಂದ್ ಅವರ ಅಮಾನವೀಯ ಹತ್ಯೆ ಇವುಗಳಲ್ಲಿ ಒಂದು ಪ್ರಮುಖ ಘಟನೆ. ಫ್ಯಾಸಿಸ್ಟ್ ವಿರೋಧಿ ಸಮ್ಮೇಳನದಲ್ಲಿ ಪಾಲ್ಗೊಳ್ಳಲೆಂದು ನಾವು ಢಾಕಾಕ್ಕೆ ತೆರಳಿದೆವು. ಬಂಕಿಂ ಬಾಬು (ಪಕ್ಷದ ದಿವಂಗತ ಮುಖಂಡ ಬಕಿಂ ಮುಖರ್ಜಿ) ನಮಗಿಂತ ಮೊದಲೇ ಸಮ್ಮೇಳನದ ಸ್ಥಳವನ್ನು ತಲುಪಿದರು. ಹಠಾತ್ತನೆ ಒಂದು ಗುಂಪು ಓಡುತ್ತಿರುವುದನ್ನು ನಾವು ನೋಡಿದೆವು. ಆ ನೂಕಾಟದಲ್ಲಿ ಸ್ನೇಹಾಂಗ್ಶು ಕೈಗೆ ಗಾಯವಾಯಿತು. ಸೋಮೆನ್ ಚಂದಾರವರ ಹತ್ಯೆಯಾಗಿದೆ ಎಂಬ ವಿಷಯ ನಮಗೆ ತಿಳಿಯಿತು. ಈ ಸಮ್ಮೇಳನದ ಸ್ಥಳವನ್ನು ಪೊಲೀಸರು ಸುತ್ತುವರೆದರು. ಆದರೆ ಸಮ್ಮೇಳನ ನಡೆಯಿತು. ನಾವು ಭಾಷಣ ಮಾಡಿದೆವು ಆದರೆ ಅಮಾನವೀಯ ದುರಂತ ಸಮ್ಮೇಳನದ ಕಲಾಪಗಳ ಮೇಲೆ ಕರಿಛಾಯೆ ಬೀರಿತು. ಮರುದಿನ ನಾನು ಮತ್ತು ಸ್ನೇಹಾಂಗ್ಶು ಮುನ್ಸಂಜೆಗೆ ಹೋಗಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದೆವು. ಅಲ್ಲಿಂದ ಮೈಮನ್ ಸಿಂಗ್‌ಗೆ ಹೋದೆವು. ಸ್ನೇಹಾಂಗ್ಶು ಮನೆಯಲ್ಲಿ ಕೆಲವು ದಿನ ಇದ್ದು ನಾನು ಕಲ್ಕತ್ತಕ್ಕೆ ಮರಳಿದೆ.

1942-45ರ ನಡುವಿನ ನಮ್ಮ ರಾಜಕೀಯ ಸಮರದಲ್ಲಿ ಇಂಥ ಅನೇಕ ಸಾವು ನೋವುಗಳು ಸಂಭವಿಸಿದೆ ಎಂಬುದನ್ನು ಎತ್ತಿ ಹೇಳಲಿಕ್ಕಷ್ಟೆ ಹುತಾತ್ಮ ಸೋಮೇನ್ ಚಂದಾ ಅವರ ಹೆಸರನ್ನು ನಾನು ಇಲ್ಲಿ ಪ್ರಸ್ತಾಪಿಸಿದ್ದೇನೆ.

ಯುದ್ಧ ಕೊನೆಗೊಳ್ಳುವ ವೇಳೆಗೆ ಕಾಂಗ್ರೆಸ್ ನಾಯಕರನ್ನು ಬಿಡುಗಡೆಮಾಡಲಾಯಿತು. ಪರಿಸ್ಥಿತಿ ತುಂಬಾ ಪ್ರಕ್ಷುಬ್ಧವಾಗಿತ್ತು. ಕಾರ್ಮಿಕರ ಮುಷ್ಕರಗಳು, ರೈತರ ಬಂಡಾಯಗಳು, ಪಿ ಮತ್ತು ಟಿ ನೌಕರರ ಬೇಡಿಕೆಗಳಿಗೆ ಬೆಂಬಲವಾಗಿ 1946 ಜುಲೈ 29 ರಂದು ಅನಿರ್ದಿಷ್ಟಾವಧಿ ಮುಷ್ಕರ, ರಾಯಲ್ ಇಂಡಿಯನ್ ನೇವಿಯ (ರಿನಾ) ಭಾರತೀಯ ಸೈನಿಕರ ಬಂಡಾಯ, ವಿಯೆಟ್ನಾಂ ವಿಮೋಚನ ಸಮರಕ್ಕೆ ಬೆಂಬಲವಾಗಿ ಕಲ್ಕತ್ತಾದಲ್ಲಿ ನಡೆದ ಸಭೆಯೊಂದರ ಮೇಲೂ ಪೊಲೀಸರ ಗೋಲಿಬಾರ್ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ವ್ಯಾಪಕವಾಗಿದ್ದ ಆಕ್ರೋಶದ ಅಲೆ-ಇವೆಲ್ಲವೂ ಯುದ್ಧೋತ್ತರ ಇತಿಹಾಸದ ಭಾರತದಲ್ಲಿ ತಕ್ಷಣವೇ ಮುಖ್ಯವಾದ ಹಲವು ಪ್ರಕರಣಗಳು.


(ಮುಂದುವರಿಯುವುದು)

1942 ಆಗಸ್ಟ್ 9 ರಂದು ಗಾಂಧಿ, ನೆಹರೂ ಮೌಲಾನ ಅಜಾದ್ ಮತ್ತಿತರ ಕಾಂಗ್ರೆಸ್ ಧುರೀಣರನ್ನು ಬಂಧಿಸಲಾಯಿತು. ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಈ ಚಳುವಳಿಯಿಂದಾಗಿ ಫ್ಯಾಸಿಸಂ ವಿರೋಧಿ ಹೋರಾಟ ದುರ್ಬಲವಾಗುತ್ತದೆಂಬ ಕಾರಣಕ್ಕಾಗಿ ಆ ಕಾಲಘಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷ ಆ ಆಂದೋಲನವನ್ನು ವಿರೋಧಿಸಿತು. ಫ್ಯಾಸಿಸಂ ಜಪಾನಿ ಕೂಟದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸುವಂತಾಗಲು ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡುವಂತೆ ನಾವು ಒತ್ತಾಯಿಸಿದೆವು.



ಆ ಕಾಲಘಟ್ಟದಲ್ಲಿ ಪಕ್ಷ ತೀವ್ರ ವಿರೋಧವನ್ನು ಹಾಗೂ ತಕ್ಷಣ ಟೀಕೆಯನ್ನು ಎದುರಿಸಿತು. ನಮ್ಮ ಪಕ್ಷದ ಅನೇಕ ಕಚೇರಿಗಳ ಮೇಲೆ ಆಕ್ರಮಣ ನಡೆಯಿತು. ಹಾಗೂ ಅಸಂಖ್ಯಾತ ಸಂಗಾತಿಗಳ ಮೇಲೆ ಫ್ಯಾಸಿಸ್ಟ್ ರೀತಿಯಲ್ಲೇ ದೈಹಿಕ ಹಲ್ಲೆ ನಡೆಯಿತು. ಆದರೆ ಅದಕ್ಕೆಲ್ಲಾ ಜಗ್ಗದ ನಾವು ಸಾರ್ವಜನಿಕ ಸಂಪರ್ಕ ಕಾರ್ಯಕ್ರಮವನ್ನು ಮುಂದುವರೆಸಿದೆವು

-ವಿ.ಜೆ.ಕೆ.ನಾಯರ್



ಕಾರ್ಮಿಕರೊಂದಿಗೆ ಪಟೇಲ್ ಸರಕಾರದ ಪೋಲೀಸರ ದುರ್ವರ್ತನೆ

ರಾಜ್ಯದ ಪ್ರಜಾಪ್ರಭುತ್ವ ಚಳುವಳಿಗೆ

ಮಹಾವಿಶ್ವಾಸಘಾತ

ರಾಜ್ಯಾದ್ಯಂತ ರೈತರ ಹೋರಾಟ, ಅದರ ಜೊತೆ-ಜೊತೆಯಾಗಿ ಬೆಂಗಳೂರಿನಲ್ಲೇ ಕಾರ್ಮಿಕರ ನೇತೃತ್ವದ ಸತತ ಚಳುವಳಿಯ ನಂತರವೇ ಜನತಾದಳ 1983 ರಲ್ಲಿ ಅಧಿಕಾರಕ್ಕೆ ಬಂದದ್ದು. ಆ ಸರಕಾರದ ಶ್ರಮಜೀವಿಗಳ ಅಖಂಡ ಬೆಂಬಲಕ್ಕೆ ಅಷ್ಟೇ ಒಳ್ಳೆಯ ರೀತಿಯಲ್ಲಿ ಸ್ಪಂದಿಸಿತು. ದಮನಕಾರೀ ಗುಂಡೂರಾವ್ ಸರಕಾರ ಕಾರ್ಮಿಕ ಮತ್ತು ರೈತರ ಮೇಲೆ ಹೇರಿದ್ದ ಎಲ್ಲಾ ಕೇಸುಗಳನ್ನು ಹಿಂತೆಗೆದುಕೊಂಡಿತು. 1984 ರಲ್ಲಿ ಹಲವಾರು ನೋಟಿಫಿಕೇಶನ್ನುಗಳನ್ನು ಹೊರಡಿಸಿ ಸುಮಾರಾಗಿ ಎಲ್ಲಾ ವಲಯಗಳಲ್ಲಿ ಕನಿಷ್ಠ ಕೂಲಿಯನ್ನು ಏರಿಸಿತು. ನಂತರದ ದೇವೇಗೌಡರ ಸರಕಾರವೂ ಕಾರ್ಮಿಕರ ವಿರುದ್ಧ ಹೋಗಲಿಲ್ಲವಷ್ಟೇ ಅಲ್ಲ, ಕಾಂಟ್ರಾಕ್ಟ್ ಲೇಬರ್ ಪದ್ಧತಿಯನ್ನು ನಿರ್ಮೂಲ ಮಾಡಲು ಅವರು ಗಂಭೀರ ಪ್ರಯತ್ನ ನಡೆಸಿತು.

ಆದರೆ 'ಲೋಹಿಯವಾದಿ' ಎಂದು ಹೇಳಿಕೊಳ್ಳುವ ಜೆ.ಹೆಚ್.ಪಟೇಲರು ಮುಖ್ಯಮಂತ್ರಿ ಪೀಠ ಏರಿದ ನಂತರ ಒಂದು ಅಸಂವಿಧಾನಿಕವಾದ 'ಉನ್ನತಾಧಿಕಾರದ ಸಮಿತಿ' (ಹೈಪವರ್ ಕಮಿಟಿ) ಹೆಸರಲ್ಲಿ ಅಧಿಕಾರಶಾಹಿ ಕೂಟವೊಂದಕ್ಕೆ ಮುಕ್ತ ಅವಕಾಶ ಸಿಕ್ಕಿತು. ಜಾಗತೀಕರಣದ ಶಕ್ತಿಗಳ ಕಣ್ಣೋಟಕ್ಕೆ ಅನುಗುಣವಾಗಿ ಆಡಳಿತ ನಡೆಸುತ್ತಿರುವುದು ಈ 'ಉನ್ನತಾಧಿಕಾರದ ಸಮಿತಿ'ಯೇ. ಪಟೇಲರ ಹೆಸರನ್ನು, ಸಹಿಯನ್ನು ಬಳಸಿ ಕಾರ್ಮಿಕ ವರ್ಗ ಮತ್ತು ಜನಗಳ ವಿರುದ್ಧ ಎಲ್ಲಾ ರೀತಿಯ ಅಪರಾಧಗಳನ್ನು ಎಸಗುತ್ತಿರುವವರು ಇವರೇ.

ಪಟೇಲರ ಸರಕಾರದ ಸುಮಾರಾಗಿ ಮೊದಲ ಕೆಲಸವೇ 'ಹೆಜ್ಜಾಲ ಗೋಳೀಬಾರು'. ಈ ಗೋಳೀಬಾರು ನಡೆದ ಕೂಡಲೇ ಜರುಗಿದ ರಾಮನಗರದ ಉಪ ಚುನಾವಣೆಯಲ್ಲಿ ಜನತಾದಳ ಸೋತಿತು. ಈಗ ಹೆಜ್ಜಾಲದ ಪೋಲಿಸ್ ಗೋಳೀಬಾರಿಗೆ ಜನ ಶಿಕ್ಷೆ ಕೊಟ್ಟಿದ್ದಾರೆ ಎಂದರು ಪಟೇಲರು ವಿಧಾನಸಭೆಯಲ್ಲೇ. ಆದರೆ ಈಗ ತನ್ನ ಮಾತುಗಳೇ ಅವರಿಗೆ ನೆನಪಿಲ್ಲ. ರಾಮನಗರ ಮಾತ್ರವಲ್ಲ, ಇಡೀ ಕರ್ನಾಟಕದ ಜನರ ಶಿಕ್ಷೆ ಬೇಕೆಂದು ಹಠ ಹಿಡಿದಂತಿದೆ. ತನ್ನ ಈ ಆತ್ಮಹತ್ಯಾಕಾರಿ ಪ್ರಯತ್ನದಲ್ಲಿ ಯಾವ ಪಕ್ಷದ ಕೃಪೆಯಿಂದ ಮುಖ್ಯಮಂತ್ರಿ ಗದ್ದುಗೆ ಸಿಕ್ಕಿ ಎಲ್ಲಾ 'ವೋಜು' ಗಳಿಗೆ ಅವಕಾಶವಾಯಿತೋ ಆ ಪಕ್ಷವನ್ನೇ ಮುಗಿಸಿಬಿಡುವ ಹವಣಿಕೆಯಲ್ಲಿದ್ದಂತಿದೆ.

ವಿಧಾಸಭೆಯಲ್ಲಿ ಹೇಳಿದ ಆ ಮಾತುಗಳ ನಂತರ ಅವರ ಕ್ರಿಯೆಗಳು ಅವರು ಸೋಲಿನಿಂದ ಪಾಠ ಕಲಿಯಲೇ ಇಲ್ಲ ಮಾತ್ರವಲ್ಲ ಮುಂದೆ ತನಗೆ ಅಥವಾ ತನ್ನ ಪಕ್ಷಕ್ಕೆ ಏನು ಕಾದಿದೆ ಎಂಬ ಪರಿವೆಯೂ ಅವರಿಗಿಲ್ಲ ಎಂಬುದನ್ನು ತೋರಿಸುತ್ತದೆ. ಹೆಜ್ಜಾಲದ ಪೋಲೀಸ್ ಗೋಳೀಬಾರಿನಲ್ಲಿ ಗಾಯಗೊಂಡ ಪ್ರತಿಯೊಬ್ಬರಿಗೆ 15000 ರೂ. ಪರಿಹಾರದ ಭರವಸೆಯನ್ನೂ ಅವರು ವಿಧಾನಸಭೆಯಲ್ಲಿ ನೀಡಿದ್ದರು. ಆದರೆ ಅವರ ಸರಕಾರ ಯಾವುದೇ ನಾಚಿಕೆಯಿಲ್ಲದೆ ಕೊಟ್ಟದ್ದು ತಲಾ 1500 ರೂ. ಮಾತ್ರ. ಅದನ್ನು ಈ ಲೇಖಕ ಫೆಬ್ರವರಿ 98 ರಲ್ಲಿ ಅವರ ಗಮನಕ್ಕೆ ತಂದಾಗ ಅದನ್ನು ಸರಿಪಡಿಸಲು ತನ್ನ ರಾಜಕೀಯ ಕಾರ್ಯದರ್ಶಿ ಕೆ.ಎಚ್.ಶ್ರೀನಿವಾಸ್‌ಗೆ ನಿರ್ದೇಶನ ಕೊಟ್ಟರು. ಅದನ್ನು ಸರಿಪಡಿಸಲಾಗಲೀ, ವಿಧಾನಸಭೆಯಲ್ಲಿ ಕೊಟ್ಟ ಆಶ್ವಾಸನೆಯನ್ನು ಈಡೇರಿಸಲಾಗಲೀ ಇದುವರೆಗೂ ಏನೂ ಮಾಡಿಲ್ಲ.

ಪಟೇಲರಿಗೆ ಅಧಿಕಾರ ಶಾಹಿಯ ಮೇಲೆ ಹತೋಟಿ ಇಲ್ಲ. ಅವರಿಗೇ ಪಟೇಲರ ಮೇಲೆ ಎಲ್ಲಾ ಹತೋಟಿ ಇರುವುದು. ಪೋಲೀಸ್ ಅಧಿಕಾರಿಗಳು ಅವರ ಆದೇಶಗಳನ್ನು ಪಾಲಿಸದಿರುವುದೇ ಅದನ್ನು ತೋರಿಸುತ್ತದೆ. ಹೆಜ್ಜಾಲ ಗೋಳೀಬಾರಿನಲ್ಲಿ ಸತ್ತವರು ನಮ್ಮವರು, ಆದರೆ ಈ ನಮ್ಮವರನ್ನೇ 'ಕೊಲ್ಲುವ ಪ್ರಯತ್ನ ಮಾಡಿದ' ರೆಂದು ಸೆಕ್ಷನ್ 307 ರಡಿ ಮುಖಂಡರ ಮೇಲೆ ಕೇಸು ಹಾಕಿದ್ದೇಕೆ, ಯಾವ ವ್ಯಕ್ತಿಯನ್ನು ಕೊಲ್ಲುವ ಪ್ರಯತ್ನ ಮಾಡಲಾಯಿತು ಎಂದೂ ಪೋಲಿಸರು ಹೆಸರಿಸಿಲ್ಲವೇಕೆ ಎಂದು ಪಟೇಲರನ್ನು ಭೇಟಿಯಾಗಿ ಅಹವಾಲು ಹೇಳಿದಾಗ ಅವರು ಈ ವಿಷಯ ಆದಾಗಲೇ ಕೋರ್ಟಿನಲ್ಲಿದೆ, ತಾನೇನು ಸಹಾಯ ಮಾಡಲು ಸಾಧ್ಯ ಹೇಳಿ ಎಂದರು. ಪೋಲೀಸರು ಸುಳ್ಳೇ ಎಫ್.ಐ.ಆರ್. ಹಾಕಿದ್ದಾರೆ, ಚಾರ್ಜ್‌ಶೀಟ್ ಹಾಕಿದಾಗ ನಿಜವಾಗಿ ಅದರಲ್ಲಿ ಇಲ್ಲದೇ ಇದ್ದವರ ಹೆಸರುಗಳನ್ನೆಲ್ಲಾ ತೆಗೆದು ಹಾಕಬಹುದು ಎಂದು ತಕ್ಷಣವೇ ಅವರಿಗೆ ತಿಳಿಸಲಾಯಿತು. ಇಂತಹ ಹೆಸರುಗಳನ್ನು ಸೇರಿಸಬೇಡಿ ಎಂದು ಶಂಕರ್ ಬಿದರಿಯವರಿಗೆ ಹೇಳಲಾಯಿತು. ನಂತರ ಶಂಕರ್ ಬಿದರಿಯವರೊಂದಿಗೂ ಮಾತನಾಡಿದೆವು. ಈಗ ರಾಮನಗರ ಕೋರ್ಟಿನ ಮುಂದೆ ಸಲ್ಲಿಸಿದ ಚಾರ್ಜ್‌ಶೀಟಿನಲ್ಲಿ ನಮ್ಮೆಲ್ಲರ ಹೆಸರೂ ಇದೆ! ಪಟೇಲರ ಪ್ರಾಮಾಣಿಕತೆ, ದಕ್ಷತೆಗೆ ಇಷ್ಟೇ ಉದಾಹರಣೆ ಸಾಕಲ್ಲವೇ? ಇವೆರಡೂ ಅವರಲ್ಲಿ ಇದ್ದಂತಿಲ್ಲ.

ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ನ ಕಾರ್ಮಿಕರು ಮಾಡಿದ ಅಪರಾಧವಾದರೂ ಏನು? ಹೈಕೋರ್ಟ್ ಅನುಮೋದನೆ ಕೊಡದಿದ್ದರೂ ಕಾರ್ಖಾನೆಯನ್ನು ಮತ್ತೆ - ಮತ್ತೆ ಮುಚ್ಚಲು ಪಟೇಲ ಸರಕಾರ ಏಕೆ ಅನುಮತಿ ನೀಡಿತು?

ನ್ಯಾಯಾಂಗ ತನಿಖೆಯಲ್ಲಿ ತಮ್ಮ ಮೇಲಿನ ಕೇಸುಗಳನ್ನು ನಿರ್ವಹಿಸುತ್ತಿರುವ ಕಾರ್ಮಿಕ ಮುಖಂಡರನ್ನು ಪಟೇಲರ ಪೋಲೀಸರು ಬೇಟೆಯಾಡುತ್ತಿದ್ದಾರೆ. ಏನೇನೋ ಕಸರತ್ತು ಮಾಡಿ ಒಂದು ವಾರೆಂಟ್ ಪಡೆದು ಕೆ.ಎಸ್.ಸುಬ್ರಹ್ಮಣ್ಯರನ್ನು ನ್ಯಾಯಾಂಗ ತನಿಖೆಯ ಆವರಣದಿಂದಲೇ ಬಂಧಿಸಿದರು. ಅವರು ಇದಕ್ಕೆ ಅಂಗೀಕರಿಸಿದ ವಿಧಾನವೆಂದರೆ ಒಂದು ಎಫ್.ಐ.ಐರ್. ಹಾಕುವುದು, ಒಂದು ಸಮನ್ಸ್ ಪಡೆಯುವುದು, ಅದನ್ನು ಆಪಾದಿತರಿಗೆ ಕೊಡದಿರುವುದು, ನಂತರ ಸಮನ್ಸ್ ಪಡೆಯಲಿಲ್ಲ ಎಂದು ಕೋರ್ಟಿಗೆ ತಿಳಿಸಿ ಜಾಮಿನು ರಹಿತ ವಾರಂಟ್ ಪಡೆಯುವುದು, ಮತ್ತು ಈ ವ್ಯಕ್ತಿ ನ್ಯಾಯಾಂಗ ತನಿಖೆಯೆದುರು ತಮ್ಮ ವಾದವನ್ನು ಮಂಡಿಸಬಾರದು ಎಂದಿದ್ದಾಗ ಈ ವಾರೆಂಟನ್ನು ಬಳಸುವುದು. ಈ ಕಾರಣಕ್ಕಾಗಿಯೇ ವರಲಕ್ಷ್ಮಿಯ ಮೇಲೆ 26 ಕೇಸುಗಳನ್ನು ಹಾಕಲಾಗಿದೆ! ಆಕೆಯ ಚಟುವಟಿಕೆಗಳು, ಚಲನವಲನಗಳಿಗೆ ಅಡ್ಡಿಯುಂಟುಮಾಡಲು ಇದು ಅವರಿಗೆ ಅತ್ಯಂತ ಪರಿಣಾಮಕಾರಿ ವಿಧಾನ. ಅತ್ತ ಪೋಲೀಸರೇ ಕೆಲವು ಸುಳ್ಳು 'ಮನವಿಗಾರ'ರನ್ನು ಸೃಷ್ಟಿಸಿದ್ದಾರೆ. ಇವರು ಪೋಲೀಸರ ಸುಳ್ಳು ಸಾಕ್ಷಿಗಳು ಕೂಡಾ. ಹೆಜ್ಜಾಲದಲ್ಲಿ ಅಂದು ರಸ್ತೆಯಲ್ಲಿ ತಮ್ಮ ಬಸ್ಸುಗಳನ್ನು ನಿಲ್ಲಿಸಿಕೊಂಡಿರಬೇಕಾಗಿ ಬಂದ ಬಸ್ಸುಗಳ ಡ್ರೈವರುಗಳು, ಕಂಡಕ್ಟರುಗಳನ್ನು ಹಿಡಿದುಕೊಂಡು ಅವರನ್ನು 'ಮನವಿಗಾರ'ರನ್ನಾಗಿ ಮಾಡಿ ತಮ್ಮ ವಾದವ[illegible] 'ಸಾಬೀತು' ಮಾಡಲು ಪೋಲೀಸರು ಪ್ರಯತ್ನಿಸಿದರು[illegible] ನಾವು ಆ 'ಮನವಿಗಾರರಿಗೆ ಪಾಟಿ ಸವಾ[illegible] ಮಾಡಬಾರದೆಂದು ಪೋಲೀಸರ ಬಯಕೆ!' ಅದಕ್ಕಾ[illegible] ನಮ್ಮ ಮೇಲೆ ಅಲ್ಲಿ ಹಾಕಿದ ಕೇಸುಗಳನ್ನೇ[illegible] ಚುರುಕುಗೊಳಿಸಿದ್ದಾರೆ.

ಕಾರ್ಮಿಕ ಮುಖಂಡರನ್ನು ಬೇಟೆಯಾಡು[illegible] ಪಟೇಲರಿಗೆ ಹೆಜ್ಜಾಲ ಮಾತ್ರವೇ ತಾಣವ[illegible] ಬಿ.ಪಿ.ಎಲ್. ನದ್ದು ಈಗ ಇನ್ನೂ ಕೆಟ್ಟ ಉದಾಹರ[illegible] ಯೂನಿಯನ್ ನೋಂದಣಿಯಾದ ಕೂಡಲೇ ಸರಕಾ[illegible] ಕೈಗೊಂಬೆಯಂತಿದ್ದ ಲೇಬರ್ ಕಮಿಷನರ್ ಈ ಸಂಘ[illegible] ರಚನೆಯೇ ಅಸಿಂಧು ಎಂದು ಸಾರುವಂತೆ ಮಾಡಿದ[illegible] ನಂತರ ಸಂಭವಿಸಬಾರದಿದ್ದ, ಆದರೆ ಸಂಭವಿ[illegible] ಘಟನೆಗಳೆಲ್ಲಾ ಈ ಮೂಲಪಾಪದ ಫಲಗ[illegible] ಲೇಬರ್ ಕಮಿಷನರ್ ಮ್ಯಾನೇಜ್‌ಮೆಂಟ್ ನೊಂ[illegible] ಶಾಮೀಲಾಗಿ ಈ ರೀತಿ ಸಾರಿದ್ದಕ್ಕೆ ಆತನ[illegible] ಹೈಕೋರ್ಟ್ ತೀವ್ರವಾಗಿ ಟೀಕಿಸಿದಾಗ ತಾ[illegible] 'ಉನ್ನತಾಧಿಕಾರ ಸಮಿತಿ' ಯ ನಿರ್ದೇಶನದ[illegible] ವರ್ತಿಸಿದೆ ಎಂದರು ಅವರು! ಹೌದು, [illegible] ಅಸಂವಿಧಾನಿಕವಾದ 'ಉನ್ನತಾಧಿಕಾರ ಸಮಿತಿ' ಯ[illegible] ಕಾರುಬಾರು. ಬಿ.ಪಿ.ಎಲ್. ವಿಷಯದಲ್ಲಿ [illegible] ಮತ್ತಷ್ಟು ಬಯಲಿಗೆ ಬಂದಿದೆ. ಕೈಗಾರ[illegible] ಕಾರ್ಯದರ್ಶಿ ಶ್ರೀಯುತ ವಿಶ್ವನಾಥ್‌ರಿಂದ ಹಿಂ[illegible] ದಿನಾಂಕವನ್ನು ಹಾಕಿ ಒಂದು ಪತ್ರವನ್ನು ಪಡೆದ[illegible] ಈ ಸಮಿತಿಯೇ. ಮಧ್ಯಂತರ ಪರಿಹಾರದ ಪ್ರಶ್ನೆಯ[illegible] ಪಂಚಾಯ್ತಿಗೆ ನೀಡಬೇಕಾದ ಅಗತ್ಯವಿದೆಯ[illegible] ಒಕ್ಕಣೆಕೆಯಿದ್ದ ಪತ್ರ ಅದು. ಅವರ ಈ ಕುಕೃತ್ಯವ[illegible] 12.4.99 ರ ಹೈಕೋರ್ಟ್ ತೀರ್ಪು ಸ್ಪಷ್ಟ[illegible] ಬಯಲಿಗೆಳೆಯಿತು. 5.9.1998 ರ ಈ ಅನ[illegible] ಟಿಪ್ಪಣಿಗೆ 30.11.99 ರಂದು ಸಹಿ ಹಾಕಿ ಕಾ[illegible] ಇಲಾಖೆಯ ಪ್ರಮುಖ ಕಾರ್ಯದರ್ಶಿಗ[illegible]



ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಸುಳ್ಳು ಕೇಸುಗಳ ಸುರಿಮಳೆ

ಫೆಬ್ರವರಿ 3-97-ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ಹೆಜ್ಜಾಲದ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಖಾನೆ ಎದುರು ಗೋಲಿಬಾರ್ ಮಾಡಿ 3 ಜನರನ್ನು ಕೊಂದಿದ್ದು, 15 ಜನರನ್ನು ಗಾಯಗೊಳಿಸಿದ ಘಟನೆ ನಿಮಗೆಲ್ಲರಿಗೂ ತಿಳಿದಿದೆ. ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ರವರನ್ನು ಒಳಗೊಂಡು 16 ಜನರನ್ನು ಸುಳ್ಳು ಮೊಕದ್ದಮೆಗಳ ಆಧಾರದಲ್ಲಿ ಸೆಕ್ಷನ್ 307 ಆಪಾದನೆಯ ಮೇಲೆ ಜೈಲುಗಳಿಗೆ ಹಾಕಲಾಯಿತು. ಈ ಘಟನೆಯ ಹೆಸರಲ್ಲಿ ಎರಡು ಸಾವಿರ ಜನರನ್ನು ಆಪಾದನೆಗೆ ಗುರಿ ಮಾಡಿ ಮೇಲೆ ಹೇಳಿದ ಸೆಕ್ಷನ್ 307 ಕಾಲಮಿನ ಕೇಸು ಜಡಿದು ಪೋಲೀಸರು ರಾಮನಗರ ಕೋರ್ಟ್‌ನಲ್ಲಿ ದಾಖಲಿಸಿದರು. ಇದಲ್ಲದೆ 26 ಕೇಸುಗಳಲ್ಲಿ ಕೆ.ಎಸ್.ಸುಬ್ರಮಣ್ಯ, ವರಲಕ್ಷ್ಮಿ, ಎಂ. ರಾಜಣ್ಣ, ಕೋಪಯ್ಯ ಮುಂತಾದ ನಾಯಕರುಗಳ ಮೇಲೆ ಹಾಕಲಾಗಿದೆ.


ಹೆಜ್ಜಾಲ ಗೋಲಿಬಾರ್ ವಿಷಯದಲ್ಲಿ ತನಿಖೆ ಮಾಡಲು ನ್ಯಾಯಮೂರ್ತಿ ಆರ್.ಸಿ. ಹಿರೇಮಠ್ ಆಯೋಗವನ್ನು ಸರಕಾರ ರಚಿಸಿದೆ. ಆಯೋಗವು ನ್ಯಾಯಾಂಗ ವಿಚಾರಣೆಯನ್ನು ನಡೆಸುತ್ತಿದೆ. ಆಯೋಗದ ಮುಂದೆ ಅರ್ಜಿದಾರರ ರೂಪದಲ್ಲಿ ಪೋಲೀಸರು ಕೆ.ಎಸ್.ಆರ್.ಟಿ.ಸಿ. ನೌಕರರನ್ನು ಒಳಗೊಂಡು ಬಹಳಷ್ಟು ಜನರನ್ನು ಸುಳ್ಳು ಸಾಕ್ಷಿಗಳನ್ನು ಮುಂದೆ ಮಾಡಿದ್ದಾರೆ. ಇವರಿಗೆಲ್ಲಾ ಪೋಲೀಸರೇ ಅರ್ಜಿಯನ್ನು ತಯಾರಿಸಿ ವಕೀಲರನ್ನು ಏರ್ಪಡಿಸಿದ್ದಾರೆ. ಸಿ.ಐ.ಟಿ.ಯು ನಾಯಕರುಗಳ ವಿಚಾರಣೆ ಆದ ನಂತರ ಇವರುಗಳ ವಿಚಾರಣೆಯನ್ನು ನಡೆಸುತ್ತಾ ಬಂದಿದ್ದಾರೆ. ಈ ಅವಧಿಯಲ್ಲಿ ನ್ಯಾಯಾಂಗ ವಿಚಾರಣೆಯಲ್ಲಿ ಕಾರ್ಮಿಕ ಪರ ವಾದಿಸುತ್ತಿದ್ದ ಕೆ.ಎಸ್. ಸುಬ್ರಮಣ್ಯರವರನ್ನು ಸುಳ್ಳು ಮೊಕದ್ದಮೆಯ ಆಧಾರದಲ್ಲಿ ನ್ಯಾಯಾಂಗ ತನಿಖೆ ಆವರಣದಲ್ಲಿ ಬಂಧಿಸಿದರು. ನ್ಯಾಯಾಂಗ ತನಿಖೆ ಸಂಬಂಧವಾಗಿ ಸಕ್ರಿಯವಾಗಿ ಬರುತ್ತಿದ್ದ ಕಾರ್ಮಿಕರನ್ನು ಬಂಧಿಸಿ ರಾಮನಗರ ಜೈಲಿಗೆ ಹಾಕಿರುತ್ತಾರೆ. ನ್ಯಾಯಾಂಗ ತನಿಖೆ ವಿಚಾರಣೆಯಲ್ಲಿ ಪೋಲೀಸರ ವಕೀಲರು ಪಾಟಿ ಸವಾಲು ಮಾಡುತ್ತಾ ಎಸ್.ವರಲಕ್ಷ್ಮಿಯ ಮೇಲೆ 26 ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವುದಾಗಿ ತಿಳಿಸಿದರು. ವರಲಕ್ಷ್ಮಿಯವರು ರಾಜ್ಯ ವ್ಯಾಪ್ತಿ ಓಡಾಡುವ ಕಾರ್ಮಿಕ ಮುಂದಾಳಾಗಿ ಅವರನ್ನು ಕಟ್ಟಿ ಹಾಕುವ ನೀತಿಯನ್ನು ಸರಕಾರ ಅನುಸರಿಸುತ್ತಿದೆ. ವಳ್ಳಿಯಪ್ಪ ಕಾರ್ಖಾನೆಯನ್ನು ಮುಚ್ಚಲು ಸರಕಾರ ಅನುಮತಿಯನ್ನು ನೀಡಿದೆ. ಇಂತಹ ಅನುಮತಿಯನ್ನು ಈವರೆಗೂ ಯಾವ ಸರಕಾರವೂ ನೀಡಿರಲಿಲ್ಲ.

ಬಿ.ಪಿ.ಎಲ್.: ಪೋಲೀಸ್ ಇಲ[illegible] ದುರುಪಯೋಗದ ಮಾದ[illegible]

ಬಿ.ಪಿ.ಎಲ್. ಕಾರ್ಮಿಕರು ಸಂಘಟನೆ ಮಾಡಿ[illegible] ಸಂವಿಧಾನ ಹಕ್ಕನ್ನು ಪಡೆಯುವುದಕ್ಕಾಗಿ ನಡೆಸಿರು[illegible] ನಮ್ಮ ಓದುಗರೆಲ್ಲರಿಗೆ ತಿಳಿದಿದೆ. ಸೆಕ್ಷನ್ 14[illegible] ಲಾಠಿಚಾರ್ಜ್, ಮಹಿಳಾ ಕಾರ್ಮಿಕರಿಗೆ ಜೈಲು[illegible] ಕಾರ್ಮಿಕರ ಮೇಲೆ ಹಲವಾರು ಕೇಸುಗಳು [illegible] ನ್ಯಾಯಬದ್ಧ ಹಕ್ಕುಗಳನ್ನು ದಮನ ಮಾಡಲು[illegible] ಇಲಾಖೆಯನ್ನು ಯಥೇಚ್ಛವಾಗಿ ಬಳಸಿಕೊಂಡಿರು[illegible] ಜ್ವಲಂತ ಉದಾಹರಣೆ.

ನವೆಂಬರ್ 19, 1998 ರಿಂದ ಏಪ್ರಿಲ್ 1[illegible] ಕಾರ್ಮಿಕರನ್ನು ಬಂಧಿಸಿ ರಾಜ್ಯದ ವಿವಿಧ ಜೈಲು[illegible] ವಿವಿಧ ಸೆಕ್ಷನ್‌ಗಳಡಿ ಹತ್ತಾರು ಕೇಸುಗಳನ್ನು ಹಾ[illegible] ರಾಜ್ಯ ಕಾರ್ಯದರ್ಶಿ ಆರ್.ಶ್ರೀನಿವಾಸ್, ಕಾ[illegible] ಮತ್ತಿತರ ಸಂಘದ ಪದಾಧಿಕಾರಿಗಳನ್ನೊಳಗೊಂ[illegible] ಹೇರಿ ಸೆಂಟ್ರಲ್ ಜೈಲಿನಲ್ಲಿ ಇನ್ನೂ ಇಡಲಾಗಿ[illegible] ನಡೆಯುತ್ತಿದ್ದಾಗ ಅಲ್ಲೇ ಹಲವು ಕಾರ್ಯಕರ್ತ[illegible] ಇಟ್ಟಿದ್ದಾರೆ. ಒಟ್ಟಿನಲ್ಲಿ ರಾಜ್ಯ ಸರಕಾರದ ಪೋಲೀಸ[illegible] ಎಂಬ ಭಾವನೆ ಹುಟ್ಟುವಂತಾಗಿದೆ.

ಗಿಳಿದ ಕಾರ್ಮಿಕರಿಗೆ ಹೊಸತೇನಲ್ಲ.
ೂ ಬಹಳ ಮುಂದೆ ಹೋಗಿದ್ದಾರೆ.
ಯ ಹೆಜ್ಜಾಲ ಗೋಳೀಬಾರಿನಿಂದ
ಲ್ಲಿ ಸಾಗಿದೆ – ಈ ವರ್ಷದ ಮ
ಮೇಲೆ ಹಲ್ಲೆ ಮಾಡಿದ ಬಿಜೆಪಿ
ರಣದ ಶಕ್ತಿಗಳ ಕಣ್ಣೋಟಕೆ
ಕಮಿಟಿ ಇವನ್ನೆಲ್ಲಾ ನಡೆಸುತ್ತಿದೆ.
ಾರ್ಯದರ್ಶಿ ವಿ.ಜೆ.ಕೆ.ನಾಯರ್ ಇ



ಲಾಯಿತು. ಮುಷ್ಕರ ಆರಂಭವಾದದ್ದು
ಬರ್ 19, 1998 ರಲ್ಲಿ, ಮಧ್ಯಂತರ ಪರಿಹಾರದ
ಕೆ ಬಂದದ್ದು ಜನವರಿ 1999
ೂರನೇ ವಾರದಲ್ಲಷ್ಟೇ.
ರುವಾಗ ಮಧ್ಯಂತರ
ಾರ ಕುರಿತಾದ ಟಿಪ್ಪಣಿ,
ಅನಧಿಕೃತವಾಗಲೀ,
ೃತವಾಗಲೀ 5.9.98
ು ಬರುವುದು ಹೇಗೆ ತಾನೇ
?
ಜೆ.ಹೆಚ್.ಪಟೇಲರು ತಮ್ಮ
ಪಮುಖ್ಯಮಂತ್ರಿಗಳು
99 ರಂದು ಬಿ.ಪಿ.ಎಲ್.
ಮಿಕರಿಗೆ ಮಧ್ಯಂತರ
ಾರ ನೀಡುವುದು ಮತ್ತಿತರ
ಗಳ ಬಗ್ಗೆ ಆದೇಶ
ಿದಂದಿನಿಂದಲೇ
ಪೂರ್ಣವಾಗಿ ಸದಾ
ಗಾಲ ಮೇಲೆ ನಿಂತಿದ್ದಾರೆ
.ಪಿ.ಎಲ್. ಆಡಳಿತಕ್ಕೆ
ಯ ಮಾಡಲು! ಮಲಗಿದ್ದ
ಿಗಳೆಲ್ಲಾ ಟಿ.ಪಿ.ಜಿ.
ಿಯಾರ್ ಮತ್ತು ಆತನ
ಂಬದವರ ರಕ್ಷಣೆಗೆ
ರುವಂತಿದೆ. ಇನ್ನು ಈ ಬಗ್ಗೆ
ೋರ್ಟ್ ಆದೇಶವನ್ನು
ಾಪಿಸಿದರೆ ಸಾಕೆಂದು
ುತ್ತದೆ.
"ಈ ವಿಷಯಕ್ಕೆ ಸಂಬಂಧಪಡದ ವ್ಯಕ್ತಿಗಳು
ರಲ್ಲಿ ಮಧ್ಯಪ್ರವೇಶಿಸಿದ ರೀತಿ ಇದು. ಇದರ



ಮು
ತಮ್ಮ
ರಾಟ
ಳಕೆ,
ರಾರು
ರ್ಮಿಕರ
ಲೀಸ್
ಂದು

ರವರೆಗೆ ನಡೆದ ಮುಷ್ಕರದಲ್ಲಿ 600 ಮಹಿಳಾ
ಟ್ಟಲಾಯಿತು. ನೂರಾರು ಕಾರ್ಮಿಕರ ಮೇಲೆ 12
. ಕಾರ್ಮಿಕ ಸಂಘದ ಅಧ್ಯಕ್ಷರೂ ಸಿಐಟಿಯು ನ
ಘದ ಪ್ರಧಾನ ಕಾರ್ಯದರ್ಶಿ ಟಿ.ಕೆ.ಎಸ್.ಕುಟ್ಟಿ
ವರನ್ನು ಬಂಧಿಸಿ ಅವರ ಮೇಲೆ ಕೊಲೆ ಆಪಾದನೆ
ಅಲ್ಲ, ವಿವಾದದ ವಿಚಾರಣೆ ಹೈಕೋರ್ಟಿನಲ್ಲಿ
ಿರುತಿಸಿ ಸುಳ್ಳು ಕೇಸುಗಳನ್ನು ಹೇರಿ ಜೈಲಿನಲ್ಲಿ
ರೆ ಬಿ.ಪಿ.ಎಲ್. ಮಾಲಕರ ರಕ್ಷಣೆಗೇ ಇದೆಯೇನೋ

ಫಲಿತಾಂಶವಾಗಿ ಸರ್ಕಾರ ಈ ವಿಷಯದಲ್ಲಿ ಒಂದು ದೃಢ ನಿರ್ಣಯ ತಗೊಳ್ಳಲಾಗಲಿಲ್ಲ. ಈ ಮೂಲಕ ಅದು ಕಾರ್ಮಿಕರಿಗೆ ಮಧ್ಯಂತರ ಪರಿಹಾರ ನೀಡುವ ಗುರಿ, ಆಶಯ ಮತ್ತು ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಕಾನೂನಿನ ಸೆಕ್ಷನ್ 10-B ಪ್ರಕಾರ ತನ್ನ ಅಧಿಕಾರವನ್ನು ಮತ್ತು ಶಾಸನ ಬದ್ಧ ಕರ್ತವ್ಯವನ್ನು ಪೂರೈಸುವಲ್ಲಿ ಸರಕಾರ ವಿಫಲವಾಯಿತು"

25.2.99 ರ ದುರಾದೃಷ್ಟಕರ ಘಟನೆಯ ಬಗ್ಗೆ ಹೇಳುತ್ತಾ ಹೈಕೋರ್ಟ್ ಆದೇಶದ ಪರಿಚ್ಛೇದ 9 ಹೀಗೆ ಹೇಳುತ್ತದೆ -

"ಸರಕಾರ ಆ ಸಮಯದಲ್ಲಿ ಕಾರ್ಮಿಕ ಮಂತ್ರಿಗಳೂ ಆಗಿದ್ದು ಉಪ ಮುಖ್ಯಮಂತ್ರಿಗಳು ಕೈಗೊಂಡಿದ್ದ ನಿರ್ಣಯವನ್ನು, ಬದಲಿಸದೆ ಲೇಬರ್ ಕಮಿಷನರ್‌ರ ಶಿಫಾರಸುಗಳನ್ನು ಗಮನದಲ್ಲಿಟ್ಟಕೊಂಡು ತನ್ನ ಅಧಿಕಾರವನ್ನು ಸರಿಯಾಗಿ ಚಲಾಯಿಸಿದ್ದರೆ ಬಹುಶಃ ಇಂತಹ ಘಟನೆಗಳು ಸಂಭವಿಸುತ್ತಿರಲಿಲ್ಲ. ಮಧ್ಯಂತರ ಪರಿಹಾರ ನೀಡಲು ಹಾಗೂ ಮುಷ್ಕರವನ್ನು

ಫೋರೆಸ್ಸ್ – ಅತಿಹೀನ ಪ್ರಯತ್ನ

ಫೋರೆಸ್‌ನಲ್ಲೂ ಕಾರ್ಮಿಕರು ತಮ್ಮ ಸಂಘಟನೆ ಕಟ್ಟಿಕೊಂಡದ್ದರಿಂದಲೇ ಮಾಲಕನ ಕಣ್ಣು ಕೆಂಪಾಗಿ ಕಾರ್ಮಿಕರು ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಹೋರಾಟಕ್ಕಿಳಿಯಬೇಕಾಯಿತು. ಪೋಲೀಸರು ಮಾಲಕರ ರಕ್ಷಣೆಗಾಗಿ ಕಾರ್ಖಾನೆಯಿರುವ ಇಡೀ ಪ್ರದೇಶದಲ್ಲಿ ಸೆಕ್ಷನ್ ಜಾರಿ ಮಾಡಲಾರಂಭಿಸಿತು. ಕೊನೆಗೂ ಮಾಲಕ ಸಂಘಟನೆಯನ್ನು ಒಪ್ಪಿಕೊಂಡು ವಜಾ, ವರ್ಗಗಳನ್ನು ರದ್ದು ಮಾಡಬೇಕಾಯಿತು. ಆದರೆ ನಂತರ ಮಾಲೀಕನ ಪರವಾಗಿ ಪೋಲೀಸ್ ಇಲಾಖೆ ಅತ್ಯಂತ ಹೀನ ಕೆಲಸಕ್ಕೆ ಕೈಹಾಕಿತು. ಫೋರೆಸ್‌ನ ಪ್ರಧಾನ ಕಾರ್ಯದರ್ಶಿ ಬಸವರಾಜು ಮತ್ತು 3 ಜನ ಪದಾಧಿಕಾರಿಗಳನ್ನು ಸೇರಿ ಗುರುತಿಲ್ಲದ ಕೊಳೆತು ನಾರುತ್ತಿರುವ ಒಬ್ಬ ಹೆಂಗಸಿನ ಶವದ ಬಳಿ ಸಂಘಟನೆಯ ಬ್ಯಾನರ್, ಕರಪತ್ರ ಮತ್ತು ಸಂಘದ ಪದಾಧಿಕಾರಿಗಳ ನಾಮಫಲಕಗಳನ್ನು ಹಾಕಿ ಐ.ಪಿ.ಸಿ. 302ರ ಪ್ರಕಾರ [illegible] ಹಳ್ಳಿ ಪೋಲೀಸ್ ಇನ್ಸ್‌ಪೆಕ್ಟರ್‌ರವರು ಕೊಲೆ ಮೊಕದ್ದಮೆಯ ಬಗ್ಗೆ ಸುಳ್ಳು ಕೇಸನ್ನು ದಾಖಲು ಮಾಡಿಕೊಂಡು ಬಸವರಾಜುರವರನ್ನು ಬಂಧಿಸಿ 5 ದಿನ ಪೋಲೀಸ್ ಕಸ್ಟಡಿಯಲ್ಲಿ ಇರಿಸಿಕೊಂಡು ತೀವ್ರವಾದ ಚಿತ್ರಹಿಂಸೆಯನ್ನು ಕೊಟ್ಟು ಆಮೇಲೆ 15 ದಿನಗಳ ಕಾಲ ಸೆಂಟ್ರಲ್ ಜೈಲಿನಲ್ಲಿ ಇರಿಸಿದ್ದಾರೆ. ಯಾವ ಸಾಕ್ಷ್ಯಾಧಾರಗಳೂ ಇಲ್ಲದೆ ಸುಮ್ಮನೆ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಾರೆ. 3 ತಿಂಗಳು ಆದರೂ ಚಾರ್ಜ್‌ಶೀಟ್ ಮಾಡಿರುವುದಿಲ್ಲ. ಶವ ಯಾರದೆಂದು ಇಂದಿಗೂ ಪತ್ತೆ ಆಗಿಲ್ಲ.

ಪ್ರತಿಬಂಧಿಸಲು 1.2.99 ರಂದೇ ಉಪಮುಖ್ಯಮಂತ್ರಿಗಳು ಆದೇಶ ನೀಡಿದ್ದರೂ, ಆ ಆದೇಶವನ್ನು ಪ್ರಕಟಿಸುವ ಬದಲು ಮರುದಿನ ಮುಖ್ಯಮಂತ್ರಿಗಳು ವಾಣಿಜ್ಯ ಮತ್ತು ಉದ್ದಿಮೆ ಇಲಾಖೆಯ ಪ್ರಮುಖ ಕಾರ್ಯದರ್ಶಿಯ ಪತ್ರದ ಆಧಾರದಲ್ಲಿ ಒಂದು ಟಿಪ್ಪಣಿ ಮುಂದಿಟ್ಟರು. ಈ ವಿಷಯ ಸೂಕ್ಷ್ಮ ಸ್ವರೂಪದ್ದಾದ್ದರಿಂದ ಕಡತವನ್ನು ತನ್ನ ಪರಿಶೀಲನೆಗೆ ಇಡಬೇಕು ಎಂದು ಸೂಚಿಸಿದರು. ಯಾವ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳು ಈ ಕಡತವನ್ನು ಪರಿಶೀಲಿಸಬಯಸಿದರು ಎಂಬುದು ತಿಳಿಯದು"

ಸನ್ನಿವೇಶವೇನು ಎಂದು ತಿಳಿದಿಲ್ಲ ಎಂದು ಹೈಕೋರ್ಟ್ ಆದೇಶ ಹೇಳಿದ್ದರೂ ಈ ನಾಟಕ ಆ ಆದೇಶದಲ್ಲಿ ಚಿತ್ರಿತವಾಗಿದೆ. ಈ 'ಉನ್ನತಾಧಿಕಾರ ಸಮಿತಿ' ಯೆಂಬುದರ ಕಾರ್ಮಿಕ-ವಿರೋಧಿ ಚಟುವಟಿಕೆಗಳು ಹಾಗೂ ಅದಕ್ಕೆ ಮುಖ್ಯಮಂತ್ರಿಗಳು ತನ್ನ ಹೆಸರನ್ನು ಉದಾರವಾಗಿ ಕೊಟ್ಟಿರುವುದನ್ನು ಇದು ಸ್ಪಷ್ಟವಾಗಿ ಸಾಬೀತು ಮಾಡಿದೆ.

ಕಾರ್ಮಿಕ ಮುಖಂಡರು ರಂಗದ ಮೇಲಿರಬಾರದು, ಅವರನ್ನು ಎಲ್ಲಾ ಹೋರಾಟಗಳಿಂದ ಪ್ರತ್ಯೇಕಗೊಳಿಸಬೇಕು ಎಂಬುದು ಬಿ.ಪಿ.ಎಲ್. ಆಡಳಿತದ ಆಶಯ ಎಂಬುದು ಬಿ.ಪಿ.ಎಲ್. ಕಾರ್ಮಿಕರಿಗಿದ್ದ ಭಯ. ಅದೂ ನಿಜವಾಯಿತು. ಆರ್.ಶ್ರೀನಿವಾಸ್ ಹಾಗೂ ಪ್ರಧಾನ ಕಾರ್ಯದರ್ಶಿ ಟಿ.ಕೆ.ಎಸ್.ಕುಟ್ಟಿಯವರನ್ನು ಬಂಧಿಸಿ ಅವರ ಮೇಲೆ 26.3.99 ರಂದು ಕೊಲೆ ಪ್ರಯತ್ನದ ಮೊಕದ್ದಮೆ ಹಾಕಿ ಬಿ.ಪಿ.ಎಲ್. ಮಾಲಕರ ಆಶಯ ಈಡೇರಿದಂತಾಯಿತು. ಪೋಲೀಸರು ಕೈಗೆ ಸಿಕ್ಕ ಎಲ್ಲಾ ಪದಾಧಿಕಾರಿಗಳನ್ನು ಬಂಧಿಸಿದರು. ಕೆ.ಆರ್.ವೃತ್ತದಲ್ಲಿ ಉಪವಾಸ ಮುಷ್ಕರ ನಡೆಸುತ್ತಿದ್ದ ಎಲ್ಲಾ 24



ಕಾರ್ಮಿಕರನ್ನು ಮಾರ್ಚ್ 25 , 1999 ರಂದು ಬಂಧಿಸಿದರು. ಪೋಲೀಸರೇ ಟೆಂಟ್ ಕಿತ್ತು ಲೂಟಿ ನಡೆಸಿದರು. ಎಲ್ಲಾ ಫೈಲುಗಳನ್ನು- ಕಾರ್ಮಿಕರ ಮೇಲೆ ಆಂತರಿಕ ತನಿಖೆಗಳನ್ನು ಕುರಿತಾದ ಫೈಲುಗಳನ್ನು- ಪೋಲೀಸರು ಎತ್ತಿಕೊಂಡು ಹೋದರು. ಮತ್ತೊಮ್ಮೆ ಆಳುವ ಕೋಮಿನ ಕೂಟ ಪೋಲೀಸ್ ಕಮಿಷನರ್ ಮತ್ತು ಅಲಸೂರು ಗೇಟ್ ಎ.ಸಿ.ಪಿ. ಮೂಲಕ 'ಉನ್ನತಾಧಿಕಾರ ಸಮಿತಿ'ಯ ಮನುಷ್ಯನಿಗೆ ನೆರವಾಯಿತು.

ಬಿ.ಪಿ.ಎಲ್. ನ ಮಹಿಳಾ ಕಾರ್ಮಿಕರೂ ಸೇರಿದಂತೆ 630 ಕ್ಕೂ ಹೆಚ್ಚು ಕಾರ್ಮಿಕರ ಬಂಧನ ಮತ್ತು ಜೈಲು ಹಾಗೂ ಪೋಲಿಸರು ಹೇರಿದ ಹಲವಾರು ಮೊಕದ್ದಮೆಗಳು ಸುವಿಧಿತ. ಇವನ್ನೆಲ್ಲಾ ಮತ್ತೆ ಹೇಳುವ ಅಗತ್ಯವಿಲ್ಲ.

ಆನೇಕಲ್ ಪ್ರಕರಣದಲ್ಲಿ ಜೆ.ಹೆಚ್.ಪಟೇಲರ ನಿಜ ಸ್ವರೂಪದ ಮೇಲೆ ಮತ್ತೊಂದು ಪ್ರಶ್ನೆ ಚಿಹ್ನೆ ಹಾಕಿತು. 1999 ರ ಮೇ ದಿನದಂದು ಸ್ಥಳೀಯ ಬಿಜೆಪಿ ಕೌನ್ಸಿಲರ್ ಸಮುದಾಯದ ಗುಂಡಣ್ಣ ಹಾಗೂ ಸಿಐಟಿಯುನ ಮೀನಾಕ್ಷಿಸುಂದರಂರನ್ನು ಕೊಲೆ ಮಾಡುವ ಪ್ರಯತ್ನ ನಡೆಸಿದ್ದಕ್ಕೆ ದೇಶಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ಆ ಬಿಜೆಪಿ ಮನುಷ್ಯನ ಮೇಲೆ ಸೆಕ್ಷನ್ 307(ಕೊಲೆ ಪ್ರಯತ್ನದ ಆಪಾದನೆಯ ಮೇಲೆ) ಪ್ರಕಾರ ಮೊಕದ್ದಮೆ ಹಾಕಬಾರದು ಎಂದು ಪಟೇಲ್ ಪೋಲೀಸರಿಗೆ ನಿರ್ದೇಶನ ನೀಡಿರುವುದಾಗಿ ಸಂದೇಹವಿದೆ. ಅವರ ಜಾತ್ಯಾತೀತ ಸ್ವರೂಪದ ಬಗ್ಗೆ, ನ್ಯಾಯಪರತೆಯ ಬಗ್ಗೆ ಇನ್ನೇನು ಹೇಳಬೇಕು?

ಮಾಗಡಿ ರಸ್ತೆ, ಕಾರ್ಮಿಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಗಿದೆ. ಅದಕ್ಕೆ ಒಂದೇ ಕಾರಣ ಅವರು ಸಿಐಟಿಯು ಬಾವುಟದಡಿ ಸಂಘಟಿತರಾಗಿದ್ದಾರೆನ್ನುವುದು. ಒಂದು ಮಿನಿ ಬಸ್ ಅಪಘಾತದಲ್ಲಿ ಮೂವರು ಸತ್ತಾಗ, ಕಾರ್ಮಿಕರು ಹೆಚ್ಚು ಬಸ್ಸುಗಳನ್ನು ಕೇಳಿ ಪ್ರತಿಭಟನೆ ನಡೆಸಿದರೆ ಅವರ ಮೇಲೆ ದಮನ ಚಕ್ರ!

ಜೆ.ಹೆಚ್.ಪಟೇಲರ ಪೋಲೀಸರ ಅತ್ಯಂತ ಹೀನ ಅಪರಾಧವೆಂದರೆ ಫೋರೆಸ್ ಕಾರ್ಮಿಕರ ಸಂಘದ ಕಾರ್ಯದರ್ಶಿ ಬಸವರಾಜ್ ವಿರುದ್ಧ ಹಾಕಿರುವ ಕೇಸು. ಬಸವರಾಜ್‌ರನ್ನು ಕಾರ್ಮಿಕ ಸಂಘದ ಚಟುವಟಿಕೆಗಳಿಂದ ದೂರವಿಡಲು ಒಂದು 'ಕೊಲೆ ಮೊಕದ್ದಮೆ'ಯನ್ನು ಅವರ ಮೇಲೆ ಹೇರಲಾಯಿತು. ಯಾವುದೇ ಅಪರಿಚಿತ ವ್ಯಕ್ತಿಯ ಹೆಣದ ಬಳಿ ಸಂಘದ ಕೆಲವು ಕರಪತ್ರಗಳನ್ನು, ಇತರ ವಸ್ತುಗಳನ್ನು ಇಟ್ಟು 'ಸಾಕ್ಷಿ'ಗಳನ್ನು ಸೃಷ್ಟಿಸಿ ಈ ಕೇಸು ಹಾಕಲಾಗಿದೆ.

ಮೇಲೆ ಹೇಳಿದ ಹೆಚ್ಚಿನ ಘಟನೆಗಳು ಬೆಂಗಳೂರಿನವು, ನಿಜ. ಆದರೆ ರಾಜ್ಯದ ಇತರೆಡೆ ಪಟೇಲ್ ಸರಕಾರದ ಪೋಲೀಸರು ಬೇರೆ ರೀತಿ ವರ್ತಿಸುತ್ತಿದ್ದಾರೆ ಎಂದು ಇದರ ಅರ್ಥವಲ್ಲ. ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್‌ನಲ್ಲಿ ನಮ್ಮ ಸಂಘದ ಮುಖಂಡರ ಮೇಲೆ ಪ್ರತಿಸ್ಪರ್ಧಿ ಮುಖಂಡರು ಹಲ್ಲೆ ನಡೆಸಿದಾಗ ಬಂಧಿಸಿದ್ದು ನಮ್ಮ ಸಂಘದ ಮುಖಂಡರನ್ನೇ.

ಮಳಖೇಡದ ರಾಜಶ್ರೀ ಸಿಮೆಂಟ್ಸ್‌ನಲ್ಲಿ ಕಾರ್ಮಿಕ ಸಂಘ ಆಡಳಿತ ವರ್ಗದ ನಡುವೆ ಉತ್ತಮ ಸಂಬಂಧಗಳಿದ್ದರೂ ಕಾರ್ಮಿಕ ಮುಖಂಡರ ಮೇಲೆ ಹಾಕಿದ ಸುಳ್ಳು ಕೇಸುಗಳನ್ನು ಸರಕಾರ ಇನ್ನೂ ಹಿಂತೆಗೆದುಕೊಂಡಿಲ್ಲ.

ಹೀಗೆ ಪ್ರಜಾಪ್ರಭುತ್ವ ಹಕ್ಕುಗಳ ಮುನ್ನಡೆಗಾಗಿ ರಚಿತವಾದ ಜೆ.ಹೆಚ್.ಪಟೇಲರ ಸರಕಾರ ಮತ್ತು ಪಕ್ಷ ತದ್ವಿರುದ್ಧವಾಗಿ ರಾಜ್ಯದಲ್ಲಿ ಸರ್ವಾಧಿಕಾರಶಾಹಿಯ ಮುನ್ಸೂಚನೆ ನೀಡುತ್ತಿದೆ.

ಕಾರ್ಮಿಕ ವರ್ಗದ ಹಕ್ಕುಗಳ ದಮನ ಪ್ರಜಾಸತ್ತಾತ್ಮಕ ಹಕ್ಕುಗಳ ದಮನದ ಪೀಠಿಕೆಯೆಂಬುದನ್ನು ಇತಿಹಾಸ ಮತ್ತೆ-ಮತ್ತೆ ತೋರಿಸಿಕೊಟ್ಟಿದೆ. ಜಾಗತೀಕರಣ ಮತ್ತು ಉದಾರೀಕರಣದ ಶಕ್ತಿಗಳು ಕಾರ್ಮಿಕ ಹಕ್ಕುಗಳನ್ನು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ನುಂಗಿ ನೀರು ಕುಡಿಯಲು ಕಾದು ನಿಂತಿವೆ. ಇದಕ್ಕೆ ಅವಕಾಶವಾಗದಿರಲಿ. ಜನತಾದಳ ಸರಕಾರ ಈ ತಪ್ಪುಗಳನ್ನು ಸರಿಪಡಿಸಿಕೊಳ್ಳದೆ ಪ್ರಜಾಪ್ರಭುತ್ವ ಚಳುವಳಿಗೆ ಮಹಾ ವಿಶ್ವಾಸಘಾತವಾಗಲು ಅವಕಾಶವಾಗದಿರಲಿ. ದುಡಿಯುವ ವರ್ಗ ಇಂತಹ ದಬ್ಬಾಳಿಕೆಯ ವಿರುದ್ಧ ಸಿಡಿದೇಳಬೇಕು, ಪ್ರತಿಭಟಿಸಬೇಕು.

ಜೂನ್ 28 ರಂದು ರಾಜ್ಯಾದ್ಯಂತ ಕಾರ್ಮಿಕರ ಪ್ರತಿಭಟನೆ

'ಈ ಕಾರ್ಮಿಕ-ವಿರೋಧಿ ನಿಲುವನ್ನು ಈಗಲಾದರೂ ಬಿಡಿ-ವಿಶ್ವಾಸ ಘಾತ ಮಾಡಬೇಡಿ' -

ಇದು ಕರ್ನಾಟಕ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಪಟೇಲ್ ಸರ್ಕಾರಕ್ಕೆ ಆಗಾಗ ನೀಡುತ್ತಾ ಬಂದಿರುವ ಎಚ್ಚರಿಕೆ. 'ಜನತಾ' ಎಂಬ ಹೆಸರನ್ನು ಹೊಂದಿರುವ ಪಕ್ಷ ಮೂಡಿ ಬಂದದ್ದು 1977 ರಲ್ಲಿ - ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದಲ್ಲಿ. ನಂತರ 1981 ರಲ್ಲಿ ಜನವರಿ ತಿಂಗಳಲ್ಲಿ ರೈತರು, ಕಾರ್ಮಿಕರು ವಿಧಾನಸೌಧಕ್ಕೆ ಮುತ್ತಿಗೆ ಹಾಕಿದ್ದ ದಿನ ಎಲ್ಲರೊಡನೆ ಪಟೇಲರೂ ಹಾಡಿದ್ದರು-

ಬೆಟ್ಟಗಳಾ ಒಡೆದವರು
ಅಣೆಕಟ್ಟು ಕಟ್ಟಿದವರು
....
....
ಸಿರಿಯು ಯಾರಿಗೋ
ಶ್ರಮವು ಯಾರಿಗೋ

ಆದರೆ ಅಧಿಕಾರಕ್ಕೆ ಬಂದ ಮೇಲೆ ಇವನ್ನೆಲ್ಲಾ ಅವರು, ಅವರ ಸಹಯೋಗಿಗಳು ಮರೆತಿರುವಂತೆ ಕಾಣುತ್ತದೆ. ಹೆಜ್ಜಾಲದ ಗೋಳೀಬಾರಿನಿಂದ ಆರಂಭಿಸಿದ ಈ ಪಟೇಲ್ ಸರಕಾರದ ಕಾರ್ಮಿಕ - ವಿರೋಧಿ ನೀತಿಗಳ ವಿರುದ್ಧ ರಾಜ್ಯದ ಕಾರ್ಮಿಕ ವರ್ಗ ಆಗಾಗ ತನ್ನ ಕ್ರೋಧವನ್ನು ತೋರ್ಪಡಿಸಿದರೂ ಅದಿನ್ನೂ ಮುಂದುವರೆದಿದೆ. ಈ ಹಿನ್ನೆಲೆಯಲ್ಲಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ, ಕಾರ್ಮಿಕ ಮುಖಂಡರುಗಳ ಮೇಲೆ, ಕಾರ್ಯಕರ್ತರ ಮೇಲೆ ಹಾಕಿರುವ ಎಲ್ಲಾ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ವಾಪಸು ಪಡೆಯಬೇಕೆಂದು ಒತ್ತಾಯಿಸಿ, ಕಾರ್ಮಿಕ ಇಲಾಖೆಯನ್ನು ಕಾರ್ಮಿಕ-ವಿರೋಧಿ ಇಲಾಖೆಯನ್ನಾಗಿ ಪರಿವರ್ತಿಸಬಾರದು ಎಂದು ಒತ್ತಾಯಿಸಿ ಮತ ಪ್ರದರ್ಶನ ನಡೆಸಲು ನಿರ್ಧರಿಸಿದೆ.

ರಾಜ್ಯದ ಸಾವಿರಾರು ಕಾರ್ಮಿಕರ ಈ ಪ್ರತಿಭಟನೆಗೆ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

ದೇವನೂರು ಮಹಾದೇವ ಶತಮಾನಗಳ ತುಳಿತ, ಅವಮಾನಕ್ಕೊಳಗಾದ ದಲಿತ ಜಗತ್ತಿನ ನಿಟ್ಟುಸಿರು ರೋಷ, ಕಣ್ಣೀರು, ದುಮ್ಮಾನಗಳನ್ನು ಅದರ ಎಲ್ಲಾ ತೀವ್ರತೆಯೊಂದಿಗೆ ಕನ್ನಡ ಸಾಹಿತ್ಯದಲ್ಲಿಳಿಸಿದ ಮೊದಲ ಹಾಗೂ ಶ್ರೇಷ್ಠ ಕಥೆಗಾರ. ಅವರ ಕತೆಗಳು ಕನ್ನಡ ಕಥಾ ಸಾಹಿತ್ಯದಲ್ಲೊಂದು ವಿಶಿಷ್ಟ ಮಾದರಿಯಾದವು. 'ಮಾರಿಕೊಂಡವರು' ಅವರ ಉತ್ತಮ ಕಥೆಗಳಲ್ಲೊಂದು. ಕೂತು ಉಂಡರೂ ಮುಗಿಯದಂತಹ ಆಸ್ತಿ ಇರುವ ಕಿಟ್ಟಪ್ಪನಿಗೆ ಮಾರಿ ಕೊಂಡ ದಿಕ್ಕುದೆಸೆ ಇಲ್ಲದ ಬೀರ ಮತ್ತು ಲಚುಮಿಯ ಒಂದು ರಾತ್ರಿಯ ಅನುಭವದ ಮೂಲಕ ಒಂದು ಜನಾಂಗದ ರೋಷ, ಕಸುವಿಸಿ ಅಸಹಾಯಕತೆಯನ್ನು ದೇವನೂರು ಮಹಾದೇವ ನಮ್ಮ ಮುಂದಿಡುತ್ತಾರೆ ಈ ಕಥೆಯಲ್ಲಿ ಕರುಳು ಚುರುಕ್ಕೆನ್ನುವಂತೆ ಕಲಾತ್ಮಕವಾಗಿ.



ಮಾರಿಕೊಂಡವರು

ಸಂಜೆಯ ಕೆಂಪಿಗೆ ಮೊಖಹಾಕಿ ಕುಂತ ಬೀರನ ತಲೆ ಒಳಗೆ ಕಿಟ್ಟಪ್ಪ ಥರಾವರಿ ಮೂಡತೊಡಗಿದನು. ಕಿಟ್ಟಪ್ಪ ಮದುವೆಗೆ ಒಪ್ಪಿ ಸಾಯುವ ಅಪ್ಪನಿಗೆ ನೆಮ್ಮದಿ ತರಲಿಲ್ಲ. ಅವನಿಗೆ ಅವನ ಹಠವೇ ದೊಡ್ಡದಾಯ್ತು. ಕಾಲೇಜಿಗೆ ಮಣ್ಣಾಕುವಾಗ ಆದ ಗೆಣಕಾತಿ ಹಿಂದೆಸುತ್ತಿ ಫೇಲಾಗಿ ಹಟ್ಟಿಗೆ ಬಂದರೂ ಅವಳ ಹುಚ್ಚು ಬಿಡಲಿಲ್ಲ. ವಾರ ಹದಿನೈದು ದಿನಕ್ಕೆ ಮೈಸೂರಿಗೆ ಹೋಗುವುದೂ ತಪ್ಪಲಿಲ್ಲ. ಗೌಡರು ಹೇಳುವಮಟ್ಟಿಗೂ ಹೇಳಿದರು, ಬೈದರು ಕೇಳಲಿಲ್ಲ. ವಯಸ್ಸಿಗೆ ಬಂದ ಮಗ, ಈಗೀಗಂತು ಗೌಡರು ಕಿಟ್ಟಪ್ಪ ಏನ ಮಾಡಿದರೂ ಕೇಳುವುದೇ ಇಲ್ಲ. 'ನಾ ಸಾಯೊವರ್ಗದ್ರೂ, ಸುಮ್ಗಿರೂ ಬಡ್ಡೀ ಮಗ್ನೆ ಅಂದ್ರೂ ಕೇಳೋಲ್ಲ, ಇನ್ನೂ ನಾನೇನು ಮಾಡ್ಲಿ? ಮನೆ ಮಾರಿದ್ರೂ ಚಿಂತಿಲ್ಲ. ಎಂದೋ ಹಾಳಾಯ್ತು, ಈ ಖದೀಮ ಬೊಡ್ಡೆದ್ನ ಪಳ್ಳಿಗೆ ಕಳಿಸ್ದೆ ನೇಗಿಲು ಹಿಡಿಸಬೇಕಿತ್ತು. ನಾನೆ ತಪ್ಪು ಮಾಡಿ ಅವ್ನ ಅನ್ನೋದು ಅಂದರೆ....' ಪೂರ್ತಿ ಹೇಳದೆ ಉಳಿದುದ ನುಂಗಿ ಒಂದು ಸಲ ಕಹಿ ಮೋರೆ ಮಾಡಿ ನಕ್ಕುಬಿಡುವರು. ಕೂತು ಉಂಡರೂ ಮುಗಿಯದಂಥ ಆಸ್ತೀಲಿ ಕಿಟ್ಟಪ್ಪ ಹೆಂಗಿರಬೇಕು? ಅದುಬಿಟ್ಟು ಈ ಗುಳ್ಳೆಲ್ಲೆ ಎಷ್ಟು ದಿನ ಕುಡಿದು ಬಿದ್ದಿಲ್ಲ? ವಾರ ಹದಿನೈದು ದಿನಕ್ಕೆ ಇದನ್ನೆ ಪಟ್ಟಾಗಿ ಹಿಡಿದು ಬುಟ್ಟವನೆ. ಎಷ್ಟು ಹೇಳಿದರೂ ವಾಸಿಬಿಡುತ್ತಾನೆ, ಹೆಚ್ಚಿಗೆ ಮಾತಾಡೋಕೆ ಅನ್ನ ಹಾಕುವ ದಣಿ...

ಬರುವ ಯುಗಾದಿಗೆ ಇಲ್ಲಿಗೆ ಬಂದು, ವರ್ಷ ಸಂದುತ್ತದೆ. ದಿಕ್ಕುದೆಸೆ ಕಾಣದೆ ಗಂಟು ಮೂಟೆ ಕಟ್ಟಿ ಲಕ್ಷ್ಮಿಯೊಡನೆ ಹೊರಟಾಗ ಕೈಲಿ ಬಿಡುಗಾಸಿಲ್ಲ. ರಾತ್ರಿ ರೈಲು ಹತ್ತಿ ಹಿಂದಲ ಡಬ್ಬಿಲಿ ಕೂತು ಮೈಸೂರು ತಲುಪಿದಾಗ ಹೊತ್ತು ಮೀರಿತ್ತು. ಸ್ಟೇಷನ್ನಿನಲ್ಲೆ ಮಲಗಿದ್ದು ನಲ್ಲೀಲಿ ಮೊಖ ತೊಳೆದು ಏನೂ ಮಾಡಲು ತೋಚದೆ ತಲೆ ಮೇಲೆ ಕೈ ಹೊತ್ತು ಕೂತಾಗ ಲಕ್ಷ್ಮಿಯೇ ನಂಜನಗೂಡು ಕಡೆಗೆ ಹೋಗುವ ಅಂದದ್ದು. ಆಗಲಿ ಎಂದು ಹೊರಟಿದ್ದ ರೈಲು ಹತ್ತಿ ಕೂತು ಟಿಕೇಟ್ ಕೇಳಲು ಬಂದವರ ಕೈಲಿ ಸಿಕ್ಕಿ ಫಜೀತಿ ಪಡುವಾಗಲೇ ಗೌಡರು ಅವರಿಗೆ ಸಮಾಧಾನ ಮಾಡಿ ಕಳಿಸಿ ಯಾರು ಎಂತು ಎತ್ತ ಅಂತ ವಿಚಾರಿಸಿ, ಕೆಲಸಕ್ಕಾಗಿ ಊರು ಬಿಟ್ಟು ಬಂದಿದ್ದೀವಿ ಅನ್ನುತ್ತಲೆ ವಸಿ ಹೊತ್ತು ಯೋಚಿಸಿ, "ನಮ್ಮ ತೋಟದಲ್ಲಿ ಕೆಲ್ಸ ಮಾಡಾಕೆ ತಳವಾಗಿ ಇರೋ ಎರಡಾಳು ಬೇಕು. ಅಲ್ಲೆ ಮನೆಮಠವಿದೆ. ನೀವು ಇರೋದಾದ್ರೆ...." ಅಂದರು, ಗೌಡರು ದೇವರಂತೆ ಕಂಡರು.

ಊರ ಕಡೆ ಬೀರ ತಿರುಗಿ ನೋಡಿದನು. ಆಗಲೇ ಹೊತ್ತು ಮುಳುಗಿ ಕತ್ತಲಾಗಿತ್ತು. ಇಷ್ಟಾಗ್ಲೇ ಕಿಟ್ಟಪ್ಪ ಬರಬೇಕಿತ್ತಲ್ಲ ಎಂದು ಯೋಚಿಸುತ್ತಾ ಬೀಡಿ ಹತ್ತಿಸಿದನು. ದೂರದಲ್ಲಿ ಒಂದು ಬ್ಯಾಟರಿ ಬೆಳಕು ಹತ್ತಿರವಾಗುತ್ತಿತ್ತು. ಕತ್ತಲ ಸೀಳಿ ಹತ್ತಿರವಾಗುತ್ತಿದ್ದ ಬ್ಯಾಟರಿ ಬೆಳಕನ್ನೇ ನೋಡುತ್ತಾ ಅದು ಓಡಿದ ಕಡೆ ಕಣ್ಣಾಡಿಸುತ್ತಾ ಹತ್ತಿರ ಬರುತ್ತಲೆ ಅಂತು ನೋಡಿದಾಗ ಮಿಲ್ಲಿನ ಹುಡುಗ ಪಾಷ ಬಂದು ನಿಂತನು. ಬಂದವನೆ "ಮೋಟರ್ನ ಕಾಯಲ್ಲು ಕಿಟ್ಟೋಯ್ತಲೆ ಕಿಟ್ಟಪ್ಪನೋರು ಮೈಸೂರ್ಗೆ ತಕ್ಕಂಡೋದ್ರು ಬರಕಿಲ್ವಂತೆ" ಅಂದ. "ಆಗಾ" ಅಂದಾಗ ಪಾಷ ತಲೆಯಾಡಿಸಿ, "ಹೋಗ್ತಿನಿ ಕನಣ್ಣೋ" ಎಂದವನೆ ಪಕ್ಕಕ್ಕೆ ತಿರುಗಿದಾಗ ಬೀರ "ಬಾರೋ ಸಾಬು ಉಂಡ್ಕಂಡು ಹೋಗುವಂತೆ" ಅಂದನು. "ಆಗಲ್ಲ ಕನಣ್ಣಾ, ಜನ ಜಾಸ್ತಿ ಕಾದವ್ರೆ ಮಿಲ್ನಲ್ಲಿ, ಈಗ ಸಣ್ಣ ಮಿಲ್ಲ ಓಡಿಸ್ತ ಅವ್ನಿ ಹೇಳು ಅಂದ್ರು, ಹೇಳಾಕೆ ಬಂದಿ ಅಷ್ಟೇ" ಎಂದು ಸರಸರನೆ ಹೆಜ್ಜೆ ಇಟ್ಟನು. ಬೀರ ಕೆಮ್ಮಿ ಹತ್ತಿಸಿದ ಬೀಡಿ ಕೈಗೆ ಸುಡಲು ಮತ್ತೊಂದು ತೆಗೆದು ಅದಕ್ಕೆ ಮುತ್ತಿಕ್ಕಿಸಿ ಗುಡಿಸಲ ಒಳಕ್ಕೆ ನುಗ್ಗಿದನು.

ಲಕ್ಷ್ಮಿ ಅಂದುಕೊಂಡಳು, ಈಗೀಗ ತುಂಬ ಚಳಿ ಹಿಡಿಯುತ್ತೆ. ಒಳಗಿದ್ದರೂ ಇಷ್ಟು ಚಳಿ, ಇನ್ನೂ ಹೊರಗೆ? ಅಪ್ಪನ ಆಸ್ತಿ ಅಂತ ಬೀರ ಯಾವಾಗಲೂ ಆ ಕಲ್ಲಿನ ಮೇಲೆ ಕೂತಿರುತ್ತಾನೆ. ಹೊರಕ್ಕೆ ಹೋಗಿದ್ದಾಗ ಬೇಕು ಅಂತ ಕೆಮ್ಮಿದರೂ ತಿರುಗಿ ನೋಡಲಿಲ್ಲ. ಕೊತಕೊತನೆ ಮರಳುತ್ತಿದ್ದ ಸಾರಿಗೆ ಉಪ್ಪು ಹಾಕಿದಳು. ಗಮ್ಮನೆ ವಾಸನೆ ಗುಡಸಲಿನ ಪೂರ್ತ ಹರಡಿತು. ನೆರಕೆ ಸದ್ದಾಗಲು ಬಗ್ಗಿ ನೋಡಿದಾಗ ಬೀರ ಬರುತ್ತಿದ್ದು ಕಿಟ್ಟಪ್ಪ ಇರಲಿಲ್ಲ. "ಕಿಟ್ಟಪ್ಪ ಬರಾಕಿಲ್ವಂತೆಕಮ್ಮಿ... ಮೈಸೂರ್ಗೆ ಹೋಗುವನಂತೆ ಪಾಷ ಹೇಳೋದ" ಎಂದವನೆ ಇಟ್ಟಿದ್ದ ಸರಾಪು ಬಾಟಲಿ ಕಡೆ ನಡೆದನು. ಇಂದು ಕಿಟ್ಟಪ್ಪ ಬರದಿದ್ದರೆ ಎಲ್ಲವನ್ನು ಈ ದೈತ್ಯ ಕುಡಿದು ಏನು ಅವಾಂತರ ಮಾಡುವನೊ ಎಂದು ಲಕ್ಷ್ಮಿಗೆ ಅಳುಕೆನಿಸಿದರೂ ಅವ ಹೇಗೆ ಆಡಿದರೂ ತನಗೆ ಪಾಠವಾಗಿದೆಯಲ್ಲಾ ಎಂದು ಸಮಾಧಾನವೂ ಆಯ್ತು. ಅದರೊಡನೆ ನಗೂನು ಬಂತು.

ಅತ್ತ ಬೀರ ಹರಿವಾಣದ ಮುಂದೆ ಕೂತು ಸರಾಪಿನ ಎರಡು ಬಾಟಲಿಯ ಬಿರಡೆಗಳನ್ನೂ ಕಳೆದು ಪಕ್ಕದಲ್ಲಿ ಇಟ್ಟುಕೊಂಡನು. ಹಿಟ್ಟಿನೊಡನೆ ಬಂದ ಲಕ್ಷ್ಮಿಗೆ ನಗು ಬಂತು. 'ನಿನ್ನ ದರಿದ್ರ ಆಸೆಗೆ ಮಣ್ಣಾಕ.... ವಸಿ ಕುಡಿ ಅಂದಳು. ಬೀರ ಕಕಕ ನಕ್ಕು "ಈವೊತ್ತು ಹೊಟ್ಟೆ ಇರೋ ಅಷ್ಟು ಕುಡುದು ತಿಂದು ಸುಲಿದು ಬಿಡಬೇಕು ಅಂತ" ಅಂದನು. ಈಗ ಸುಮ್ಮನೆ ಅಂದರೂ ಕುಡಿದ ಮೇಲೆ ಹಾಗೆ ಮಾಡುತ್ತಿದ್ದ ಅವ. ಚಳಿ ಅನಿಸಲು ಲಕ್ಷ್ಮಿ ಒಳಕ್ಕೆ ಬಂದು ಬೂದಿ ಸಮ ಗಟಗಟ ಮುಚ್ಚಿದ ಕೆಂಡ ಕೆದಕಿ ಕೈ ಕಾಯಿಸತೊಡಗಿದಳು. ಬೀರ, ಒಂದೇ ಸಮ ಗಟಗಟ ಕುಡಿಯೋದು ಕೇಳಿಸುತ್ತಿತ್ತು. "ಇನ್ನೊಸಿ ತಂದಾಕು ಬಾಮ್ಮಿ" ಅಂದಾಗ ಲಕ್ಷ್ಮಿಗೆ ಅಚ್ಚರಿಯಾಗಿ ಅರೆ ಇವ್ನ ಎಷ್ಟು ತಿಂತಾನಪ್ಪ ದಯ್ಯ ಹಿಡಕಂಡವರಂತೆ ಅಂದು ಕೊಂಡು ಮುಚ್ಚಲು ತುಂಬ ಮಾಂಸ ತುಂಬಿ ಕೋಣೆಯಿಂದ ಬಂದಳು. ಬೀರನ ಸುತ್ತ ಮೂಳೆಗಳು ಬಗೆಬಗೆಯಾಗಿ ಬಿದ್ದಿದ್ದವು. ಸರಾಪು ಒಂದುವರೆ ಬಾಟಲಿನಷ್ಟು ಖಾಲಿಯಾಗಿತ್ತು. "ಅವ್ವೀ... ಇದ್ಯಾನ ಮಾರಾಯ ದಯ್ಯ ದಂಗೆ ತಿನ್ತಿ' ಅನ್ನಲು ಬಾಯಿಗೆ ಬಂದರೂ, ಕುಡಿದಿರುವನೆಂದು ಸುಮ್ಮನಾಗಿ ಮುಚ್ಚಲಲ್ಲಿ ಇದ್ದುದನ್ನು ಹರಿವಾಣಕ್ಕೆ ಬಗ್ಗಿಸಿದಳು. ಬೀರನ ಸುತ್ತ ಗಬ್ಬು ವಾಸನೆ ಹರಡಿತ್ತು. ಲಕ್ಷ್ಮಿಗೆ ತಲೆ ತಿರುಗಿ ವಾಕರಿಕೆ ಬರುವಂತಾಗಲು ಬಾಯಿಗೆ ಸೆರಗಿನ ಬಟ್ಟೆ ತುರುಕಿ ಕೋಣೆಗೆ ಓಡಿ ಬಂದು ಕುಂತಳು. ಬೀರ ಈಗೀಗ ಬದಲಾಯಿಸಿ ಹೋಗವನೆ. ಕುಡಿಯೋದು ಆಮೇಲ ಉಸಿರು ತೆಗೆದರೂ ಬೀಡಿ ಬೀಡಿ ಅಂತ ಇಳಿದುಹೋಗವನೆ, ಮೊದಲ ಕಳೆಯೇ ಇಲ್ಲ. ಎಷ್ಟು ಹೇಳಿದರೂ ತಳ್ಳಿ ಬಿಡುತ್ತಾನೆ. ಮಲ್ಲಿಪುರದ ಸಾವ್ಕಾರ್ರು ಕುಡಿದು ಎದೆಯೊಡೆದು ಸತ್ತೋದ ವಿಷ ಹೇಳ್ತಲೆ ವಸಿ ಹೊತ್ತು ಸುಮ್ನಿದ್ದು "ಯಾರು ಸಾಸ್ವತ ಹೇಳು" ಅಂದು ಒಂಥರಾ ನಕ್ಕ. ಅದಕ್ಕೆ "ಕುಡಿಯೋದು ಬಿಟ್ಟರೆ ಮುಳುಗಿ ಹೋಗದು ಏನ?" ಅಂದುದಕ್ಕೆ ಒಂದು ರೀತಿ ನನ್ನನ್ನೆ ನೋಡಿ 'ನಾನು' ಅಂದು ನುಂಗಿಕೊಂಡನು.

ಬಗ್ಗಿ ನೋಡಿದರೆ ಬೀರ ಕಾಲುಚಾಚಿ ಆರಾಮ ಬಿದ್ದುಕೊಂಡಿದ್ದನು. ಒಂದು ತೊಟ್ಟು ಸರಾಪೂ ಇರಲಿಲ್ಲ. ಹರಿವಾಣದಲ್ಲಿ ಎರಡು ತುಕಡ ಮಾಂಸ ಉಳಿದಿತ್ತು. "ಥೂ ಇವ್ನ ಗೋಳೆ ಇಷ್ಟು" ಎಂದು ಗೊಣಗಿ ಹೊರಕ್ಕೆ ಬಂದು ಸುತ್ತ ಇದ್ದ ಮೂಳೆ ಗೋರಿ ಹರಿವಾಣಕ್ಕೆ ಹಾಕಿದಳು. ಅರೆಗಣ್ಣು ಬಿಟ್ಟಿದ್ದ ಬೀರ ಅಗಲವಾಗಿ ಕಣ್ಣು ತೆಗೆದರೆ ಕೆಂಡ ಕಂಡಂತಾಯ್ತು. ಅವನು ಒಂದೆರಡು ಸಲ ಹಾಹೊ ಅಂದು "ಯಾವನೋ ಅವ್ನ ನನ್ನ ತವಕ ಬಂದಿರೋ ಧೀರ?" ಅಂದನು. ಲಕ್ಷ್ಮಿ ಕ್ಯಾಣಸಾರದಿಂದ "ಸುಮ್ನೆಬಿದ್ಕೊ ಇನ್ನು" ಅಂದಾಗ "ಓಯ್ ನನ್ನ ಲಚುಮಿ.... ಬಾಬಾ ಚಿನ್ನ ಬಾ, ನಾಯಾರೊ ಅಂತೀನಿ" ತಡೆಯಲು ಯತ್ನಿಸಿ ಆಗದೆ ನೆಲಕ್ಕೆ ಒರಗಿ ಕಣ್ಣು ಮುಚ್ಚಿ ಲಚುಮಿ ಲಚುಮಿ ಎಂದು ಗೊರಗುಟ್ಟ ತೊಡಗಿದನು. ಲಕ್ಷ್ಮಿ ಕೋಣೆಯ ಮೂಲೆಯಲ್ಲಿ ಚಾಪೆಹಾಸಿ ಗೋಡೆ ಕಡೆಗೆ ತಿರುಗಿ ಬಿದ್ದುಕೊಂಡಳು. ರಗ್ಗನ್ನು ಮೊಖ ತುಂಬ ಹೊದ್ದು ದೀಪವಾರಿಸಿದಳು.

ನಕ್ಕಳು. ಬೀರನಿಗೆ ಕೋಪ ನೆತ್ತಿಗೇರಿತು. "ನಾ ಕರದ್ರೂ ನೀ ಬರಾಕಿಲ್ಲಮ್ಮಿ" ಅಂತಲೆ ಲಕ್ಷ್ಮಿ "ಸುಮ್ನೆ ಬಿದ್ಕೊ ಇನ್ನು" ಗಡಸಿನಿಂದ ಹೇಳಿದಳು. "ಏನಮ್ಮಿ ನಿನ್ನ ಧಿಮಾಕು! ಇಷ್ಟಕ್ಕೂ ಬಂದುಬುಟ್ಯಾ" ಚೀರಿದ, ಲಕ್ಷ್ಮಿ ಏನನ್ನೊ ಗೊಣಗಿದಳು. "ನೀ ಮಾತಾಡದಿಲ್ವ? ನನ್ನೊಂದ್ಗೆ ಯಾಕೆ ಮಾತಾಡ್ತಿ ಹೇಳು.... ಕಿಟ್ಟಪ್ಪನೊಂದಿಗೆ ಮಾತಾಡೋದ ಬುಟ್ಟು. ಎಷ್ಟಾದ್ರೂ ಅವ ನಿನ್ನ ಮಿಂಡಾ ಅಲ್ವಾ?" ಎಂದನು ಲಕ್ಷ್ಮಿಗೆ ಬಾನೇ ಬಂದು ಮೊಗಚಿಕೊಂಡಂತಾಯ್ತು. ಮೈಕೈ ಸಣ್ಣಕ್ಕೆ ನಡುಗಿದವು. ತುಂಬಾ ಧೈರ್ಯ ತಂದು "ನೀ ಯ್ಯಾನ್ನ ಅನ್ನೋದು? ಅಂದು ಕಿವಿನಿಮಿರಿಸಿ ಕೂತುಕೊಂಡಳು. "ನಾ ಯ್ಯಾನ್ನ ಅನ್ನೋದು ಅಂತೀ ಯೇನಮ್ಮಿ, ಕೊತ್ತಿ ಕಣುಮ್ಚ್ಕಂಡು ಹಾಲ್ಕುಡಿದ್ರ ಗೊತ್ತಾಗಲ್ವಂತೆ! ಹೆಹ್ಹೆಹ್ಹೆ ಗತಿ ಕಾಣಸ್ತೀನಿ ಕುದಾ... ಬೆಳ್ಗಗಲಿ. ನೀನೂ ಇಲ್ಲ, ಅವ್ನೂ ಇಲ್ಲ. ಬಾವ್ಗತರದ್ ಹಾಕ್ತೀನಿ. ನನ್ನನ್ನ ಅಷ್ಟಕ್ಕು ತಪರ ತಿಳ್ಕೊಂಡಿವಿರಿ! ಈಗ ಏನಾಯ್ತು ತಕ್ಕೊ..... ಬೆಳಗಾಗೋದೆ ಇಲ್ವಾ? ನಾಳೆ ಅವ್ನ ಬರೋದೆ ಇಲ್ವಾ? ಬಂದೇ ಬತ್ತಾನೆ. ಮಿಂಡಗಾತಿ ಮೊಖ ನೋಡಕೆ...." ಹಹಾ ನಕ್ಕು ಸ್ವಲ್ಪ ಹೊತ್ತು ಎಡಬಿಡದೆ ಕೆಮ್ಮಿ ಕ್ಯಾಕರಿಸಿ ಅಲ್ಲೆ ಉಗುದು 'ಉಸ್ಸಪ್ಪೊ' ಅಂದು ಉಗುಳು ನುಂಗಿದನು. "ಮಚ್ಚು ಮಡಗಿವನಿ ತೊಲೆ ಮ್ಯಾಗ... ರಡಿ ರಡಿಯಾಗೈತ" ಅಂದದ್ದು ಗಟ್ಟಿಯಾಗಿತ್ತು. ನೆಲಕ್ಕೆ ಕೈಯೂರಿ ಕೂತಳು. ಅವ ನಕ್ಕ, ಕೆಮ್ಮಿದ, 'ಉಸ್ಸಪ್ಪೊ' ಅಂದ. ಕ್ಯಾಕರಿಸಿ ಉಗಿದ. ಚಣ ಹೊತ್ತು ಸದ್ದಿಲ್ಲ. ಲಕ್ಷ್ಮಿ ಕುಳಿತೇ ಇದ್ದಳು. ತಲೆಗಿರ್ ಅನ್ನುತ್ತಿತ್ತು. ತೊಡೆಗಳು ನಡುಗುತ್ತಿದ್ದವು. ಎದೆ

> **ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚಮೀನ ಕವಿಚಿಗೊಂಡಿದೆ ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವಿಚಿಕೊಂಡಿದೆ......**
> **ಲಕ್ಷ್ಮಿ ಎದ್ದು ಚಣಹೊತ್ತು ಸುಧಾರಿಸಿಕೊಂಡರೂ ಮಂಕು ಆರಿರಲಿಲ್ಲ, ರಾತ್ರಿ ನೆಪ್ಪು ಮೈಚುರುಗೊಟ್ಟಿಸಲು ತೊಲೆ ಕಡೆ ಕಣ್ಣೋಡಿದಾಗ ಮಚ್ಚು ಅಲ್ಲೇ ಇತ್ತು.......**

ಡವ ಡವ ಹೊಡೆದು ಕೊಳ್ಳುತ್ತಿತ್ತು. ವಸಿಹೊತ್ತಾದ ಮೇಲೆ ಗೊರಕೆ, ಯಮದ ಗೊರಕೆ ಕೇಳಿಸಿತು.

ಲಕ್ಷ್ಮಿಗೆ ಗರ ಹಿಡಿದಂತಾಯ್ತು. ಕುಡುದು ಮಾತಾಡಿದ ಅಂತ ತಳ್ಳಿ ಹಾಕುವಂತಿಲ್ಲ ಸುಳಿವು ಹತ್ತದೆ ಮಾತು ಹೆಂಗೆ ಬತ್ತದೆ? ಕುಡುದು ಮಾತಾಡಿದರೂ....? ಬೀರನಿಗೆ ಎಲ್ಲವೂ ಗೊತ್ತಾಗಿದೆ. ಏನು ಮಾಡುವನೊ ದೇವರೆ. ಅವನ ಆಟವ ಈಗೇನು ನೋಡುತ್ತಿಲ್ಲ. ಎರಡು ಬೆಳೆ ಪೈರಿನಿಂದಲೂ ಚಿಂದಾಗಿ ಗೊತ್ತು. ಹಾಸ್ಟಲಿನ ಊಟದ ಬೆಲ್ಲು ಹೊಡೆದು ಸುಮಾರು ಹೊತ್ತಾಗಿತ್ತು. ಈಗೀಗ ಸಮರಾತ್ರಿ ಹತ್ತಿರವಾಗಿರಬೇಕು. ಗುಡಿಸಲ ಪೂರ್ತ ಗೊರಕೆ. ಸರಾಪಿನ ನಾತ ಗಬ್ಬೊ ಅನ್ನಿಸುತ್ತಿತ್ತು. ಬೀರ ಹೊರಳಾಡಿದ. ಸ್ವಲ್ಪ ಹೊತ್ತು ಸಮಾ ಕೆಮ್ಮಿದ. ಆಮೇಲೆ ಪುನಃ ಗೊರಕೆ. ಲಕ್ಷ್ಮಿಗೆ ಮಲಗಬೇಕೆನಿಸಿತು. ಆಕಳಿಸಿದಳು. ತಲೆಯನ್ನು ಮಂಡಿಗೆ ಅದುಮಿ

ಕತ್ತಲು ಕವಚುತ್ತಲೆ "ನಮ್ಮ ಸೂರ್ಯಪ್ನ ಕಿತ್ಕೊಂಡವ ಯಾರ್ಲ" ಬೀರ ನಿಧಾನವಾಗಿ ಕೇಳಿದನು. ಲಕ್ಷ್ಮಿಗೆ ತಡೆಯಲಾಗಲಿಲ್ಲ. ನಗುಬಂತು. ಗಟ್ಟಿಯಾಗಿ ನಕ್ಕಬಿಟ್ಟಳು. "ನಕ್ತಿಯಾ? ನಗು ನಗು, ನೀನೆಲ್ಲೊ ರಾವ್ಗೀವ ಇರ್ಬೇಕು". ಅದಕ್ಕೂ ಲಕ್ಷ್ಮಿ ಕಿಸಕಿಸ ನಕ್ಕಳು. "ನೀ ಎಲ್ಲೋದ್ರೂ ಬುಡಕಿಲ್ಲ ನೋಡು. ಒಳ್ಳೆ ಮಾತ್ನಲ್ಲಿ ಬುಡು. ಇಲ್ದಿದ್ರೆ..." ಗಟ್ಟಿಯಾಗಿ ಕೂಗಿದ್ದಕ್ಕೆ ಲಕ್ಷ್ಮಿಗೆ ತಲೆ ಚಿಟ್ಟೆನಿಸಿತು. "ಸುಮ್ನೆ ಬಿದ್ಕೊಳ್ಳದ ಕಲ್ತಗೊ, ಇನ್ನು ನನ್ನ ಗೋಳು ಹುಯ್ಕೋಬೇಡ" ಅಂದಳು. ಬೀರ ಸ್ವಲ್ಪ ಹೊತ್ತು ಸುಮ್ಮನಿದ್ದನು. ದನಿ ಗುರುತು ಹಿಡಿದವನಂತೆ ನಕ್ಕು "ಹೊಯ್ ಈಗ ಗೊತ್ತಾಯ್ತು. ನನ್ನ ಲಚುಮಿ, ಚಂದುಳ್ಳಿ ಲಚುಮಿ" ಅಂದನು. ಲಕ್ಷ್ಮಿ ಮಾತಾಡಲಿಲ್ಲ. "ಇನ್ನೂ ನಾಚ್ಕೆಯಾ ನಿಂಗೆ? ಈಟು ದಿನ ಆದ್ರೂ! ಬಾ ಅಂದರೆ ಬರ್ಬೇಕು". ಲಕ್ಷ್ಮಿ ಈಗಲೂ ಮಾತಾಡಲಿಲ್ಲ. ಎಳೆ ಕೂಸಂತೆ

ಕುಂತು ಕಣ್ಣು ಮುಚ್ಚಿದಳು. ತೋಟಕ್ಕೆ ಕಾಲಿಂಟಿದ ಮಾರನೆ ದಿನವೆ ಕಿಟ್ಟಪ್ಪ ಬಂದದ್ದು. ಬೀರ 'ನಮ್ಮ ಸಾವ್ಕಾರ್ರ ಮಗನೋರು' ಅಂದ. ಕಿಟ್ಟಪ್ಪ ನನ್ನನ್ನೆ ಒಂಥರಾ ನೋಡಿದರು. ಬೀರ ಕೆಮ್ಮಿದ. ನಾನು ಕತ್ತನು ಬಾವಿ ಕಡೆ ತಿರುಗಿಸಿ ನೆಲನೋಡುತ್ತಿದ್ದು ಬೆವತು ನಿಲ್ಲಲೂ ಆಗದೆ ಕಸಗುಡಿಸಬೇಕೆಂದು ಒಳಕ್ಕೆ ನುಗ್ಗಿದೆ. ಕಿಟ್ಟಪ್ಪ ಹೊರಗೆ ಇದ್ದರೂ ಇನ್ನೂ ನನ್ನನ್ನೇ ನೋಡುತ್ತಿರುವನೇನೊ ಅನ್ನಿಸುತ್ತಿತ್ತು. ಹೋಗುವವರೆಗೂ ಹೋದ ನಂತರವೂ......

ಒಂದು ದಿನ ಸರಾಪಿನ ಬಾಟಲಿಗಳನ್ನು ಬೀರನೆ ಹಲ್ಲು ಕಿರಿಯುತ್ತ ತಂದನು. ಅವತ್ತಿನ ಮಾಂಸವೂ ಹೆಚ್ಚಾಗಿಯೆ ಇತ್ತು. ಇಂದು ಕಿಟ್ಟಪ್ಪ ಬರುವರು ಅಂದ. ಅದಕ್ಕೇನೂ ಮಾತಾಡಲಿಲ್ಲ, ಮಾಡಿ ಕೊಟ್ಟೆ. ಕತ್ತಲಾಗಿ ಚಣಹೊತ್ತು ಕಳೆಯಲು ಕಿಟ್ಟಪ್ಪ ಬಂದರು. ತುಂಬವೆ ಶಿಸ್ತು ಮಾಡಿಕೊಂಡಿದ್ದರು. "ಏನಾರ ಮದ್ವೆ ಹೆಣ್ಣ ನೋಡಾಕ ಬಂದಿದಿರಾ ಕಿಟ್ಟಪ್ಪ?" ಬೀರ ನಗುನಗುತ್ತ ಅಂದಾಗ ಕಿಟ್ಟಪ್ಪನೂ ನಕ್ಕನು. ಹುಟ್ಟುತ್ತಲೆ ನಗುತ್ತ ಹುಟ್ಟಿದನೇನೊ ಅವ.

ತಿಂದರು, ಇಬ್ಬರು ತಿಂದರು, ಕುಡಿದರು, ಬೀರನೆ ಹೆಚ್ಚು ಬಗ್ಗಿಸಿ ಕೊಂಡನು. ಆಮೇಲೆ ಕಣ್ಣು ತೇಲಿಸಿ ಕಾಲುಚಾಚಿ ಬಿದ್ದುಕೊಂಡನು. ಕಿಟ್ಟಪ್ಪ ಎಷ್ಟು ಹೊತ್ತಾದರೂ ಹೋಗಲಿಲ್ಲ. ನಾನು ಕೋಣೆ ಒಳಕ್ಕೆ ಹೋದೆ. ಕಿಟ್ಟಪ್ಪ ಕೆಮ್ಮಿ ನಾವು ಬರುವುದಕ್ಕೆ ಮುಂಚಿನಿಂದಲೂ ಇದ್ದ ಹಗ್ಗದ ಹುರಿ ಮಂಚದ ಮೇಲೆ ಕುಂತು ಹಾಗೆ ಇದ್ದು ಆ ಮೇಲೆ ನಿಧಾನಕ್ಕೆ ಅಲ್ಲೆ ಒರಗಿದನು. ಜೀವ ಕೈಲಿಡಿದು ಕೋಣೆ ಒಳಗೆ ಕಂಬಳಿ ಹಾಸಿ ಮಲಗಿ ರಗ್ಗು ಹೊದ್ದು ದೀಪವಾರಿಸಿದೆ. ಕತ್ತಲಾಯಿತು, ಕಣ್ಣು ಮುಚ್ಚಿದ್ದರೂ ನಿದ್ದೆ ಸುಳಿಯಲಿಲ್ಲ. ಏನೇನೊ ಊರ ಕಡೆಯ ನೆನಪುಗಳು....

ಸ್ವಲ್ಪ ನಿದ್ದೆಯ ಮಂಕು, ಹಜಾರದಿಂದ ಬೀರನ ಗೊರಕೆ ಚೆನ್ನಾಗಿ ಕೇಳಿಸುತ್ತಿತ್ತು. ಕಿಟ್ಟಪ್ಪನ ಆಗಾಗಲ ಕೆಮ್ಮು, ಹೊರಳಿದಾಗ ಸರಸರ ಸದ್ದು. ಬೀಡಿ ಎಳದಾಗಿನ ಕೆಂಪು ಬೆಳಕು. ಪುನಃ ಬೀರನ ಗೊರಕೆ. ಎಲ್ಲವನ್ನೂ ಕಾಣದ ಹಾಗೆ ಕರಗಿಸಿಕೊಂಡಿರುವ ಗವಗತ್ತಲು. ಬಿಗಿಯಾಗಿ ಕಣ್ಣು ಮುಚ್ಚಿದರೂ ನಿದ್ದೆಯ ಸುಳಿವೇ ಇಲ್ಲ. ಕೆಮ್ಮುವುದೂ ಕಷ್ಟ. ಉಗುಳು ನುಂಗಲೂ ಆಗದು. ನುಂಗಿದರೆ ಗೊಳಕ್ ಅಂತ ಸದ್ದಾಗುತ್ತದೆ. ಸುತ್ತಲೂ ಎಂಥದೂ ಸದ್ದಿಲ್ಲ. ಅದೇ ದೊಡ್ಡದಾಗಿ ಕೇಳಿಸುತ್ತದೆ. ಬೀರನೇನೊ ಗೊರಕೆ ಹೊಡೆಯುತ್ತಿದ್ದಾನೆ. ಕಿಟ್ಟಪ್ಪನಂತೂ ಕಣ್ಣು ಮುಚ್ಚಿಲ್ಲ ಅಂತಕಾಣುತ್ತೆ. ಬೀಡಿ ಸೇದೋದು ಕೆಮ್ಮುವುದು ಮಾಡುತ್ತವನೆ. ಕಳೆಕೀಳಲು ಬಂದಿದ್ದ ಪುಟ್ಟಿ ಕಿಟ್ಟಪ್ಪನ ಚರಿತ್ರನೆ ಒದರಿ ಹೋಗವಳೆ. ನಂಗೂ ನಿದ್ದೆ ಇಲ್ಲ. ಗೊತ್ತಾಗಿಬಿಟ್ಟರೆ? ಥೂ.

"ಲಕ್ಷ್ಮಿ" ಮೆಲ್ಲನೆ ಕರೆದು ಮೈ ಮುಟ್ಟಿ ಅಲ್ಲಾಡಿಸಿದಾಗ ತಟ್ಟನೆ ಎಚ್ಚರವಾಗಿ ಬೆಚ್ಚಿಬಿದ್ದಳು. ಯೋಚನೆ ದಿಗಿಲಿನ ಮಧ್ಯೆ ಯಾವಾಗ ನಿದ್ದೆ ಬಂತೂ ಗೊತ್ತಿರಲಿಲ್ಲ. ಜೋಪಡಿ ಹಾರಿಹೋಗುವಂತೆ ಎದೆಬಡಿದುಕೊಳ್ಳತೊಡಗಿತು. ಮೆಲ್ಲನೆ ಮೈಸವರಿದ. ಉಸಿರ ಹಿಡಿತ ತಪ್ಪಿತು. ಒಂದು ಕಯ್ಯತೊಡೆಯ ಮೇಲೆ ಇಟ್ಟು ಇನ್ನೊಂದು ಕಯ್ಯಿಂದ ಗಲ್ಲ ಹಿಡಿದು ಅಲ್ಲಾಡಿಸಿದನು. ಇನ್ನು ಸರಿಯಲ್ಲ ಅಂದುಕೊಂಡು ಬೆಚ್ಚಿತ್ತವಳಂತೆ 'ಯಾರು?' ಅಂದಾಗ 'ನಾನು ಕಿಟ್ಟಪ್ಪ' ಅಂದನು. ಬೀರನ ಗೊರಕೆ ಕೇಳಿಸಿದಾಗ ಮೈನಡುಗಿತು. ಕಿಟ್ಟಪ್ಪನ ಕೈ ತೊಡೆ ಸವರುತ್ತಿತ್ತು. ತೋಚದೆ ಬೆಬಗುಟ್ಟುತ್ತ 'ಬೀರ ಮಲಗವನೆ' ಅನ್ನಲು ಕಿಟ್ಟಪ್ಪ ಅಂದದ್ದು- 'ಹ್ಞ ಕುಡಿದು ಬಿದ್ದೈತೆ'.

ಪುಟ 9 ನೋಡಿ

ಕರ್ನಾಟಕ ರಾಜಧಾನಿಯ ಸೆರಗಿನಲ್ಲಿನ ಬದುಕಿನ ಬವಣೆ

ಪಟ್ಟಣಗೆರೆ ಎಂಬುದು ಬೆಂಗಳೂರು ಮಹಾನಗರದ ಭಾಗವೇ ಆದ ಆದರೆ ಮಹಾನಗರ ಪಾಲಿಕೆಯ ಹೊರಗಿರುವ ಪ್ರದೇಶ. ಮೈಸೂರು-ಬೆಂಗಳೂರು ಹೆದ್ದಾರಿಯ ಆಚೀಚಿನ ನೆಲದಲ್ಲಿ ಬೆಳೆಯುತ್ತಿದೆ. ಬೆಂಗಳೂರು ಹೊರದಬ್ಬಿದ ಜನರನ್ನೆಲ್ಲಾ ಬರಮಾಡಿಕೊಳ್ಳುತ್ತಾ ಹಳ್ಳಿಗಳೆಲ್ಲಾ ಪಟ್ಟಣದ ಸ್ಲಮ್ಮುಗಳಾಗಿವೆ(ಕೊಳಚೆ ಪ್ರದೇಶ) ರೈತರು, ಅವರ ಕುಟುಂಬಗಳು ಅತ್ತ ನಗರದ ವಾಸಿಗಳೂ ಅಲ್ಲ ಇತ್ತ ಹಳ್ಳಿಯವರೂ ಅಲ್ಲ ಎನ್ನುವ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಬಹುತೇಕ ಹಳ್ಳಿಗಳಿಂದಲೂ ಸ್ಲಮ್ಮುಗಳಿಂದಲೂ ಕೂಡಿರುವ ನಗರಸಭೆ ಹಲವಾರು ಸಮಸ್ಯೆಗಳ ಆಗರವಾಗಿದೆ. ಕುಡಿಯುವ ನೀರು, ಶೌಚಾಲಯ, ಚರಂಡಿ, ವಿದ್ಯುತ್ ಸಂಪರ್ಕ, ಬಸ್ಸಿನ ಸಂಪರ್ಕ, ರಸ್ತೆಗಳು, ಆರೋಗ್ಯ ಕೇಂದ್ರ, ಅಂಗನವಾಡಿಗಳು, ರೇಷನ್ ಕಾರ್ಡ್ ಮುಂತಾದ ನಾಗರೀಕ ಸೌಲಭ್ಯಗಳಿಂದ ಹಲವಾರು ಪ್ರದೇಶಗಳು ವಂಚಿತವಾಗಿವೆ.

ಇವು ಸಾಲದೆಂಬಂತೆ ಮಹಿಳೆಯರನ್ನು ದಿನನಿತ್ಯ ಹಿಂಸಿಸುವುದು, ಅತ್ಯಾಚಾರಗೈಯುವುದು; ಹೊಡೆಯುವುದು, ವರದಕ್ಷಿಣೆ ತರುವಂತೆ ಕಿರುಕುಳ ನೀಡುವುದು, ಹಣ ಆಸ್ತಿ ತರದೇ ಹೋದರೆ ಜೀವ ತೆಗೆಯುವುದು ಮುಂತಾದ ಕ್ಯಾನ್ಸರ್ ಹುಣ್ಣುಗಳು ಬೇರೆ.

ಮೈಲಸಂದ್ರವೆಂಬ ದ್ವೀಪವೂ ಸಂಪರ್ಕ ಸೇತುವೆಯೂ

ಇದೊಂದು ಹಳ್ಳಿ. ನೂರಾರು ಕುಟುಂಬಗಳು ಇಲ್ಲಿ ವಾಸಿಸುತ್ತವೆ. ಇಲ್ಲಿನ ಜನತೆ ಕೂಲಿನಾಲಿ ಮಾಡಿ ಮೈಸೂರು ರಸ್ತೆಯ ಕಾರ್ಖಾನೆಗಳಲ್ಲಿ ದುಡಿದು ಇರುವ ಅಲ್ಪ ಸ್ವಲ್ಪ ಜಮೀನಿನಲ್ಲಿ ಬೆಳೆದು ಬಡತನದಲ್ಲಿಯೇ ಬದುಕುತ್ತಿದ್ದಾರೆ. ಬಹುಸಂಖ್ಯಾತ ದಲಿತರು ಈ ಹಳ್ಳಿಯ ನಿವಾಸಿಗಳು.

ಈ ಹಳ್ಳಿಗೂ ಮೈಸೂರು ರಸ್ತೆಗೂ ಮಧ್ಯೆ ಸಂಪರ್ಕಕ್ಕಾಗಿ ಕಿರಿದಾದ ಸೇತುವೆಯೊಂದಿದೆ. ಮೈಸೂರು ರಸ್ತೆಗೆ ಹೊಂದಿಕೊಂಡೇ ಇರುವ ಈ ಸೇತುವೆಯೊಂದೇ ಆ ಜನರಿಗಿರುವ ಸಂಪರ್ಕ ಮಾರ್ಗ.

ಕೆಂಗೇರಿ ಕಡೆ ಹರಿಯುವ ಬೆಂಗಳೂರು ಕೊಳಚೆ ನೀರು ಸೇತುವೆಯ ಮಟ್ಟಕ್ಕೆ ಯಾವಾಗಲೂ ಹರಿಯುತ್ತದೆ. ಮಳೆ ಬಂತೆಂದರೆ ಸೇತುವೆಯ ಮೇಲೆ ನಡೆದಾಡಲು ಸಾಧ್ಯವಾಗದ ರೀತಿಯಲ್ಲಿ ಎದೆಯ ಮಟ್ಟಕ್ಕೆ ನೀರು ಬರುತ್ತದೆ, ಮಳೆ ಬಂತೆಂದರೆ ಸಂಪರ್ಕ ಕಟ್. ಮಕ್ಕಳು ಶಾಲೆಗೆ ಹೋಗುವಂತಿಲ್ಲ. ಕಾರ್ಮಿಕರು ಕಾರ್ಖಾನೆಗಳನ್ನು ತಲುಪಲು ಆಗುವುದಿಲ್ಲ. ರೋಗಿಗಳು ಆಸ್ಪತ್ರೆಗೆ ಹೋಗಲು ಸಾಧ್ಯವಿಲ್ಲದೆ. ಒಟ್ಟಾರೆಯಾಗಿ ಹೊರಜಗತ್ತಿನ ಸಂಪರ್ಕವೇ ಕಡಿದುಕೊಂಡು ದ್ವೀಪವಾಗುತ್ತದೆ. ಒಂದೂವರೆ ಕೀ.ಮೀ. ಮೀಟರ್ ಇರುವ ಮುಖ್ಯರಸ್ತೆಗೆ ಬರಲೇ ಬೇಕಾದರೆ ಕಾಡನ್ನು ಸುತ್ತಿ ಎಂಟತ್ತು ಕೀ.ಮೀ ಬಳಸಿ ಎರಡು ಬಸ್ಸನ್ನು ಹಿಡಿದು ಬರಬೇಕಾಗುತ್ತದೆ. ಹಳ್ಳಿಯ ಜನ ಮೋಡ ಕಂಡರೆ ಬೆವರುವ ಸ್ಥಿತಿ. ಇದು ಸಾರಿಗೆ ಹಾಗೂ ಸಂಪರ್ಕಕ್ಕೆ ಸಂಬಂಧಿಸಿ ಒಂದೇ ಒಂದು ಉದಾಹರಣೆಯಷ್ಟೆ.

ಹರಿಯುತ್ತಿರುವ ಕೊಳಚೆ ನೀರಿಗೆ ಅಡ್ಡಲಾಗಿ ಸರಿಯಾದ ಸೇತುವೆ ನಿರ್ಮಾಣ ಮಾಡದೆ ಈ ರೀತಿಯ ತೊಂದರೆಗಳನ್ನು ಹಲವಾರು ಪ್ರದೇಶಗಳ ಜನತೆ ಅನುಭವಿಸುತ್ತಿದ್ದಾರೆ.

ಬಹುತೇಕ ಪ್ರದೇಶಗಳು ಸಮರ್ಪಕ ಸಾರಿಗೆ ವ್ಯವಸ್ಥೆಯಿಲ್ಲದೆ ಹೇಳತೀರದ ತೊಂದರೆಯನ್ನನುಭವಿಸುತ್ತಿದ್ದರೆ, ಬಸ್ಸುಗಳು ಸಂಚರಿಸುವ ಕಡೆ ಎಲ್ಲ ಒಟ್ಟಿಗೆ ಬಂದು ಒಟ್ಟಿಗೆ ಹೋಗುತ್ತವೆ.

ಬಂಗಾರಪ್ಪ ನಗರವೆಂಬ ಸ್ಲಮ್‌ವೊಂದರಲ್ಲಿ ಸಾವಿರಾರು ಜನ ವಾಸ ಮಾಡುತ್ತಿದ್ದಾರೆ. ಬೆಟ್ಟದ ಮೇಲಿರುವ ಈ ಪ್ರದೇಶದಿಂದ ನಾಗರಿಕರು ಬಸ್ಸನ್ನು ಹಿಡಿಯಲು 2 ಕಿ.ಮೀ ಇಳಿಯಬೇಕು ಹತ್ತಬೇಕು. ರಸ್ತೆ ನಿರ್ಮಾಣ ಮಾಡಿ ಬಸ್ಸನ್ನು ಹಾಕುತ್ತೇವೆಂದು ಹೇಳಿ ಓಟು ಪಡೆದ ಜನ ರಸ್ತೆ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ.

ನೂರಾರು ಬಡಮಕ್ಕಳು ಬೀದಿಗಳಲ್ಲಿಯೇ ಕಾಲ ಕಳೆಯಬೇಕಾದ ಪರಿಸ್ಥಿತಿ. ಅಂಗನವಾಡಿ ಕೇಂದ್ರವಿಲ್ಲ. ತಂದೆ-ತಾಯಿಗಳಿದ್ದರೂ ಅನಿವಾರ್ಯ ದುಡಿಮೆಯ ಸಲುವಾಗಿ ಮಕ್ಕಳನ್ನು ಮನೆಯ ಬಾಗಿಲಲ್ಲಿ ಬಿಟ್ಟು ಬೀಗ ಹಾಕಿಕೊಂಡು ಹೋಗುತ್ತಾರೆ. ಅವರು ಬರುವವರೆಗೆ ಮಕ್ಕಳಿಗೆ ಬೀದಿಯೇ ದಿಕ್ಕು. ಅಪೌಷ್ಟಿಕತೆಯಿಂದಾಗಿ ನೂರಾರು ಮಕ್ಕಳು ವಿವಿಧ ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಪಟ್ಟಣಗೆರೆ ಸಿಎಂಸಿ ಯ ಬಹುತೇಕ ಜಾಗಗಳಲ್ಲಿ ಅಂಗನವಾಡಿ ಕೇಂದ್ರಗಳೇ ಇಲ್ಲ. ಬಂಗಾರಪ್ಪ ನಗರ ಒಂದು ಉದಾಹರಣೆ ಮಾತ್ರ.

ರಾಜೀವ್ ಗಾಂಧಿ ನಗರವೆಂಬ ಹೊಸ ಬಡಾವಣೆಯೊಂದಿದೆ ನೂರಾರು ಕುಟುಂಬಗಳು ಸಣ್ಣ-ಪುಟ್ಟ ಮನೆಗಳನ್ನು ಕಟ್ಟಿಕೊಂಡು ಬಾಳುತ್ತವೆ. ಇಡೀ ಮನೆಗಳಿಗೆ ಒಂದೇ ಒಂದು ಬೋರ್‌ವೆಲ್ ಮೂಲಕ ನೀರು ಸರಬರಾಜಾಗುತ್ತದೆ. ಬೋರ್ ಕೆಟ್ಟರೆ ಅಥವಾ ವಿದ್ಯುತ್ ಕೈ ಕೊಟ್ಟರೆ ವಾರಗಟ್ಟಲೆ ಕುಡಿಯುವ ನೀರೇ ಇಲ್ಲ. ನೀರಿಗಾಗಿ ಪರದಾಡುವ ಶೋಚನೀಯ ಸ್ಥಿತಿ. ನೀರು ಸಂಪಾದಿಸುವುದೇ ಪರಮ ಗುರಿ. ಬದಲೀ ವ್ಯವಸ್ಥೆಯ ಯೋಚನೆಯೇ ಸಂಬಂಧಪಟ್ಟವರಿಗಿಲ್ಲ. ಇದು ನೀರಿನ ಬವಣೆಗೊಂದು ಉದಾಹರಣೆ.

ಇನ್ನು ಶೌಚಾಲಯ, ಚರಂಡಿ, ಕೇಳುವಂತೆಯೇ ಇಲ್ಲ. ನಮ್ಮ ರಾಜ್ಯದಲ್ಲಿ ಶೇ 40 ಅತ್ಯಾಚಾರಗಳು ಮಹಿಳೆಯರು ಬಹಿರ್ದೆಶೆಗೆಂದು ನಿರ್ಜನ ಪ್ರದೇಶಗಳಿಗೆ ಹೋಗುವಾಗ ನಡೆಯುತ್ತವೆಯೆಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತವೆ. ಶೇ. 40 ಮಹಿಳೆಯರ ಪಾಲಿಗೆ ಇಲ್ಲಿಯವರೂ ಸೇರುತ್ತಿರುವ ಘಟನೆಗಳು ಬೆಳಕಿಗೆ ಬರುತ್ತಿವೆ. ಶೌಚಾಲಯಗಳಿಲ್ಲದ ಸಾವಿರಾರು ಮಹಿಳೆಯರ ಬವಣೆ ಹೇಳತೀರದ್ದಾಗಿದೆ. ನಾಗರೀಕ ಸಮಾಜ ನಾಚಿ ತಲೆತಗ್ಗಿಸುವಂತಿದೆ. ಹೀಗಿರುವಾಗ ನೈರ್ಮಲ್ಯದ ಬಗ್ಗೆ, ಪರಿಸರದ ಬಗ್ಗೆ ಮಾತನಾಡುವುದು ಬೇಡವೇ ಬೇಡ. ಆ ಬಗ್ಗೆ ಚರ್ಚಿಸುವುದು ಅಪರಾಧವೇ ಸರಿ.

ಇಷ್ಟಕ್ಕೇ ಮುಗಿಯಲಿಲ್ಲ

ಇಷ್ಟಕ್ಕೆ ಮುಗಿಯುವಂತಿಲ್ಲ ಗೋಳು. ಶೇ 40 ಕುಟುಂಬಗಳಿಗೆ ರೇಷನ್ ಕಾರ್ಡೇ ಇಲ್ಲ. ರೇಷನ್ ಕಾರ್ಡ್ ಇದ್ದವರಿಗೆ ಕಳಪೆ ಗುಣಮಟ್ಟದ ಹುಳುಗಳಿಂದ ತುಂಬಿದ ಗೊಬ್ಬರದಂತಹ ಆಹಾರ ಪದಾರ್ಥಗಳ ವಿತರಣೆ. 'ಉಳ್ಳವರಿಗೆ ಹಸಿರು ಕಾರ್ಡು ಗುಡಿಸಲು ವಾಸಿಗಳಿಗೆ ಕೆಂಪು ಕಾರ್ಡು' ಇದು ಆಳುವ ಜನರ ಸಮಾಜವಾದ. ಇದರ ಬಗ್ಗೆ ಮಾತನಾಡಿದ ಕೆಲವರ ಮೇಲೆ ದೊಣ್ಣೆವರಸೆಗಳೂ ನಡೆದಿವೆ.

ಸ್ಲಂ ನಿವಾಸಿಗಳಿಗೆ ಹತ್ತಾರು ವರ್ಷಗಳಿಂದ ವಾಸಿಸುತ್ತಿದ್ದರೂ ಹಕ್ಕು ಪತ್ರ ನೀಡಿಲ್ಲ. ಒಕ್ಕಲೆಬ್ಬಿಸುವ ಬೆದರಿಕೆಗಳು ಒಂದೊಂದು ಬಾರಿ ಒಬ್ಬೊಬ್ಬರಿಂದ. ಶ್ರೀನಿವಾಸಪುರವೆಂಬ ಸ್ಲಂ ಒಂದಿದೆ. 20 ವರ್ಷಗಳಿಂದ ಹಲವಾರು ಕುಟುಂಬಗಳು ಗುಡಿಸಲನ್ನು ಹಾಕಿಕೊಂಡು ಬದುಕುತ್ತಿವೆ. ಕೆಲವರಿಗೆ ಹಕ್ಕು ಪತ್ರಗಳೂ ಸಿಕ್ಕಿವೆ. ಆದರೂ ಬದುಕಿಗೆ ನೆಮ್ಮದಿಯಿಲ್ಲ. ಒಮ್ಮೆ ಸ್ಥಳೀಯ ಮಠದ ಸ್ವಾಮಿ ಬುಲ್ಡೋಜರ್ ತರುತ್ತಾರೆ. ಇನ್ನೊಮ್ಮೆ ಕಾರ್ಖಾನೆಗಳನ್ನು ತೆರೆಯಲು ಬಂಡವಾಳಿಗರು, ಮತ್ತೊಮ್ಮೆ ರಾಜಕಾರಣಿಗಳು ಹೀಗೆ, ಗುಮ್ಮನ ಕಾಟ ಸಾಗೇ ಇದೆ. ಅಡ್ಡ ಹೋದರೆ ಬದುಕುಳಿಯುವಂತಿಲ್ಲ. ಹಲವಾರು ಸ್ಲಂಗಳ ಕಥೆ ಹೀಗೆ ಇದೆ. ರೌಡಿಗಳ ಕಾಟ, ಪೋಲೀಸರ ಕಾಟಕ್ಕೆ ತಡೆಯೇ ಇಲ್ಲ. ಸಾರಿಗೆ ಗ್ಯಾರಂಟಿ ಇಲ್ಲ. ಇನ್ನು ನೀರು, ಕರೆಂಟು, ರಸ್ತೆ ಕೇಳಲು ಸಾಧ್ಯವೆ?

ಸ್ಲಂ-ನಿವಾಸಿಗಳು ಹೇಳುತ್ತಾರೆ, ನಮ್ಮ ಓಟುಗಳು ನಮಗೇ ಮುಳುವಾಗುತ್ತಿವೆ. ಇನ್ನು ಮುಂದೆ ಚುನಾವಣೆಗಳಲ್ಲಿ ನಾವು ಓಟೇ ಹಾಕಲ್ಲ ಎನ್ನುವಷ್ಟು ರೋಸಿಹೋಗಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮುನ್ನಡೆಸುತ್ತಿರುವ ಆಳುವ ಜನರ ರೀತಿ. ಸಾಮೂಹಿಕ ಸಂಘಟನೆಗಳನ್ನು ಕಟ್ಟುವುದರಿಂದ ಹೋರಾಟದ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸುವುದರಿಂದ ಮಾತ್ರ ಪ್ರಜಾಸತ್ತೆಯಲ್ಲಿ ನಂಬಿಕೆ ಉಳಿಸಬೇಕಾಗಿದೆ.

ನೊಂದ ಮಹಿಳೆಯರು ಪೋಲಿಸ್ ಠಾಣೆ ಹೊಕ್ಕರೆ

ಹೆಂಗಸರ ಮೇಲೆ ಅತ್ಯಾಚಾರಗಳು, ವರದಕ್ಷಿಣೆ ಕಿರುಕುಳಗಳು, ಹಿಂಸಾಚಾರ, ಅಪಹರಣ, ಕೊಲೆ, ದ್ವಿಪತ್ನಿತ್ವ ಮುಂತಾದ ದೌರ್ಜನ್ಯಗಳು ನಿರಾತಂಕವಾಗಿ ನಡೆಯುತ್ತಿವೆ.

ನೊಂದ ಮಹಿಳೆಯರು ಪರಿಹಾರ ಬಯಸಿ ಪೊಲೀಸ್ ಠಾಣೆಗಳಿಗೆ ಮೊರೆ ಹೊಕ್ಕರೆ ಖಾಕಿಧಾರಿಗಳ ವರ್ತನೆ ಬೆಚ್ಚಿ ಬೀಳಿಸುತ್ತದೆ. ಮಹಿಳೆಯರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ. ಸರಿದೂಗಿಸಿಕೊಂಡು ಹೋಗುವಂತೆ ಗಂಟೆಗಟ್ಟಲೆ ಪಾಠ ಹೇಳಿ ಕಳಿಸುತ್ತಾರೆ. ಸಹನಾಮೂರ್ತಿಯಾಗಿ ಸಾರ್ಥಕತೆ ಕಾಣಬೇಕೆಂದು ನೀತಿ ಹೇಳಿ, ಪೌರುಷ ಮೆರೆಯುತ್ತಾರೆ. ಅಲ್ಲಿನ ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ ಹೆಂಗಸರ ಚಂಚಲ ಗುಣವೇ ಇದಕ್ಕೆ ಕಾರಣ. ಸುಧಾರಣೆ ಹೆಂಗಸರಿಂದಲೇ ಪ್ರಾರಂಭವಾಗಬೇಕೆನ್ನುತ್ತಾರೆ. ಬದುಕುವ ಆಸೆಯಲ್ಲಿ ಕೊನೇ ಪ್ರಯತ್ನದ ಭಾಗವಾಗಿ ಠಾಣೆಗೆ ಹೋಗುವ ಹೆಂಗಸರು ಇಂತಹ ಜನರಿಂದ ನ್ಯಾಯ ನಿರೀಕ್ಷಿಸುವುದು ಹೇಗೆ?

ವರದಿ - ಎನ್. ಪ್ರಭಾ

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ			ರೂ. 13,34,186.50
ನವೀನ - ಎಸ್.ಎಫ್.ಐ ಮುಖಂಡರು ಹಾಸನ	100	ಶಿರಸಿ ಶಾಖೆ ಸದಸ್ಯರಿಂದ	150
ಸಿಪಿಐ(ಎಂ) ತುಮಕೂರು ಜಿಲ್ಲಾಸಮಿತಿ	100	ಕಾರವಾರ ಶಾಖೆ ಸದಸ್ಯರಿಂದ	280
ವೈ. ಆರ್. ಪ್ರಕಾಶ್, ಮೈಕೊ - ಆಡುಗೋಡಿ	200	ಸುಭಾಸ್ ಕೊಪ್ಪಿಕಾರ ಸಂಗ್ರಹ	1000
ಪಿ. ಹನುಮಂತರಾಯಪ್ಪ, ಮೈಕೊ-ಆಡುಗೋಡಿ	1000	ಉ.ಕ. ಜಿಲ್ಲಾ ಸಮಿತಿ ಸದಸ್ಯರಿಂದ	370
ಎಸ್.ಎಫ್.ಐ ರಾಜ್ಯ ಕೇಂದ್ರ ಸಂಗ್ರಹ	400	ದಾಂಡೇಲಿ ಪಕ್ಷದ ಸದಸ್ಯರಿಂದ	250
ಎಸ್.ಎಫ್.ಐ ಮುಖಂಡ, ತಾಲ್ಲೂಕು ಸಮಿತಿ	50	ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ ಹುಬ್ಬಳ್ಳಿ ಟೆಲಿಕಾಂ ಸರ್ಕಾರ ಸಂಘದ ಸದಸ್ಯರಿಂದ	7000
ಎಸ್ ಎಫ್ ಐ ಬೆಂಗಳೂರು ಜಿಲ್ಲಾಸಮಿತಿ	50	ಸದಾನಂದ ಮೂಲಕ	
ಎಸ್.ಎಫ್.ಐ ಕೋಲಾರ ಜಿಲ್ಲಾ ಸಮಿತಿ	50	ಬಿ.ಎಸ್. ಸೊಪ್ಪಿನ ನವಲಗುಂದ	300
ಎಸ್.ಎಫ್.ಐ. ಶಿರಸಿ ತಾಲ್ಲೂಕು ಸಮಿತಿ	20	ಮೈಸೂರು ಫೀಡ್ ಕಾರ್ಮಿಕರ ಸಂಘ- ಬೆಂಗಳೂರು	2500
ಸಿ. ಗೋಪಿನಾಥನ್ ನಾಯರ್ ವಿಜಯಾಬ್ಯಾಂಕ್ ಬೆಂಗಳೂರು	1000	ಎಸ್. ಎಫ್.ಐ ಚಿಕ್ಕಮಗಳೂರು ನಗರ ಸಮಿತಿ	100
ಎಸ್. ಎ. ರೆಹಮಾನ್ ವಿಜಯಬ್ಯಾಂಕ್, ಬೆಂಗಳೂರು	250	ಎಸ್.ಎಫ್.ಐ -ಬೀದರ್ ಜಿಲ್ಲಾ ಸಮಿತಿ	50-00
ಹಿತೈಷಿ	500	ಎಸ್.ಎಫ್.ಐ ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿ	200
ವಿ. ಉಮೇಶ್ ಶೆಟ್ಟಿ, ವಿಜಯಾಬ್ಯಾಂಕ್, ಬೆಂಗಳೂರು	501	ಎಸ್.ಎಫ್.ಐ ಕೋಲಾರ ಜಿಲ್ಲಾ ಸಮಿತಿ ಮೂಲಕ	
ಮಂಜುನಾಥ-ವಿಜಯಾಬ್ಯಾಂಕ್, ಬೆಂಗಳೂರು	500	ಲಕ್ಷ್ಮಿಪತಿ - ಗುಡಿಬಂಡೆ	50
ಶ್ಯಾಂಸುಂದರ್-ವಿಜಯಾಬ್ಯಾಂಕ್, ಬೆಂಗಳೂರು	500	ಸುರೇಶಬಾಬು- ಗುಡಿಬಂಡೆ	50
ಎ.ಬಿ. ಶೆಟ್ಟಿ-ವಿಜಯಾಬ್ಯಾಂಕ್, ಬೆಂಗಳೂರು	500	ಅಸ್ಗರ್ ಉನ್ನಿಸಾ, ಶಿಡ್ಲಘಟ್ಟ	50
ಮಾರಿಸ್ ಫರ್ನಾಂಡಿಸ್-ವಿಜಯಾಬ್ಯಾಂಕ್, ಬೆಂಗಳೂರು	150	ನಾಗರಾಜ- ಕೋಲಾರ	101
ಸೋಮಸುಂದರ್-ವಿಜಯಾಬ್ಯಾಂಕ್, ಬೆಂಗಳೂರು	300	ಉಮೇಶ್ - ಚಿಂತಾಮಣಿ	51
ಕೆ. ವಿಶ್ವನಾಥ ನಾಯಕ್-ವಿಜಯಾಬ್ಯಾಂಕ್, ಬೆಂಗಳೂರು	500	ಪ್ರಕಾಶ್ - ಶಿಡ್ಲಘಟ್ಟ	50
ಮುದ್ದಣ್ಣ ಶೆಟ್ಟಿ-ವಿಜಯಾಬ್ಯಾಂಕ್, ಬೆಂಗಳೂರು	500	ಕೆ.ಜಿ.ಎಫ್ ಪದವಿ ಕಾಲೇಜು ಎಸ್.ಎಫ್.ಐ ಘಟಕ	50
ಶ್ರೀಧರ ನಾಯಕ್-ವಿಜಯಾಬ್ಯಾಂಕ್, ಬೆಂಗಳೂರು	501	ಎಸ್.ಎಫ್.ಐ ಕೋಲಾರ ಜಿಲ್ಲಾ ಸಮಿತಿ	80
ಡಿ.ಎನ್. ಉಮೇಶ್-ವಿಜಯಾಬ್ಯಾಂಕ್, ಬೆಂಗಳೂರು	500	ಟಿ.ಜಿ. ವಿಠಲ - ಎಲ್.ಐ.ಸಿ. ನೌಕರರು ಬೆಳ್ಗಾವಿ	3000
ಅರವಿಂದ ನಾಯಕ್ - ವಿಜಯಾಬ್ಯಾಂಕ್, ಬೆಂಗಳೂರು	500	ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮಿತಿ	4000
ಸಿ.ಪಿ.ಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ ಮೂಲಕ ಶಾರದಾ ಟೈಲ್ ಮಾವಿನ ಕುರ್ವೆ ಕಾರ್ಮಿಕರಿಂದ	1600	ಸಿಪಿಐ(ಎಂ) ವರ್ತೂರು ವಲಯ ಸಮಿತಿ ಬೆಂಗಳೂರು ಮೂಲಕ	10,000
ವಿಕಾಸ ಟೈಲ್, ತಣದಿಪುರ ಕಾರ್ಮಿಕರಿಂದ	700	ಕಿರ್ಲೋಸ್ಕರ್ ಬ್ರದರ್ಸ್ ಕಾರ್ಮಿಕರ ಸಂಘ -ಬೆಂಗಳೂರು	10,000
		ಭಾರ್ಗವಿ ಶ್ರೀನಾಥ- ಎಲ್.ಐ.ಸಿ. ನೌಕರರು -ಬೆಂಗಳೂರು	200
		ಡಿ. ನಾನಿ	100
		ಒಟ್ಟು	13,85,110.50

ಮಾರಿಕೊಂಡವರು

ಪುಟ 8 ರಿಂದ

ಹೊತ್ತು ಮೂಡಲು ಎಚ್ಚರವಾಗಿ ಮೈಮಾಲು ಮುರಿಯಲು ಬೀರನಿಗೆ ಹಗೂರವಾದಂತೆ ತೋರಿತು. ಹಾಗೂ ಬೀರನಿಗೆ ವಸಿ ರಾತ್ರಿ ನಿಶ ಉಳಿದಿತ್ತು. ಎರಡು ಕೈಯನ್ನು ಗಸಗಸನೆ ತೀಡಿ ಮೂಖಕ್ಕೆ ಎದುರು ತಂದು ಅಂಗೈ ನೋಡಿಕೊಂಡು, ಮೆಲ್ಲನೆ 'ಲಚುಮಿ' ಎಂದಾಗ ಉತ್ತರ ಬರಲಿಲ್ಲ ಇಷ್ಟು ಹೊತ್ತಾದರೂ ಹೆಂಗಸಿಗೆ ಅಷ್ಟು ನಿದ್ದೆಯೆ ಅಂದುಕೊಂಡು ಬಲಮೊಗ್ಗಲಿಗೆ ಹೊರಳಿ ಕಂಬಳಿ ಸರಿಸಿ ಕೋಣೆಕಡೆ ನೋಡಿದಾಗ ಲಕ್ಷ್ಮಿ ಮೊಖದ ತುಂಬಾ ಹೊದ್ದು ಕೊಕ್ಕರಿಸಿಕೊಂಡು ಮಲಗಿದ್ದಳು. ಅವಳು ಹೊದ್ದಿದ್ದ ಪಟ್ಟೆ ಪಟ್ಟೆ ರಗ್ಗಿಗೆ ದಿಟ್ಟಿ ನೆಟ್ಟಿತು. ಕಳೆದ ಸೋಮವಾರ ಕಿಟ್ಟಪ್ಪ ರಗ್ಗು ಚಾಚಿ 'ತಕ್ಕೋ ಬೀರ ಬರೋದು ಚಳಿಗಾಲ ಅಂದು, ಕೊಟ್ಟರು. ರಾತ್ರಿ ಮಲಗುವಾಗ ಚೆಲುವಿ ಒಳಗೊಳಗೆ ನಗುತ್ತ ಅದನ್ನು ತನ್ನ ಕಡೆ ಎಳೆದುಕೊಂಡು 'ಇದು ನಂಗೇ ಬೇಕು' ಎಂದು ಬಿಮ್ಮನೆ ಬೀರಿ ಹಿಡಿದುಕೊಂಡಳು. ಅವಳನ್ನೆ ಬಾಚಿ ತಬ್ಬಿಕೊಂಡು ಎದೆಗೆ ಅಮುಕಿ 'ಹೋಗ್ಲಿ ಅದನ್ನ ನೀನೇತಕ್ಕೊ.... ನಿನ್ನನ್ನ ನಂಕೊಡು, ಅದ್ಕಿಂತ ನೀನೆ ಬೆಚ್ಚಗೆ' ಅಂದಾಗ ಕಿಸಕಿಸ ನಕ್ಕಳು. ಈಗ ಅವಳಿಗೆ ಬೆಚ್ಚಗಾಗುತ್ತಿರಬೇಕು.....

ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚುಮೀನ ಕವಿಚಿಕೊಂಡಿದೆ. ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವಿಚಿಕೊಂಡಿದೆ. ನನ್ನನ್ನ ಆದರೆ ಚಿಂತಿಲ್ಲ. ಲಚುಮಿಯನ್ನಾದರೆ..... ಪಟೇಲರ ಹಟ್ಟಿಗೆ ಚಲ್ಲಣ ಸಿಕ್ಕಿಸಿಕೊಂಡು ಬಂದಿದ್ದವ ಲಚುಮೀನ ಕೆಣಕಿದನಂತೆ ಅಂತ ಕಿವಿಗೆ ಬಿದ್ದುದೆ ತಡ. ಜಗಲಿಮ್ಯಾಗ ಕಾಲ ಮ್ಯಾಲ ಕಾಲ ಹಾಕಿ ಕುಳಿತಿದ್ದವನ ಕತ್ತಿನ ಪಟ್ಟಿ ಹಿಡುದು ಎಳೆದು, 'ನಿನ್ನ ಸಾವ್ಕಾರಿಕೆ ಇದ್ರ ನಿನ್ನ ಹಟ್ಟಿಗೆ ಕನ್ಲ. ನಂಗೂ ವಸಿ ತೋರಿಸೋಕೆ ಬತ್ತೀಯ?' ಎಂದು ಬಿಗೀಬೇಕು. ಅಷ್ಟಕ್ಕೆ ಪಟೇಲರು ಮಧ್ಯಕ್ಕೆ ಬಂದು ಕೈ ಮುಗಿದು 'ಬೇರೆ ಊರ್‍ನ ಹೈದ ಏನೂ ತಿಳಿದೇ' ಅಂತ ಸುಮ್ಮನಾಗಿಸಿದರು. ಹಟ್ಟಿಗೆ ಬಂದಾಗ ಲಚುಮಿ ಎದೆಗೆ ಆತುಬಿದ್ದಳು.

ಎಡಗೈಯಿಂದ ಹೊಟ್ಟೆ ಸವರಿ ಮೇಲಕ್ಕೆ ತಂದು ಎದೆಯ ಮೇಲಿಟ್ಟನು. ಎದೆಯೊಳಗೆ ಸಣ್ಣಕ್ಕೆ ನೋವು ಹರಿಯಿತು. 'ಕುಡಿಬೇಡಿ ಅಂತ ಎಷ್ಟು ಬಡ್ಕಂಡ್ರೂ ಕೇಳೊಲ್ಲ. ಮಲ್ಲಿಪುರ್‍ದ ಸಾವ್ಕಾರ್ರು ಕುಡ್ದು ಎದೆ ಒಡೆದು ಸತ್ತೋದ್ರಂತೆ ಕುಡ್ದರೆ ಕಳ್ಳನೆಲ್ಲ ಕೊರೆದು ಹಾಕ್ಬಿಡ್ತದಂತೆ.' ಏನಾರು ಸಾವ್ಕಾರಿಗೆ ಆದಂಗೆ ನಂಗೂ ಆಗಿಬಿಟ್ಟರೆ? ಲಚುಮಿಗೆ ದಿಕ್ಕು? ಯಾಕೆ? ಹೆಂಗೆಂಗೊ ಆಗತೊಡಗಿತು. ಬೀಡಿ ಸೇದಬೇಕೆನಿಸಿ ದಿಂಬು ಸರಿಸಿ ನೋಡಿದಾಗ ಇರಲಿಲ್ಲ, ಹೊರಗೆ ಇಬ್ಬನಿ ಬೀಳುತ್ತಿತ್ತು. ಮೊದಲೆ ಚಳಿ. ಬೀಡೀನೂ ಇಲ್ಲ. ಬಿಸಲು ಬರುವವರೆಗೂ ಹಿಂಗೇ ಇರಬೇಕು.

"ಇನ್ನೂ ಬೆಳೆಯೊ ಹೊತ್ತು. ಮಲ್ಗವನೆ ಎಳೆಕೂಸಂಗೆ. ನಾಚ್ಕೆ ಆಗಾಕಿಲ್ವ ನಿನ್ನ ಘಟಕ್ಕೆ" ಇಷ್ಟು ಮೊಬ್ಬಿಗೆ ಕಿಟ್ಟಪ್ಪ? ಚಳಿ ಬಿಟ್ಟವ ನಂತೆ ಕಂಬಳಿ ಹೊದ್ದು ಮೇಲಕ್ಕೆ ಎದ್ದು ಕೋಣೆ ಕಡೆ ನೋಡಲು ಲಚುಮಿ ಇನ್ನು ಮಲಗವಳೆ. ಏಳಿಸಬೇಕೆನಿಸಿದರೂ ಮನಸಾಗಲಿಲ್ಲ. ಬಲಗಡೆ ನೇತುಹಾಕಿದ್ದ ಚಾಮುಂಡಪ್ಪನ ಪೋಟೊಗೆ ಕೈ ಮುಗಿದು ತಡಿಕೆ ಬಿಚ್ಚಲು ಮೂಡಣದಿಕ್ಕಿಗೆ ಎದುರಾಗಿದ್ದ ಜೋಪಡಿ ಬೆಳಕು ಚೆಲ್ಲಿತು. ನೋಡಿದರೆ ಕಿಟ್ಟಪ್ಪ ನಿಂತಿದ್ದರು. ಲಕ್ಷ್ಮಿ ಎದ್ದು ಚಣಹೊತ್ತು ಸುಧಾರಿಸಿಕೊಂಡರೂ ಮಂಕು ಆರಿರಲಿಲ್ಲ. ರಾತ್ರಿಯ ನೆಪ್ಪ ಮೈಚುರುಗುಟ್ಟಿಸಲು ತೊಲೆಕಡೆ ಕಣ್ಣೋಡಿದಾಗ ಮಚ್ಚು ಅಲ್ಲೆ ಇತ್ತು. ಹೇಗೇಗೊ ಆಗಿ ಹೊರಕ್ಕೆ ಬಗ್ಗಿ ನೋಡಿದಳು. ಬೀರ ಆಗಲೆ ಎದ್ದು ಹೊರಗೆ ಯಾರ ಜೊತೆಯಲ್ಲೊ ಮಾತಾಡುತ್ತಿದ್ದನು. ಸದ್ದು ಮಾಡದೆ ಬಾಗಿಲ ಬಂದು ನೆರಕೆ ಕಿಂಡಿಗೆ ಕಣ್ಣು ಹಾಕಿದಾಗ ಅಚ್ಚರಿ ಆಯ್ತು. ಕಿಟ್ಟಪ್ಪ ನಿಂತಿದ್ದನು.

ಯಾತಕ್ಕೊ ಕಿಟ್ಟಪ್ಪ ನಕ್ಕ
ಬೀರನೂ ನಕ್ಕನು.

○

ಆನೇಕಲ್, ತಾಲೂಕಿನಲ್ಲಿ ರೈತ ಚಳುವಳಿ

ವರದಿ: ಶಿವರಾಮರೆಡ್ಡಿ

ಆನೇಕಲ್ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭಾಗ. ಬೆಂಗಳೂರು ನಗರ ವೇಗವಾಗಿ ಹಬ್ಬುತ್ತಿರುವುದರಿಂದ ರೈತರ ಹೊಲಗಳು ಕೈಗಾರಿಕೆಗಳಿಂದ ನಶಿಸಿ ಹೋಗುತ್ತಿರುವ ಪ್ರದೇಶ. ಇಂತಹ ಪ್ರದೇಶದಲ್ಲಿ ರೈತ ಚಳುವಳಿ ಇತ್ತೀಚೆಗೆ ಬೆಳೆಯುತ್ತಿದೆ. ರೈತರ ಬವಣೆಗಳಿಗೆ ದನಿಯಾಗುತ್ತಿದೆ. ಆನೇಕಲ್ ತಾಲ್ಲೂಕಿನಲ್ಲಿ ಪ್ರಾಂತ ರೈತ ಸಂಘದ ಇತಿಹಾಸ 1958 ರಿಂದಲೇ ಆರಂಭವಾಗುತ್ತದೆ. ಜಿಗಣಿ ಹೋಬಳಿಯಲ್ಲಿರುವ ಜಮೀನ್ದಾರರು ಬಡ ರೈತರನ್ನು ಒಕ್ಕಲೆಬ್ಬಿಸುತ್ತಿದ್ದರು. ಸರ್ಕಾರ ಭೂಮಾಲಿಕರ ಪರವಿದ್ದು, ಗೇಣಿ ಕಾನೂನು ಇದ್ದರೂ ಜಾರಿಯಾಗದಂತೆ ನೋಡಿಕೊಂಡಿತ್ತು. ಅಂತ ಸಮಯದಲ್ಲಿ ಟಿ.ಕೆ. ಗಂಗರೆಡ್ಡಿ ಮತ್ತು ಕಲಯ್ಯ ನವರು 300 ಸಾವಿರಕ್ಕಿಂತ ಹೆಚ್ಚಿನ ರೈತರನ್ನು ಸಂಘಟಿಸಿ ರೈತರನ್ನು ಹೋರಾಟಕ್ಕೆ ದುಮುಕಿಸಿದ ಹಿನ್ನಲೆಯಲ್ಲಿ ಸಂಘ ಪ್ರಾರಂಭಗೊಂಡಿತು. ನರಗುಂದ, ನವಲಗುಂದ ರೈತರ ಮೇಲೆ ನಡೆದ ಬರ್ಬರ ಗೋಲಿಬಾರ್ ವಿರುದ್ಧವಾಗಿ ರೈತರನ್ನು ಸಂಘಟಿಸಿ ಸಭೆ ನಡೆಸಿ ಗ್ರಾಮದಲ್ಲಿ ರೈತಸಂಘದ ಚಟುವಟಿಕೆಗಳು ಪರಿಣಾಮಕಾರಿಯಾಗಿ ಸೀತಾರಾಮರೆಡ್ಡಿ ಯವರ ನೇತೃತ್ವದಲ್ಲಿ ನಡೆಯಲಾಯಿತು. ಆನಂತರ ಹಂದೇನ ಹಳ್ಳಿ ಗ್ರಾಮದಲ್ಲಿ ಪ್ರಾಂತ ರೈತ ಸಂಘವನ್ನು ಕಟ್ಟಲು ಕರ್ನಾಟಕ ಪ್ರಾಂತ ರೈತ ಸಂಘದ ಅಂದಿನ ಜಿಲ್ಲಾ ಕಾರ್ಯಾದರ್ಶಿಯವರು 1990 ರಲ್ಲಿ ಸುತ್ತ ಮುತ್ತಲಿನ ರೈತರನ್ನು ಒಳಗೊಂಡು ಗ್ರಾಮ ಘಟಕ ರಚನೆ ಮಾಡಿದರು. ಈ ಗ್ರಾಮದ ರೈತ ಕಾರ್ಯಕರ್ತರಿಂದ ರೈತ ಸಂಘಟನೆ ವಿಸ್ತಾರ ಮಾಡಲು ಸದಸ್ಯತ್ವ ಮಾಡಿಸುವುದರೊಂದಿಗೆ ನಾಲ್ಕು ಗ್ರಾಮಗಳಲ್ಲಿ ಘಟಕಗಳು ಪ್ರಾರಂಭಗೊಂಡವು. ಈ ಗ್ರಾಮಗಳಿಗೆ ಜಿಲ್ಲಾ ರೈತ ಮುಖಂಡರಾದ ಲಕ್ಕಣ್ಣ, ಜಗನ್ನಾಥ್ ಮತ್ತು ವೆಂಕಟಾಚಲಯ್ಯ ನವರು ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಿ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಜನರಲ್ಲಿ ಹೋರಾಟದ ಸ್ಪೂರ್ತಿ ತುಂಬಿ ರೈತ ಹೋರಾಟಗಳಲ್ಲಿ ಭಾಗವಹಿಸುವಂತೆ ರೈತರನ್ನು ಹುರಿದುಂಬಿಸಿದರು.

ಕುಡಿಯುವ ನೀರಿಗಾಗಿ ಹೋರಾಟ

ರಾಚಮಾನಹಳ್ಳಿ ಮತ್ತು ಅದರ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವದಿಂದ 2-3 ಕಿ.ಮೀ. ದೂರದ ತೋಟಗಳಿಂದ ನೀರನ್ನು ತೆಗೆದುಕೊಂಡು ಬರುತ್ತಿದ್ದರು. ತೋಟದ ಮಾಲೀಕರು ನೀರನ್ನು ಬಿಡದೆ ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿಯಲ್ಲಿದ್ದರು. ಸಮಸ್ಯೆಯ ಬಗ್ಗೆ ರೈತ ಸಂಘಟನೆ ಸಭೆ ಸೇರಿ, ರೈತರು ಮತ್ತು ಮಹಿಳೆಯರನ್ನು ಸೇರಿಸಿ ಲೋಕೋಪಯೋಗಿ ಇಲಾಖೆ ಕಛೇರಿಯ ಮುಂದೆ ಧರಣಿ ನಡೆಸಲು ಕಾರ್ಯಕ್ರಮ ರೂಪಿಸಿದರು.

ತಾಲ್ಲೂಕಿನ ವಿವಿಧ ಹಳ್ಳಿಗಳಿಂದ ನೂರಾರು ಜನರು ಧರಣಿಯಲ್ಲಿ ಭಾಗವಹಿಸಿ "ರಾಚಮಾನಹಳ್ಳಿಗೆ ನೀರು ಬೇಕು" ಎಂಬ ಬೇಡಿಕೆಯೊಂದಿಗೆ ಹೋರಾಟ ಮಾಡಿದ್ದರು. ಇದರ ಫಲವಾಗಿ ಹದಿನೈದು ದಿವಸದೊಳಗೆ ಕುಡಿಯುವ ನೀರಿನ ಸೌಲಭ್ಯ ದೊರೆಯಿತು. ಇದರಿಂದ ಅಕ್ಕಪಕ್ಕದ ರೈತರು ಪ್ರಾಂತ ರೈತ ಸಂಘಟನೆಯ ಬಗ್ಗೆ ಉತ್ಸಾಹದಿಂದ ಕಾರ್ಯಕರ್ತರಾಗಲು ಮುಂದಾದರು. ಹೀಗೆಯೇ ನಾಗರೀಕ ಸೌಲಭ್ಯಗಳಾದ ಪಡಿತರ ವ್ಯವಸ್ಥೆ, ಹಸಿರು ಕಾರ್ಡ್, ರಸಗೊಬ್ಬರ, ಬೆಲೆಯೇರಿಕೆ ವಿರುದ್ಧ, ಬಡವರಿಗೆ ಖಾಲಿ ನಿವೇಶನದ ಹಕ್ಕು ಪತ್ರಗಳಿಗಾಗಿ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯ ಮುಂದೆ ಧರಣಿ ನಡೆಸಿ ಬಿದರಗೆರೆ, ಚಿನ್ನೇನ ಅಗ್ರಹಾರ, ಅರಹಳ್ಳಿಗಳನ್ನು ಒಟ್ಟುಗೂಡಿಸಿಕೊಂಡು ಈ ಸಮಸ್ಯೆಗಳಿಗೆ ಹೋರಾಟ ಮಾಡಲು, ವಿವಿಧ ಭಾಗಗಳಿಂದ ರೈತರು ಸಂಘಟನೆಗೆ ಬರಲು ನೆರವಾಯಿತು. ಹಾಗೆ ವಿದ್ಯುತ್ ಸಮಸ್ಯೆಯ ಯಿಂದ ರೈತರಿಗೆ ಬಹಳ ಕಷ್ಟವಾಗಿತ್ತು. ವಿದ್ಯುತ್ ಪಂಪಸೆಟ್ ಬಳಕೆದಾರರಿಗೆ ವೋಲ್ಟೇಜ್ ಡ್ರಾಪ್‌ನಿಂದ ರೈತರಿಗೆ ಬೆಳೆ ಬೆಳೆಯಲು ತೊಂದರೆಯಾಗಿತ್ತು. ಕೆ.ಇ.ಬಿ. ಕಛೇರಿ ಎದುರು ರೈತರು ಧರಣಿ ನಡೆಸಿ ಅಧಿಕಾರಿಗಳು ಸಮಸ್ಯೆಗಳಿಗೆ ಸ್ಪಂದಿಸುವಂತೆ ರೈತ ಸಂಘಟನೆ ಪ್ರಮುಖ ಪಾತ್ರ ವಹಿಸಿತು.

ಗ್ಯಾಟ್ ಒಪ್ಪಂದದ ವಿರುದ್ಧ ಚಳುವಳಿ

ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿಯ ಮುಖಂಡರು ತಾಲ್ಲೂಕಿನ ಸುಮಾರು 20 ಹಳ್ಳಿಗಳಲ್ಲಿ ಗ್ಯಾಟ್, ಡಂಕಲ್‌ನಿಂದ ಕೃಷಿಯ ಮೇಲಾಗುವ ದುಷ್ಪರಿಣಾಮಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡಿ ರೈತರಲ್ಲಿ ಜಾಗೃತಿ ಮೂಡಿಸಿದರು.

ಪ್ರಾಂತ ರೈತ ಸಂಘವು ಪಂಚಾಯಿತಿ ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸಲು ಜಿಲ್ಲಾ ಸಮಿತಿ ಕರೆಕೊಟ್ಟಿತು. ಹಂದೇನಹಳ್ಳಿ, ಬೂರುಗುಂಟೆ, ಬಿದರಗೆರೆ, ರಾಚಮಾನಹಳ್ಳಿ ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದವು. ಸೋಲನ್ನು ಕಂಡರೂ ಕೂಡ ಸಂಘಟನೆ ಬಲಗೊಳ್ಳಲು ಅವಕಾಶವಾಯಿತು. ಆಗಾಗ ಸಭೆಗಳನ್ನು ಸೇರಿ ಸಂಘಟನೆಯ ಬಗ್ಗೆ ಚರ್ಚಿಸಿ ಹೋರಾಟಗಳನ್ನು ಮಾಡುತ್ತಾ ರೈತ ಸಂಘವನ್ನು ವಿಸ್ತಾರ ಮಾಡುತ್ತಾ ತಾಲ್ಲೂಕು ರೈತ ಸಂಘವು ಹೆಚ್ಚು ಬಲಗೊಳ್ಳಲು ಅನುಕೂಲವಾಯಿತು. ಆ ವೇಳೆಗೆ ನಂಜುಂಡ ಸ್ವಾಮಿವರ ನೇತೃತ್ವದ ರಾಜ್ಯ ರೈತ ಸಂಘದ ಮುಖಂಡ ಕೃಷ್ಣಾ ರೆಡ್ಡಿಯವರು ಪ್ರಾಂತ ರೈತ ಸಂಘಕ್ಕೆ ಸೇರಿದರು. ಇವರನ್ನೊಳಗೊಂಡು ಗ್ರಾಮಗಳಿಗೆ ಭೇಟಿ ನೀಡಿ ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರದ ಮಾರ್ಗಗಳನ್ನು ಹುಡುಕುತ್ತಿದ್ದರು.

ಬಗರ್ ಹುಕುಂ ಸಾಗುವಳಿ ವ್ಯವಸಾಯ

ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುವ ರೈತರನ್ನು ಸಭೆ ಸೇರಿಸಿ ಅವರ ಸಮಸ್ಯೆಗಳ ಬಗ್ಗೆ ದೀರ್ಘ ಚರ್ಚೆ ನಡೆಸಿದರು. ರೈತರು ಹಲವಾರು ಪ್ರಶ್ನೆಗಳನ್ನು ರೈತ ಸಂಘಧ ಮುಖಂಡರಲ್ಲಿ ಕೇಳಿದರು. 30 ವರ್ಷಗಳಿಂದ ಬಂಜರು ಭೂಮಿಯ ವ್ಯವಸಾಯ ಮಾಡುತ್ತಿದ್ದೇವೆ ಉಳುಮೆ ಚೀಟಿ ಕೊಟ್ಟಿಲ್ಲ ಎಂಬ ವಿಷಯವನ್ನು ಮುಂದಿಟ್ಟರು. ಎಲ್ಲಾ ಹಳ್ಳಿಗಳ ಸಾಗುವಳಿ ರೈತರನ್ನು ಭೇಟಿ ಮಾಡಿ ರೈತರನ್ನು ಸಂಘಟಿಸಿ ಸಾಗುವಳಿ ಚೀಟಿ ಹಾಗೂ ಕುಡಿಯುವ ನೀರು, ಊರಿಗೆ ರಸ್ತೆ, ಮಕ್ಕಳಿಗೆ ಶಾಲೆ ಮುಂತಾದ ಮೂಲಭೂತ ಸೌಲಭ್ಯಗಳ ಬೇಡಿಕೆಗಾಗಿ ತಾಲ್ಲೂಕು ತಹಶೀಲ್ದಾರ ಕಛೇರಿ ಮುಂದೆ ಧರಣಿ ನಡೆಸಿದರು.

ಸ್ವಲ್ಪ ಮಟ್ಟಿಗೆ ಸಮಸ್ಯೆಗೆ ಪರಿಹಾರ ದೊರೆಯಿತು. ಆದರೆ ಜಿಗಣಿ ಹೋಬಳಿಯಲ್ಲಿ ಸಾವಿರಾರು ಎಕರೆಗಳ ಸರ್ಕಾರಿ ಭೂಮಿಯನ್ನು ಬಂಡವಾಳಶಾಹಿ ಭೂಮಾಲೀಕರಿಂದ ಕೋಡೆಸ್, ಪ್ರೇಂಕುಮಾರ್, ಕಲೀಲ್ ಷಾಪ್, ಸರ್ಕಾರಿ ಅಧಿಕಾರಿಗಳು, ಮಂತ್ರಿಗಳು, ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದ ಬಡಜನರನ್ನು ಒಕ್ಕಲೆಬ್ಬಿಸಿ ರೀಯಲ್ ಎಸ್ಟೇಟ್‌ಗಳನ್ನು, ದೊಡ್ಡ ದೊಡ್ಡ ಫಾರಂಗಳನ್ನು, ಲೇಔಟ್‌ಗಳನ್ನು ಮಾಡಿಕೊಂಡು ಬಡ ಜನರ ಕೂರಳು ಕೊಯುತ್ತಿದ್ದಾರೆ. ಈ ಭೂಮಿಯನ್ನು ವಶಪಡಿಸಿಕೊಳ್ಳಲು 1958 ರಿಂದ ಇಂದಿನವರೆಗೂ ಕೂಡ ನಮ್ಮ ಪ್ರಾಂತ ರೈತ ಸಂಘವು ತೀವ್ರತರದ ಹೋರಾಟ ಮಾಡಬೇಕಾಗಿದೆ.

ನೀರಾವರಿ ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಸಮಾವೇಶ

ಎರಡು ತಿಂಗಳು ನಿರಂತರವಾಗಿ ಗ್ರಾಮಗಳಲ್ಲಿ ಗ್ರಾಮಸಭೆಗಳನ್ನು ನಡೆಸಿದರು. ಈ ಸಮಾವೇಶಕ್ಕೆ 250 ಮಂದಿ ರೈತರು ಪಾಲ್ಗೊಂಡಿದ್ದರು. ಸಮಾವೇಶದ ನಿರ್ಣಯದ ಮೇರೆಗೆ ಬೆಂಗಳೂರಿನ ಕಾವೇರಿ ಭವನ ಮುಂದೆ ಧರಣಿ ನಡೆಸಲಾಯಿತು. ಆನಂತರ ಸರ್ಜಾಪುರ ಕೆ.ಇ.ಬಿ.ಕಛೇರಿ ಮುಂದೆ ಧರಣಿ ಮತ್ತು ರಸ್ತೆ ತಡೆ ಚಳುವಳಿ ನಡೆಸಿ ಈ ಕಾರ್ಯಕ್ರಮ ಯಶಸ್ವಿಯಾಯಿತು.

ರೈತ ಸಂಘದ ಸಹಾಯದಿಂದ ಸಮುದಾಯ ನಾಟಕ ತಂಡ ಟಿಪ್ಪು ದ್ವಿಶತಮಾನೋತ್ಸವದ ಅಂಗವಾಗಿ ಅನೇಕಲ್‌ನಲ್ಲಿ ಕೋಮುಸೌಹಾರ್ದತೆಯ ಒಂದು ಬೀದಿ ನಾಟಕ ಆಡಲು ಬಂದಿದ್ದರು. ಕೋಮುವಾದಿಗಳು ಇವರ ಮೇಲೆ ಹಲ್ಲೆ ಮಾಡಿದ್ದರು. ಆಗ ರೈತ ಸಂಘ ಮುಖಂಡರು ಮುಂದೆ ಹೋದಾಗ ಅವರಿಗೂ ಪೆಟ್ಟಾಗಿತ್ತು. ಇದರ ಪರಿಣಾಮವಾಗಿ ಮೇ. 10 ರಂದು ಹಲ್ಲೆಯನ್ನು ಖಂಡಿಸಿ ವಿವೇಕ ಬಳಗಕ್ಕೆ ಬೆಂಬಲ ನೀಡಿ ರೈತ ಸಂಘಟನೆ ಎಲ್ಲಾ ಜನಪರ ಸಂಘಟನೆಗಳೊಂದಿಗೆ ಒಟ್ಟು ಗೂಡಿ ಆನೇಕಲ್‌ನಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ದಿನಾಂಕ 6-6-1999 ರಂದು ತಾಲ್ಲೂಕು ಪ್ರಥಮ ರೈತ ಸಮ್ಮೇಳನ

ಈ ಸಮ್ಮೇಳನದಲ್ಲಿ ತಾಲ್ಲೂಕಿನ ಪ್ರತಿ ಹಳ್ಳಿಗಳಿಂದ ರೈತರು ಪ್ರತಿನಿಧಿಗಳಾಗಿ ಭಾಗ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆ ಮಾಡಿದ ಕಾಂ. ಪಿ. ಜಗನ್ನಾಥ್ ಮಾತಾಡಿ ರೈತರ ಹಲವಾರು ಸಮಸ್ಯೆಗಳ ಬಗ್ಗೆ ಹಾಗೂ ಅದರ ಪರಿಹಾರಗಳ ಬಗ್ಗೆ ವಿವರ ನೀಡಿದರು. ಮುಖ್ಯ ಅತಿಥಿಗಳಾಗಿ ವೆಂಕಟಾಚಲಯ್ಯ, ಶಾಮಣ್ಣರೆಡ್ಡಿಯವರು ಬಂದಿದ್ದರು. ಇದೇ ಸಂದರ್ಭದಲ್ಲಿ ತಾಲ್ಲೂಕು ಸಮಿತಿ ರಚನೆ ಮಾಡಲಾಯಿತು. ತಾಲ್ಲೂಕು ಅಧ್ಯಕ್ಷರಾಗಿ ಕೃಷ್ಣರೆಡ್ಡಿ, ಕಾರ್ಯದರ್ಶಿಯಾಗಿ ಶಿವರಾಮರೆಡ್ಡಿ ಹಾಗೂ ಖಜಾಂಚಿಯಾಗಿ ಭದ್ರಾರೆಡ್ಡಿ ಇವರುಗಳೊಂದಿಗೆ ಸಂಘದ ಸಹ ಕಾರ್ಯದರ್ಶಿಗಳು ಉಪ ಅಧ್ಯಕ್ಷರುಗಳು ಸೇರಿದಂತೆ 25 ಮಂದಿ ಸದಸ್ಯರೊಂದಿಗೆ ತಾಲ್ಲೂಕು ಸಮಿತಿ ರಚನೆಯಾಯಿತು.

ಸಮ್ಮೇಳನದಲ್ಲಿ ತೆಗೆದು ಕೊಂಡ ನಿರ್ಣಯಗಳು

1. ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಒತ್ತುವರಿ ಭೂಮಿಗೆ ಉಳಿವ ಚೀಟಿ ಕೊಡಲು, ಬೆಳೆದ ಬೆಳೆ ಬೆಂಬಲ ಸಿಗಲು ಆಗ್ರಹಿಸಿ ನಿರ್ಣಯ ಅಂಗೀಕರಿಸಲಾಯಿತು.
2. ನಾಗರೀಕ ಸೌಲಭ್ಯಗಳನ್ನು ಅಗ್ರಹಿಸಿ ನಿರ್ಣಯ ತೆಗೆದುಕೊಂಡು ಅಂಗೀಕರಿಸಲಾಯಿತು.
3. ಸಹಕಾರಿ ಬ್ಯಾಂಕ್‌ಗಳಲ್ಲಿ ಹಾಗೂ ಸರ್ಕಾರಿ ಕಛೇರಿಗಳಲ್ಲಿ ನಡೆಯುತ್ತಿರುವ ಲಂಚ, ಭ್ರಷ್ಟಾಚಾರ ತಡೆಗಟ್ಟಲು ಸಂಘವು ಮುಂದೆ ಬರಬೇಕೆಂದು ಪ್ರತಿನಿಧಿಗಳು ಒತ್ತಾಯಿಸಿದರು,

ಸಭೆಯ ಅಧ್ಯಕ್ಷತೆಯನ್ನು ಶಿವರಾಮರೆಡ್ಡಿ ವಹಿಸಿದ್ದರು ಸಮ್ಮೇಳನದ ಕಾರ್ಯಕ್ರಮಕ್ಕೆ ಅಶ್ವಥ್ ನಾರಾಯಣ ಸ್ವಾಗತ ಕೋರಿದರು, ವಂದನಾರ್ಪಣೆ ಅತ್ತಿಬೆಲೆ ಶಾಮಣ ರೆಡ್ಡಿ ಯವರಿಂದ ಆಯಿತು.

ದೇವ ದುರ್ಗ ತಾಲೂಕಿನ ಸಹಕಾರಿ ರಂಗದಲ್ಲಿ ಮುನ್ನುಗ್ಗುತ್ತಿರುವ ಸಿಪಿಐ(ಎಂ)

ಕಳೆದ 18 ವರ್ಷಗಳಿಂದ ಸಿ.ಪಿ.ಐ.(ಎಂ) ಕಾರ್ಯಕರ್ತರು ರೈತ-ಕೃಷಿ ಕೂಲಿಕಾರರ ಸಮಸ್ಯೆಗಳಿಗಾಗಿ ನಿರಂತರ ಹೋರಾಟ ಮಾಡುವ ಮುಖಾಂತರ ಅವರ ವಿಶ್ವಾಸವನ್ನು ಪಡೆಯಲು ಸಾಧ್ಯವಾಗಿದೆ.

ಸಹಕಾರಿ ಚಳುವಳಿಯಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತರು ಸಲ್ಲಿಸಿದ ಸೇವೆಯನ್ನು ಗುರುತಿಸಿದ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಚುನಾವಣೆಗೆ ಹೆದರಿ ಈ ಕೆಳಗಿನ ಸ್ಥಾನಗಳನ್ನು ಸಿ.ಪಿ.ಐ(ಎಂ) ಗೆ ಸ್ಪರ್ಧೆಯಿಲ್ಲದೆ ಬಿಟ್ಟು ಕೊಟ್ಟಿದ್ದು, ನಮ್ಮ ಸಂಗಾತಿಗಳೂ ಹಿತೈಶಿಗಳು ಈ ಕೆಳಗಿವಂತೆ ಚುನಾಯಿತರಾಗಿ ಘೋಷಿಸಲ್ಪಟ್ಟಿದ್ದಾರೆ.

1. ಶ್ರೀ ಅಮರೇಶ ಹುಡೇದ ಸಣ್ಣಕಲ್ಲ ಪ್ರಾರ್ಥಮಿಕ ಭೂ ಅಭಿವೃದಿ ಬ್ಯಾಂಕ್ ದೇವದುರ್ಗ ತಾಲೂಕಾ
2. ರೈತ ಸೇವಾ ಸಹಕಾರಿ ಸಂಘ ಜಾಲಹಳ್ಳಿಗೆ ನಿರ್ದೇಶಕರಾಗಿ
3. ಶ್ರೀ ಬಸ್ವನಗೌಡ ಮಾಲೀಪಾಟೀಲ್ ಕಕ್ಕಲದೊಡ್ಡಿ
4. ಶ್ರೀ ಯಸೂಫ್ ಜಾಲಹಳ್ಳಿ
5. ಶ್ರೀ ಬಸ್ಸಪ್ಪ ತವಗ ಜಾಲಹಳ್ಳಿ
3. ಎಣ್ಣೆ ಬೆಳೆಗಾರರ ಸಹಕಾರಿ ಸಂಘ ಜಾಲಹಳ್ಳಿಗೆ ನಿರ್ದೇಶಕರಾಗಿ ಶ್ರೀ ಹನ್ಮಂತ್ರಾಯ ಚಿಂಚೋಡಿ ಹೊಸೂರ ಸಿದ್ದಾಪುರದಿಂದ ಆಯ್ಕೆಯಾಗಿದ್ದಾರೆ.
4. ಮಸರಕಲ್ಲು ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕರುಗಳಾಗಿ ಈ ಕೇಳಗಿನ ನಾಲ್ಕು ಜನ ಆಯ್ಕೆಯಾಗಿದ್ದಾರೆ.

ಎ. ಶ್ರೀ ಬಸವಲಿಂಗಪ್ಪ ಮಸರಕಲ್ಲ
ಬಿ. ಶ್ರೀ ಬಸವಂತ ರಾಯಗೌಡ ಕಾಕರಗಲ್ಲ
ಸಿ. ಶ್ರೀಮತಿ ಸರೋಜಮ್ಮ ಮಸರಕಲ್ಲು
ಡಿ. ಶ್ರೀ ಗೋಪಾಲಪ್ಪ ಗೌಡ ಚಿಂತಲಕುಂಟಿ

5. ಸುಣ್ಣದ ಕಲ್ಲು ವ್ಯವಸಾಯ ಸೇವಾ ಸಹಕಾರ ಸಂಘದಿಂದ ನಿರ್ದೇಶಕರುಗಳಾಗಿ ಈ ಕೆಳಗಿನ ಎರಡು ಜನ ಆಯ್ಕೆಯಾಗಿದ್ದಾರೆ
6. ಶ್ರೀ ಶಿವರಾಜಪ್ಪ ಸುಣ್ಣದ ಕಲ್ಲ
8. ಶ್ರೀ ನಿಂಗಪ್ಪ

ಚಂದ್ರಶೇಖರ್ ಬಾಳೆ

ಹಾನಗಲ್.................................

ಪುಟ 4 ರಿಂದ

ಅಧ್ಯಕ್ಷರಾದ ಕಾಮ್ರೆಡ್ ಟಾಕನ್ ಗೌಡ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ನಿತ್ಯಾನಂದ ಸ್ವಾಮಿ, ಜಿ.ಎನ್. ನಾಗರಾಜ್ ಮತ್ತು ಹಕ್ಕಲಗೌಡ ಪಾಟೀಲ್ ಮಾತನಾಡಿದರು.

ಮರುದಿನ ಬೆಳಿಗ್ಗೆ ರಾಜ್ಯ ಸಮಿತಿಯ ಎಲ್ಲ ಸದಸ್ಯರು ಪಕ್ಕದ ಬಿಂಗಾಪುರ ಗ್ರಾಮಕ್ಕೆ ತೆರಳಿ ಅಲ್ಲಿಯ ಕೂಲಿಕಾರರು ಜೈಲಿಗೆ ಹೋಗಿ ಬಂದ ಬಳಿಕವೂ ಯಶಸ್ವಿಯಾಗಿ ಸಾಗುವಳಿ ಮಾಡುತ್ತಿರುವ ಸುಮಾರು 100 ಎಕರೆ ಭೂಮಿಯನ್ನು ಪ್ರತ್ಯಕ್ಷ ನೋಡಿದರಲ್ಲದೆ ಕಳೆದ ಎರಡು ಮೂರು ವರ್ಷಗಳಿಂದ ನಡೆಸಲಾದ ಹೋರಾಟದ ವೃತಾಂತವನ್ನು ತಿಳಿದುಕೊಂಡರು.

ಹೊಂಕಣ ಗ್ರಾಮದಲ್ಲಿ ಪ್ರತಿಭಟನೆ

ಕಳೆದ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರಲಾಗಿದ್ದ ಸರ್ಕಾರಿ ಬಂಜರು ಭೂಮಿಯಲ್ಲಿ ಅರಣ್ಯ ಇಲಾಖೆಯವರು ಬುಲ್ಡೋಜರ್ ಮೂಲಕ ಟ್ರೆಂಚ್ ಕಡಿದು ಬಿದಿರಿನ ಸಸಿಗಳನ್ನು ನೆಡಲು ಸಿದ್ಧತೆ ನಡೆಸಿದ್ದನ್ನು ವಿರೋಧಿಸಲು ಜೂನ್ 14 ರಂದು ರಾತ್ರಿ ಹೊಂಕಣ ಗ್ರಾಮದಲ್ಲಿ ಬೃಹತ್ ಸಭೆಯನ್ನು ನಡೆಸಲಾಯಿತು. ಗ್ರಾಮದ ಹಿರಿಯರಾದ ಶ್ರೀಯುತ ದಳವಾಯಿ ಅವರು ಅಧ್ಯಕ್ಷತೆ ವಹಿಸಿದ್ದರು. ನಿತ್ಯಾನಂದಸ್ವಾಮಿ ಮತ್ತು ಹಕ್ಕಲಗೌಡ ಪಾಟೀಲರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮರುದಿನ ಬೆಳಿಗ್ಗೆ ಗ್ರಾಮದ ಕೂಲಿಕಾರರು ತಮ್ಮ ಮುಖಂಡರೊಂದಿಗೆ ಸ್ಥಳ ಪರಿಶೀಲನೆಗೆ ಹೊರಟರು. ಅರಣ್ಯ ಇಲಾಖೆಯವರು ಮಾಡಿರುವ ದಾಂಧಲೆಯನ್ನು ವೀಕ್ಷಿಸಲಾಯಿತು. ವರ್ದಾ ನದಿಯ ದಂಡೆಯ ಮೇಲಿರುವ ಈ ಕೃಷಿಯೋಗ್ಯ ಭೂಮಿಯನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಡದಿರಲು ಪಣತೊಡಲಾಯಿತು. ವಾಪಾಸ್ ಗ್ರಾಮದ ಕಡೆ ಹೊರಟು ನಿಂತಾಗ ಅರಣ್ಯ ಇಲಾಖೆಯವರು ಎರಡು ಟ್ರಾಕ್ಟರುಗಳಲ್ಲಿ ಬಿದಿರಿನ ಸಸಿಗಳನ್ನು ತುಂಬಿಕೊಂಡು ಬರುತ್ತಿರುವುದು ಗೋಚರಿಸಿತು. ಕೂಲಿಕಾರರು ತಮ್ಮ ಮುಖಂಡರೊಂದಿಗೆ ಚರ್ಚಿಸಿ ಟ್ರಾಕ್ಟರುಗಳನ್ನು ರಸ್ತೆಯಲ್ಲಿಯೇ ತಡೆಯಲು ನಿರ್ಧರಿಸಿದರು. ಘೋಷಣೆಗಳನ್ನು ಕೂಗುತ್ತಾ ಕೂಲಿಕಾರರು ರಸ್ತೆಯ ಮೇಲೆ ಕುಳಿತುಕೊಂಡಾಗ ಟ್ರಾಕ್ಟರುಗಳು ನಿಂತವು. ನಿತ್ಯಾನಂದ ಸ್ವಾಮಿಯವರಿಗೂ ಅರಣ್ಯ ಹವಾಲ್ದಾರನಿಗೂ ನಡುವೆ ಮಾತಿನ ಚಕಮಕಿ ನಡೆಯಿತು. ನಾವು ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ಬಿದಿರಿನ ಸಸಿಗಳನ್ನು ಕೊಂಡೊಯ್ಯಲು ನಾವು ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಲಾಯಿತು. ಸಂಜೆಯವರೆಗೂ ಕೂಲಿಕಾರರು ಅಲ್ಲಿಂದ ಕದಲಲಿಲ್ಲ. ಅರಣ್ಯ ಸಿಬ್ಬಂಧಿಯವರು ಅಲ್ಲಿ ಇಲ್ಲಿ ಓಡಾಡಿ ಹಿಂತಿರುಗಿದರು. ಕತ್ತಲಾಗುತ್ತಿದ್ದಂತೆ ಸಸಿಗಳನ್ನು ಅಲ್ಲಿಯೇ ರಸ್ತೆಯ ಪಕ್ಕದಲ್ಲಿ ಇಳಿಸಿ ಅರಣ್ಯ ಇಲಾಖೆಯವರು ಹಿಂತಿರುಗಿದರು. ಮೊದಲ ಹೋರಾಟದಲ್ಲಿ ಗೆದ್ದು ಬಂದ ಉತ್ಸಾಹದಿಂದ ಮೈಮರೆಯದೆ ಅರಣ್ಯ ಇಲಾಖೆಯವರು ಮತ್ತೆ ಬಂದು ಸಸಿ ನೆಡುವ ಕಾರ್ಯ ಆರಂಭಿಸಿದರೆ ಕೂಲಿಕಾರರೆಲ್ಲರು ಒಗ್ಗಟ್ಟಾಗಿ ಅವರನ್ನು ತಡೆಯಬೇಕೆಂದು ನಿರ್ಧರಿಸಲಾಯಿತು.

ಎಲಿವಾಳ ಗ್ರಾಮದಲ್ಲಿ ಸಭೆ

ಭೂಮಿಯ ಹೋರಾಟದಲ್ಲಿ ಜೈಲಿಗೆ ಹೋಗಿ ಬಂದ ನಂತರ ಸ್ವಲ್ಪ ಎದೆಗುಂದಿದ್ದ ಕೂಲಿಕಾರರಿಗೆ ಧೈರ್ಯ ತುಂಬಲು ಎಲಿವಾಳ ಗ್ರಾಮದಲ್ಲಿ ಅಂದು (16.6.99) ಸಭೆಯನ್ನು ಏರ್ಪಡಿಸಲಾಗಿತ್ತು. ಕೂಲಿಕಾರರ ಮುಖಂಡ ರಾಮಣ್ಣ ಕೊಳ್ಳಿ ಅವರು ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಜನತಾ ದಳದ ಮರಿ ಪುಡಾರಿಗಳು ಕೂಲಿಕಾರರಲ್ಲಿ ಭಯ ಭೀತಿ ಹುಟ್ಟಿಸುತ್ತಾರೆ ಎಂಬ ದೂರು ವ್ಯಕ್ತವಾಯಿತು. ಮುಸ್ಲಿಂ ಅಲ್ಪಸಂಖ್ಯಾತರ ಮನೆಗಳ ಮೇಲೆ ಇತ್ತೀಚಿಗೆ ದಾಳಿ ಮಾಡಿಸಿದ್ದಾರೆ ಎಂದು ಸಹ ತಿಳಿದುಬಂತು. ಕೂಲಿಕಾರರ ಸಂಘವನ್ನು ಪಕ್ಷಾತೀತವಾಗಿಯೂ ಜಾತ್ಯಾತೀತವಾಗಿಯೂ ಕಟ್ಟುವುದೊಂದೇ ಇಂತಹ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಮಾರ್ಗವಾಗಿದೆ ಎಂದು ಕಾಮ್ರೆಡ್ ನಿತ್ಯಾನಂದ ಸ್ವಾಮಿ ವಿವರಿಸಿದರು. ಕಾಮ್ರೆಡ್ ಹಕ್ಕಲಗೌಡ ಪಾಟೀಲರು ಸಹ ಮಾತನಾಡಿದರು.

ಜಂಗಿನ ಕೊಪ್ಪದ ಮೊಕದ್ದಮೆ ಹಿಂದಕ್ಕೆ

ಮೂರು ವರ್ಷಗಳ ಹಿಂದೆ ಜಂಗಿನಕೊಪ್ಪದಲ್ಲಿ ಲಂಬಾಣಿ ಮಹಿಳೆಯರನ್ನು ಬೆದರಿಸಲು ಅರಣ್ಯ ಇಲಾಖೆಯವರು ಗುಂಡು ಹಾರಿಸಿದ ಪ್ರಕರಣದಲ್ಲಿ ಬಂಧಿಸಿ ಜೈಲಿಗೆ ಹಾಕಲಾಗಿದ್ದ 117 ಜನ ಕೂಲಿಕಾರರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಯನ್ನು ಸರ್ಕಾರ ಹಿಂತೆಗೆದುಕೊಂಡಿರುವುದನ್ನು 21-6-99 ರಂದು ನ್ಯಾಯಾಲಯ ಅನುಮೋದಿಸಿತು.

ಜಪಾನ್ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಮುನ್ನಡೆ

ಜಪಾನಿ ಕಮ್ಯುನಿಸ್ಟ್ ಪಕ್ಷ ಆ ದೇಶದ ಸ್ಥಳೀಯ ಸಂಸ್ಥೆಗಳಿಗೆ ನಡೆದ (ನಗರ ಸಭೆಗಳು, ಮುನಿಸಿಪಾಲಿಟಿ ಇತ್ಯಾದಿ) ಎರಡನೇ ಸುತ್ತಿನ ಚುನಾವಣೆಯಲ್ಲಿ ವಿಜಯ ಸಾಧಿಸಿದೆ. ಮೊದಲನೆಯ ಸುತ್ತಿನ ಚುನಾವಣೆ ಇದೇ ವರ್ಷದ ಏಪ್ರಿಲ್‌ನಲ್ಲಿ ನಡೆದಿತ್ತು. ಒಟ್ಟಿಗೆ ಈ ಸ್ಥಳೀಯ ಸಂಸ್ಥೆಗಳಲ್ಲಿ ಈಗ ಕಮ್ಯುನಿಸ್ಟ್ ಪಕ್ಷ 4413 ಸ್ಥಾನ ಪಡೆದಿದ್ದು -ಹಿಂದಿನ 1995 ರಲ್ಲಿ ಪಡೆದದ್ದಕ್ಕಿಂತ 1996 ಹೆಚ್ಚು. ಎರಡನೇ ಸುತ್ತಿನಲ್ಲಿ 386 ನಗರ ಸಭೆಗಳಿಗೆ ಟೋಕ್ಯೋದ 21 ವಾರ್ಡ್‌ಗಳಿಗೆ ಚುನಾವಣೆ ನಡೆದಿತ್ತು. ನಗರಸಭೆಗಳಲ್ಲಿ ಕಮ್ಯುನಿಸ್ಟ್ ಪಕ್ಷ 1033 ಸೀಟುಗನ್ನು ಗಳಿಸಿದ್ದು ಇದು ಈಗ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಬೂರ್ಜ್ವ ಆಳುವ ವರ್ಗದ ಪ್ರಮುಖ ಪಕ್ಷವಾದ ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ ಎಲ್.ಡಿ.ಪಿ. ಯನ್ನು ಹಿಂದೆ ಹಾಕಿ ಪ್ರಥಮ ಸ್ಥಾನಕ್ಕೆ ಬಂದಿದೆ. 881 ಸೀಟುಗಳನ್ನು ಗಳಿಸಿ ಎಲ್.ಡಿ.ಪಿ. ಎರಡನೇ ಸ್ಥಾನಕ್ಕೆ ಸರಿದಿದೆ. 115 ಮುನಿಸಿಪಾಲಿಟಿಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮೊದಲ ಬಾರಿಗೆ ಸ್ಥಾನಗಳನ್ನು ಗೆದ್ದುಕೊಂಡಿದೆ. ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಲ್ಲಿ ಶೇಕಡಾ 40 ಮಹಿಳೆಯರಾಗಿದ್ದರು. 21ನೇ ಶತಮಾನದ ಆದಿಯಲ್ಲಿ ಪ್ರಜಾಸತ್ತಾತ್ಮಕ ಜಪಾನು ಹೊಂದುವ ಪಕ್ಷದ ಗುರಿಯತ್ತ ಇದು ಒಂದು ಪ್ರಥಮ ಹೆಜ್ಜೆ. ಈ ವಿಜಯ ಜಪಾನು ಹಾಗೂ ಇತರ ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲಿ ಮಾಮೂಲಾದ ಅತ್ಯಂತ ಹೆಚ್ಚು ಕಮ್ಯುನಿಸ್ಟ್- ವಿರೋಧಿ ಪ್ರಚಾರವಿದ್ದಾಗ್ಯೂ ಸಾಧಿತವಾಗಿದೆ ಎಂದು ಗಮನಿಸಬೇಕು.



'ಸಂದರ್ಶಕ ಪಡೆಗಳ ಒಪ್ಪಂದವನ್ನು ತಿರಸ್ಕರಿಸಿ' ಎಂಬ ಪೋಸ್ಟರ್ ಹಿಡಿದ ಎಡಪಂಥೀಯ ಪ್ರತಿಭಟನಾಕಾರ. ಈ ಒಪ್ಪಂದ ಅಮೆರಿಕನ್ ಪಡೆಗಳಿಗೆ ಮತ್ತೆ ಫಿಲಿಫೈನ್ಸ್‌ನಲ್ಲಿ ಕಾಲಿಡಲು ಅವಕಾಶ ನೀಡುತ್ತದೆ. ಈ ಬಗ್ಗೆ ಫಿಲಿಫೈನ್ಸ್‌ನ ಪಾರ್ಲಿಮೆಂಟು ಚರ್ಚಿಸಲಿದ್ದು ಅದು ಇದನ್ನು ತಿರಸ್ಕರಿಸಬೇಕು ಎಂಬ ಒತ್ತಾಯ ಬಂದಿದೆ. ಈ ಪೋಸ್ಟರ್‌ನಲ್ಲಿ ಫಿಲಿಫೈನ್ಸ್ ಅಧ್ಯಕ್ಷ ವಸ್ತ್ರಾದಾ ಅಮೆರಿಕನ್ ಬಾವುಟ ಸುತ್ತಿಕೊಂಡು ತನ್ನನ್ನು ರಕ್ಷಿಸಿಕೊಳ್ಳುತ್ತಿದ್ದಾನೆ ಎಂದು ವ್ಯಂಗ್ಯವಾಡಲಾಗಿದೆ.

ಕೊಕಾ ಕೊಲಾದ ಮೇಲೆ ಬೆಲ್ಜಿಯಂನಲ್ಲಿ ನಿಷೇಧ

ಯುರೋಪಿನ ಪ್ರಮುಖ ದೇಶವಾದ ಬೆಲ್ಜಿಯಂನಲ್ಲಿ ಕೊಕಾ ಕೊಲಾದ ಮೇಲೆ ನಿಷೇಧ ಹೇರಲಾಗಿದೆ. ನೂರಕ್ಕೂ ಹೆಚ್ಚು ಮಕ್ಕಳು ಕೋಕ್ ಕುಡಿದು ಅಸ್ವಸ್ಥರಾದ ಮೇಲೆ ಈ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಕೋಕ್ ಬಗ್ಗೆ ಭಯ ಯುರೋಪಲ್ಲೂ ಹರಡಿದ್ದು ಫ್ರಾನ್ಸ್, ಲಕ್ಸಂಬರ್ಗ್, ಮತ್ತು ನೆದರ್‌ಲ್ಯಾಂಡ್ಸ್ ಸಹ ಕೋಕ್ ಮೇಲೆ ನಿಷೇಧ ಹಾಕಿವೆ.

ಇದಕ್ಕಿಂತ ಮೊದಲು ಬೆಲ್ಜಿಯಂನಲ್ಲಿ ಇನ್ನೊಂದು ಆಹಾರ ಸಂಬಂಧಿತ ಭಯ ಹರಡಿತ್ತು. ಬೆಲ್ಜಿಯಂನ ಮೂರನೇ ಒಂದು ಭಾಗ ಮಾಂಸ ಪೂರೈಸುವ ಸಾವಿರಕ್ಕೂ ಹೆಚ್ಚು ಫಾರ್ಮುಗಳಲ್ಲಿ ಕೋಳಿಗಳಿಗೆ ಕೊಡುವ ಆಹಾರ ಕಲುಷಿತವಾಗಿದ್ದು-ಡಿಯಾಕ್ಸಿನ್ ಎಂಬ ಕ್ಯಾನ್ಸರ್ ಉಂಟುಮಾಡುವ ರಾಸಾಯನಿಕ ಇದೆ ಎಂದು ಪರೀಕ್ಷೆ ಮೂಲಕ ಗೊತ್ತಾಗಿತ್ತು. ಇದರಿಂದ ಬೆಲ್ಜಿಯಂನಲ್ಲೇ ಭಾರಿ ಆತಂಕ ಹರಡಿತ್ತು. ಈ ಸಾವಿರ ಫಾರ್ಮುಗಳ ಉತ್ಪನ್ನಗಳು ಯಾವುವು ಎಂದು ಪತ್ತೆ ಹಚ್ಚಲಾಗಿದೆ. ಯುರೋಪಿನ ಇತರ ದೇಶಗಳ ಬೆಲ್ಜಿಯಂ ಕೋಳಿ ಆಮದನ್ನು ನಿಷೇಧಿಸಿದ್ದವು. ಮುಖ್ಯವಾಗಿ ಜರ್ಮನ್, ಫ್ರಾನ್ಸ್‌ಗಳು. ಇದರಿಂದ ಭಯ ಹರಡಿ ಅಮೇರಿಕ ಹಾಗೂ ದಕ್ಷಿಣ ಪೂರ್ವ ಏಶ್ಯಾದ ದೇಶಗಳ ಯುರೋಪಿನಿಂದ ಬರುವ ಎಲ್ಲಾ ಮಾಂಸ ಉತ್ಪನ್ನಗಳ ಮೇಲೆ ನಿಷೇಧ ಹೇರಿವೆ. ಈಗ ಯುರೋಪಿನಿಂದ ಬರುವ ಮಾಂಸ ಉತ್ಪನ್ನಗಳು ಡಿಯಾಕ್ಸಿನ್ ಮುಕ್ತವಾಗಿವೆ ಎಂಬ ನಿರ್ದಿಷ್ಟ ಸರ್ಟಿಫಿಕೇಟು ಹೊಂದಿರಬೇಕು. ಮಾಂಸದ ಪ್ರಾಣಿಗಳ ಆಹಾರ ತಯಾರಿಕೆಯಲ್ಲಿ ರಾಸಾಯನಿಕ ಕಾರ್ಖಾನೆಗಳ ಕಲ್ಮಶ ಇತ್ಯಾದಿ ಬಳಸುತ್ತಿರುವುದೇ ಈ ಸಮಸ್ಯೆಗೆ ಕಾರಣ ಎನ್ನಲಾಗಿದೆ.

ಜಿ-8 ಶೃಂಗ ಸಭೆಯ ಎದುರು ಬಡದೇಶಗಳ ಸಾಲಮನ್ನಕ್ಕೆ 70 ಸಾವಿರ ಜನರ ಮಾನವ ಸರಪಣಿ

ಜಿ-8 ಜಗತ್ತಿನ ಏಳು ಅತ್ಯಂತ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಮತ್ತು ರಶ್ಯದ ಸಾಮ್ರಾಜ್ಯಶಾಹಿ ಕೂಟ. ಆ ಏಳು ದೇಶಗಳೆಂದರೆ ಅಮೆರಿಕ, ಬ್ರಿಟನ್, ಫ್ರಾನ್ಸ್, ಕೆನಡಾ, ಜರ್ಮನಿ, ಇಟಲಿ, ನೆದರ್‌ಲ್ಯಾಂಡ್. ಇವು ವರ್ಷಕ್ಕೊಮ್ಮೆ ಶೃಂಗ ಸಭೆ ಸೇರಿ ಜಗತ್ತಿನ ಮೇಲೆ ತಮ್ಮ ಯಜಮಾನಿಕೆಯ ಬಗ್ಗೆ ಪರಿಶೀಲನೆ ನಡೆಸುತ್ತವೆ. ಈ ವರ್ಷದ ಸಭೆ ಯುಗೋಸ್ಲಾವಿಯಾ ಯುದ್ಧದ ಹಿನ್ನೆಲೆಯ ಜರ್ಮನಿಯ ಕೊಲೋನ್ ಎಂಬ ನಗರದಲ್ಲಿ ನಡೆದಿತ್ತು. ಜಿ-8 ಸಭೆ ಯಾವಾಗಲೂ ಜಾಗತೀಕರಣದ ವಿರುದ್ಧ ಪ್ರತಿಭಟನೆಯ ಕೇಂದ್ರ. ಈ ಬಾರಿಯೂ ಜಿ-8 ದೇಶಗಳ ನೀತಿಗಳನ್ನು ವಿರೋಧಿಸಿ ಹಲವು ಸಾಮಾಜಿಕ, ಪರಿಸರ ಸಂಘಟನೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ಅತ್ಯಂತ ಹೆಚ್ಚಿನ ಗಮನ ಸೆಳೆದದ್ದು ಎಂದರೆ ಜಗತ್ತಿನ ದಟ್ಟದರಿದ್ರ ದೇಶಗಳ ಸಾಲ ಮನ್ನ ಮಾಡಬೇಕೆಂಬ ಒತ್ತಾಯದ ಬೆಂಬಲಾರ್ಥ ನಡೆದ ಮಾನವ ಸರಪಳಿ ಕಾರ್ಯಕ್ರಮ. ಇದರಲ್ಲಿ 70 ಸಾವಿರ ಜನ ಭಾಗವಹಿಸಿದ್ದರು ಎಂದು ಅಂದಾಜುಮಾಡಲಾಗಿದೆ.

ಯುದ್ಧಪರ ಜರ್ಮನ್ ಹಸಿರು ಮಂತ್ರಿಗಳಿಗೆ ಮೊಟ್ಟೆ, ಬೆಣ್ಣೆ ಒದೆಯ ಸುರಿಮಳೆ

'ಹಸಿರು ಪಾರ್ಟಿ' ಜರ್ಮನಿಯ ಪ್ರಬಲ ಪರಿಸರ ಚಳುವಳಿ 1980 ರಲ್ಲಿ ಪಡೆದ ರಾಜಕೀಯ ರೂಪ. ಯುದ್ಧಕ್ಕೆ ಅವರು ಯಾವಾಗಲೂ ವಿರೋಧ. ಪ್ರತಿ ತರಹದ ಯುದ್ಧ ಪರಿಸರ ನಾಶಕ್ಕೆ ಕಾರಣವಾಗುತ್ತದೆ ಎಂಬ ವಾದದ ಹಸಿರು ಪಾರ್ಟಿ ಈಗ ಜರ್ಮನಿಯ ಆಳುವ ಎಡ ಮಧ್ಯಮ ಪಂಥೀಯ ಕೂಟದ ಸದಸ್ಯನಾಗಿ ಜರ್ಮನ್ ಸರ್ಕಾರ ಯುಗೋ ಸ್ಲಾವಿಯಾದಲ್ಲಿ ನಾಟೋದ ನರಮೇಧಕ್ಕೆ ಬೆಂಬಲ ನೀಡಿದೆ. ಯುದ್ಧ ಕೋರತನಕ್ಕೆ ತನ್ನ ಪೂರ್ಣ ಅಸ್ತು ನೀಡಿದೆ. ಜರ್ಮನಿಯ ವಿದೇಶಾಂಗ ಮಂತ್ರಿಯೇ 'ಹಸಿರು' ಪಾರ್ಟಿಯವನು. 'ಹಸಿರು' ಪಾರ್ಟಿಯ ಫಾರ್ಲಿಮೆಂಟು ಸದಸ್ಯ ನಾಟೋದ ಯಂತ್ರಕ್ಕೆ ವಾರು ಹೋಗಿರಬಹುದು. ಆದರೆ 'ಹಸಿರು' ಪಾರ್ಟಿಯ ಸಾಮಾನ್ಯ ಸದಸ್ಯರು ತಮ್ಮ ನೀತಿಗಳಿಗೆ ಬದ್ಧರಾಗಿದ್ದಾರೆ ಎಂಬುದು ಬರ್ಲಿನ್‌ನಲ್ಲಿ ನಡೆದ ಹಸಿರು ಪಾರ್ಟಿಯ ಸಮ್ಮೇಳನದಲ್ಲಿ ವ್ಯಕ್ತವಾಯಿತು. 'ಹಸಿರು ಪಾರ್ಟಿಯ ಕೆಳ ಸದನದ ನಾಯಕ ಮತ್ತು ವಿದೇಶ ಮಂತ್ರಿ ಇಬ್ಬರ ಆ ಸಮ್ಮೇಳನದಲ್ಲಿ ಭಾಗವಹಿಸಲು ಹೋದಾಗ ಮೊಟ್ಟೆ, ಬೆಣ್ಣೆ, ಕಲ್ಲು ಒದೆಗಳ ಸುರಿಮಳೆ ಎದುರಿಸಬೇಕಾಯಿತು. ಭಾರೀ ಪೋಲೀಸ್ ರಕ್ಷಣೆಯಲ್ಲಿ ಈ ಸಮ್ಮೇಳನದಲ್ಲಿ ಭಾಗವಹಿಸಬೇಕಾಯಿತು. ಇಡೀ ಸಮ್ಮೇಳನವನ್ನು ಭಾರಿ ಪೋಲೀಸು ಬಂದೋಬಸ್ತಿನಲ್ಲಿ ನಡೆಸಬೇಕಾಯಿತು. ಯುಗೋಸ್ಲಾವಿಯಾ ಯುದ್ಧದಲ್ಲಿ ಜರ್ಮನ್ ಸರ್ಕಾರ ಪಕ್ಷದ ಬಗ್ಗೆ ಅದರಲ್ಲೂ ಈ ಇಬ್ಬರ ಪಾತ್ರದ ಬಗ್ಗೆ ಸಾರ್ವಜನಿಕರು ಮತ್ತು 'ಹಸಿರು' ಪಾರ್ಟಿಯ ಸದಸ್ಯರೇ ಭಾರಿ ಉತ್ತೇಜಿತರಾಗಿದ್ದರು.

'ಹಸಿರು' ಪಾರ್ಟಿಗೆ ಯುಗೋಸ್ಲಾವಿಯಾ ಯುದ್ಧ ಒಂದು ಅಗ್ನಿ ಪರೀಕ್ಷೆಯಾಗಿತ್ತು.

ವಿಶ್ವ ವಾಣಿಜ್ಯ ಸಂಸ್ಥೆಯ ಡೈರೆಕ್ಟರ್ ಜನರಲ್ ಹುದ್ದೆಗೆ ನಿಲ್ಲದ ಹಣಾ ಹಣಿ

ವಿಶ್ವ ವಾಣಿಜ್ಯ ಸಾಮ್ರಾಜ್ಯಶಾಹಿ ದೇಶಗಳ ಮೂರನೇ ಜಗತ್ತಿನ ದೇಶಗಳ ಮೇಲೆ ಆರ್ಥಿಕ ಅಧಿಪತ್ಯ ಸಾಧಿಸಲು ರಚಿಸಿದ ಜಗತ್ತಿನ ಸಂಸ್ಥೆ. ಅಲ್ಲಿ ಸಾಮ್ರಾಜ್ಯಶಾಹಿ ದೇಶಗಳದ್ದೇ ಕಾರುಬಾರು. ಆದರೆ ಈಗ ಅದರ ಡೈರೆಕ್ಟರ್ ಜನರಲ್ ಹುದ್ದೆಗೆ ತೀವ್ರ-ಹಣಾಹಣಿ. ಸಾಮಾನ್ಯವಾಗಿ ಸರ್ವಾನುಮತದಿಂದ ಆಯ್ಕೆಯಾಗುವುದರಿಂದ, ತೀವ್ರ ಬಿಕ್ಕಟ್ಟಿಗೆ ಒಳಗಾಗಿದೆ. ಥೈಲೆಂಡಿನ ವಾಣಿಜ್ಯ ಮಂತ್ರಿ ಮೂರನೇ ಜಗತ್ತಿನ ದೇಶಗಳ ಅಭ್ಯರ್ಥಿಯಾದರೆ, ಶ್ರೀಮಂತ ದೇಶಗಳು ನ್ಯೂಝಿಲ್ಯಾಂಡ್‌ನ ಮಾಜಿ ಪ್ರಧಾನಿ ಮೈಕ್ ಮೂರ್‌ರಿಗೆ ಬೆಂಬಲ ಕೊಡುತ್ತಿವೆ. ಈ ಬಗ್ಗೆ ಸಂಘಟನೆಯಲ್ಲಿ ತೀವ್ರ ವಿರಸ ಉಂಟಾಗಿದ್ದು, ಶ್ರೀಮಂತ ದೇಶಗಳ ಆಟ ನಡೆಯುತ್ತಿಲ್ಲ. ಇತ್ತೀಚಿಗೆ ಈ ಬಗ್ಗೆ ಹಲವು ಊಹಾಪೋಹಗಳು ಬಂದಿವೆ. ಒಂದು ವದಂತಿ ಪ್ರಕಾರ ಥೈಲೆಂಡಿನ ವಾಣಿಜ್ಯ ಮಂತ್ರಿ ತಮ್ಮ ಅಭ್ಯರ್ಥಿತನವನ್ನು ಹಿಂತೆಗೆದರೆ ಅಮೇರಿಕ ವಾಣಿಜ್ಯದಲ್ಲಿ ಹಲವು ರಿಯಾಯತಿಗಳನ್ನು ತೋರುವುದಾಗಿ ಹೇಳಿದೆಯಂತೆ. ಇದನ್ನು ಥ್ಯಾ ವಾಣಿಜ್ಯ ಮಂತ್ರಿ ಸೂಪಾಚಾಮ್ಪ್ರ ಖಂಡ ತುಂಡವಾಗಿ ನಿರಾಕರಿಸಿದ್ದಾರೆ. ಅಲ್ಲದೆ ಸಂಘಟನೆಯ ಜನರಲ್ ಕೌನ್ಸಿಲ್ ಅಧ್ಯಕ್ಷ ಮೈಕೆಲ್ ಮೂರ್ ಪರವಾಗಿ ಸರ್ವಾನುಮತಕ್ಕೆ ಪ್ರಯತ್ನಿಸುತ್ತಿರುವುದನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ.

ಇಂದಿನ ಜಗತ್ತಿನಲ್ಲಿ ಶ್ರೀಮಂತ ದೇಶಗಳು ತಮ್ಮ ಮೂಗಿನ ನೇರಕ್ಕೆ ಎಲ್ಲಾ ಕಾರು ಭಾರು ನಡೆಸುತ್ತಿದ್ದರು. ಎಲ್ಲವೂ ಹಾಗೆ ಆಗುವುದಿಲ್ಲ. ಅವರೇ ಅವರ ಅನುಕೂಲಕ್ಕೆ ಹುಟ್ಟುಹಾಕಿದ ಸಂಘಟನೆಗಳಲ್ಲೂ ಅವರಿಗೆ ಮುಖ ಭಂಗವಾಗುತ್ತದೆ ಎಂದು ಇದು ತೋರಿಸುತ್ತದೆ. ಈಗ ಶ್ರೀಮಂತ ದೇಶಗಳು ಡೈರೆಕ್ಟರ್ ಜನರಲ್ ಆಯ್ಕೆಯ ಕ್ರಮವನ್ನೇ ಬದಲಾಯಿಸಲು ಹೊರಟಿವೆ.

ಆಗ ಚೀಣಾದಿಂದ ಭಾರತದ ಭದ್ರತೆಗೆ ಬೆದರಿಕೆಯ ಬೊಬ್ಬೆ

ಈಗ ಬೈಜಿಂಗ್‌ನಲ್ಲಿ ಬಿಜೆಪಿ ಸರಕಾರದ ತಿಪ್ಪರಲಾಗ

ಚೀಣಾಕ್ಕೆ ಭಾರತದ ವಿದೇಶಾಂಗ ವ್ಯವಹಾರಗಳ ಮಂತ್ರಿ ಜಸ್ವಂತ್ ಸಿಂಗ್‌ರ ಭೇಟಿ ಯಶಸ್ವಿಯಾಗಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್‌ರ ಕರ್ಕಶ ಚೀಣಾ ವಿರೋಧಿ ಅಪಲಾಪಗಳಿಂದ ನಮ್ಮೆರಡು ದೇಶಗಳ ಸಂಬಂಧಗಳಲ್ಲಿ ಉಂಟಾಗಿದ್ದ ಬಿರುಕನ್ನು ಮುಚ್ಚುವ ಪ್ರಕ್ರಿಯೆ ಆರಂಭವಾಗಿದೆ. ಚೀಣಾದಿಂದ ಭಾರತದ ಭದ್ರತೆಗೆ ಯಾವುದೇ ಬೆದರಿಕೆಯಿಲ್ಲ ಎಂದು ಈಗ ಜಸ್ವಂತ್ ಸಿಂಗ್ ಹೇಳಿದ್ದಾರೆ. ಹಾಗಿದ್ದಲ್ಲಿ ಕಳೆದ ಮೇ ತಿಂಗಳಲ್ಲಿ ಅಮೆರಿಕನ್ ಅಧ್ಯಕ್ಷ ಕ್ಲಿಂಟನ್‌ಗೆ ಪ್ರಧಾನ ಮಂತ್ರಿ ವಾಜಪೇಯಿಯವರ ಪತ್ರದಲ್ಲಿ ಚೀಣಾ ಭಾರತದ ಭದ್ರತೆಗೊಂದು ಗಂಭೀರ ಬೆದರಿಕೆ ಎಂದು ಬರೆದದ್ದಾದರೂ ಏಕೆ? ಪ್ರಧಾನಮಂತ್ರಿಗಳ ಆ ಪತ್ರ ಒಂದು ಮಹಾ ಪ್ರಮಾದ ಎಂಬುದನ್ನು ಈಗ ಈ ಸರಕಾರ ಒಪ್ಪಿಕೊಂಡಂತಾಗಿದೆ.

ಚೀಣಾದೊಡನೆ ಇರುವ ವಿವಾದಗಳನ್ನೆಲ್ಲಾ ಮೇಜಿನ ಆಚೀಚೆ ಕೂತೇ ಪರಿಹರಿಸಿಕೊಳ್ಳಬೇಕು ಎಂಬ ಅಂಶವನ್ನು ವಿದೇಶಾಂಗ ಮಂತ್ರಿಗಳ ಈ ಭೇಟಿ ಮತ್ತೆ ಮನವರಿಕೆ ಮಾಡಿಕೊಟ್ಟಿದೆ. ಗಡಿ ವಿವಾದವನ್ನು ಚರ್ಚಿಸಲು ಹಾಗೂ ಪರಸ್ಪರ ವಿಶ್ವಾಸ ಕುದುರಿಸುವ ಕ್ರಮಗಳನ್ನು ರೂಪಿಸಲೆಂದು ರಚಿಸಿದ ಜಂಟಿ ಕಾರ್ಯ ತಂಡಗಳ ಕೆಲಸವನ್ನು ತ್ವರಿತಗೊಳಿಸಲು ಈ ಬಾರಿ ನಿರ್ಧರಿಸಲಾಯಿತಲ್ಲದೆ ಭಾರತ ಮತ್ತು ಚೀಣಾದ ನಡುವೆ ಮಹತ್ವದ ಸಂವಾದದ ಪ್ರಶ್ನೆಯನ್ನು ಈ ಭೇಟಿಯಲ್ಲಿ ಎತ್ತಲಾಯಿತು. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಒಂದು ಸೂಕ್ತ ಸಮತೋಲನ ತರಬೇಕು, ಒಂದೇ ಪ್ರಬಲ ಶಕ್ತಿಯ ಸುತ್ತ ಗಿರಕಿ ಹೊಡೆಯುವ ಪರಿಸ್ಥಿತಿಯನ್ನು ತಪ್ಪಿಸಬೇಕು - ವಿಶೇಷವಾಗಿ ಯುಗೋಸ್ಲಾವಿಯದ ಮೇಲೆ ನಾಟೋ ಬಾಂಬ್ ಧಾಳಿಯ ನಂತರದ ಪರಿಸ್ಥಿತಿಯಲ್ಲಿ - ಎಂಬ ಬಗ್ಗೆ ಎರಡೂ ದೇಶಗಳ ಮುಖಂಡರು ಒತ್ತು ನೀಡಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ.

ಪಾಕಿಸ್ತಾನಿ ಬೆಂಬಲಿತ ಅತಿಕ್ರಮಣಕೋರರು ಭಾರತದ ಪ್ರದೇಶವನ್ನು ಅತಿಕ್ರಮಿಸಿದ್ದನ್ನು ಭಾರತೀಯ ಪಡೆಗಳು ತೆರವು ಮಾಡುತ್ತಿರುವ ಸಂದರ್ಭದಲ್ಲಿ ಜಸ್ವಂತ್ ಸಿಂಗರ ಭೇಟಿ, ಬೈಜಿಂಗ್‌ನಲ್ಲಿ ಅವರಿಗೆ ದೊರೆತ ಹಾರ್ದಿಕ ಸ್ವಾಗತದ ಮಹತ್ವವನ್ನು ಯಾರೂ ಕಾಣದಿರಲು ಸಾಧ್ಯವಿಲ್ಲ. ಭಾರತ ಮತ್ತು ಪಾಕಿಸ್ತಾನ ಸಂಯಮದಿಂದ ವರ್ತಿಸಬೇಕು, ಕಾಶ್ಮೀರ ಸೇರಿದಂತೆ ಎಲ್ಲಾ ಪ್ರಶ್ನೆಗಳನ್ನು ದ್ವಿಪಕ್ಷೀಯ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಬೇಕು ಎಂಬ ಚೀಣಾದ ನಿಲುವೂ ಕೂಡಾ ಒಂದು ಸ್ವಾಗತಾರ್ಹ ಬೆಳವಣಿಗೆ. ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯ ಸಮಸ್ಯೆಯಾಗಿಸುವ ಪಾಕಿಸ್ತಾನದ ಆಟವನ್ನು ಚೀಣಾ ಅನುಮೋದಿಸುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟ.

ಇದು ನಮ್ಮೆರಡು ದೇಶಗಳ ನಡುವೆ 'ಪಂಚಶೀಲ' ದ ನೀತಿಗಳ ಆಧಾರದಲ್ಲಿ ಉತ್ತಮ ನೆರೆಹೊರೆ ಸಂಬಂಧಗಳನ್ನು ಬಲಪಡಿಸುವ ಹೊಸ ಪ್ರಯತ್ನಗಳಿಗೆ ನಾಂದಿಯಾಗಬೇಕು ಎಂದು ಸಿಪಿಐ(ಎಂ) ನ ಕೇಂದ್ರ ಸಮಿತಿಯ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯ ಆಶಿಸಿದೆ.

ಕೆನಡಿಯನ್ ಕಮ್ಯುನಿಸ್ಟ್ ಪಕ್ಷಕ್ಕೆ ಕಾನೂನು ಬದ್ಧತೆಯ ವಿಜಯ

ಕೆನಡಿಯನ್ ಕಮ್ಯುನಿಸ್ಟ್ ಪಕ್ಷ 'ಕಾನೂನುಬದ್ಧ ರಿಜಿಸ್ಟರ್ ಆದ ಪಕ್ಷವಾಗಿ ಮುಂದುವರೆಯಲು ಇದ್ದ ಕಾನೂನಿನ ಅಡೆತಡೆಗಳನ್ನು ಒಂಟಾರಿಯೋ ಕೋರ್ಟ್ ನಿರ್ಮೂಲನ ಮಾಡಿದ್ದು ಅದರ ಕಾನೂನು ಬದ್ಧ ರಿಜಿಸ್ಟರ್ಡ್ ಸ್ಥಾನಮಾನ ಮರಳಿ ದೊರಕಿದೆ. ಇದು ಪಕ್ಷದ ಹೋರಾಟದ ಹಾದಿಯಲ್ಲಿ ಪ್ರಮುಖ ಮೈಲಿಗಲ್ಲು.

1993 ರಲ್ಲಿ ಆಗಿನ ಟೋರಿ ಸರ್ಕಾರ ತಂದ ಚುನಾವಣಾ ಕಾನೂನು ತಿದ್ದುಪಡಿ ಸಂವಿಧಾನ ಬಾಹಿರ ಎಂದು ಕಮ್ಯುನಿಸ್ಟ್ ಪಕ್ಷ ಕೋರ್ಟಿಗೆ ಹೋಗಿತ್ತು. ಕೋರ್ಟು ಆ ತಿದ್ದುಪಡಿಗಳನ್ನು ಸಂವಿಧಾನ ಬಾಹಿರ ಎಂದು ಹೇಳಿ ತಳ್ಳಿ ಹಾಕಿದೆ. ಸರ್ಕಾರ ಮೇಲಿನ ಕೋರ್ಟಿಗೆ ಹೋಗುವ ಉದ್ಧಟತನ ತೋರದಿದ್ದರೆ ಇದು ಪಕ್ಷಕ್ಕೆ ದೊಡ್ಡ ವಿಜಯ ಎನ್ನಬಹುದು.

1993ರ ಚುನಾವಣಾ ಕಾನೂನಿನ ಪ್ರಕಾರ ಪ್ರತಿ ಚುನಾವಣೆಯಲ್ಲಿ ರಿಜಿಸ್ಟರ್ಡ್ ಆದ ಪಕ್ಷ ಕನಿಷ್ಟ 50 ಸೀಟುಗಳಲ್ಲಿ ಸ್ಪರ್ಧಿಸಬೇಕು. ಪ್ರತಿ ಸೀಟಿಗೆ ಡಿಪಾಸಿಟನ್ನು 200 ರಿಂದ 1000 ಡಾಲರ್ ಏರಿಸಲಾಗಿತ್ತು. ಡಿಪಾಸಿಟ್‌ನ ಅರ್ಧ ಹಾಗೂ ಕನಿಷ್ಟ ಶೇಕಡಾ 15 ಮತಗಳಿಸಿದರೆ ಮಾತ್ರ ಹಿಂದಿರುಗಿಸಲಾಗುವುದು. 50 ಸೀಟುಗಳಲ್ಲಿ ಅಭ್ಯರ್ಥಿಗಳನ್ನು ಸ್ಪರ್ಧಿಸಿ, ಡಿಪಾಸಿಟ್ ಉಳಿಸಿಕೊಳ್ಳಲು ಸಾಧ್ಯವಾಗದ ಪಕ್ಷಗಳ ರಿಜಿಸ್ಟರ್ ಸ್ಥಾನವು ಹೋಗುತ್ತವೆ.

ಕಮ್ಯುನಿಸ್ಟ್ ಪಕ್ಷ 50 ಸೀಟುಗಳಲ್ಲಿ ಸ್ಪರ್ಧಿಸಲು ಬೇಕಾದ 50 ಸಾವಿರ ಡಾಲರು ಹೊಂದಿಸಲಾಗದೆ ರಿಜಿಸ್ಟರ್ ಸ್ಥಾನವನ್ನು ಕಳೆದು ಕೊಂಡಿತ್ತು. ಎಲ್ಲಾ ಆಸ್ತಿಪಾಸ್ತಿ ಮಾರಿ ತನ್ನ ವೆಚ್ಚ ಸರಿದೂಗಿಸಬೇಕಾದ ಸ್ಥಿತಿ ಬಂದಿತ್ತು. ಕೋರ್ಟು ಈ ಎಲ್ಲಾ ತಿದ್ದುಪಡಿಗಳನ್ನು ರದ್ದು ಮಾಡಿದ್ದು ಕಮ್ಯುನಿಸ್ಟ್ ಪಕ್ಷದ ದೊಡ್ಡ ವಿಜಯ. ಪಕ್ಷ ಕೋರ್ಟಿನಲ್ಲಿ ಅಲ್ಲದೆ, ಪಾರ್ಲಿಮೆಂಟ್ ಒಳಗೂ ಹೊರಗೂ ಆ ಬಗ್ಗೆ ಪ್ರಬಲ ಪ್ರಚಾರ ಪ್ರಕ್ಷೋಭೆ ನಡೆಸಿತ್ತು. ಇತರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸಿತು.

ಕೆನಡಿಯನ್ ಪ್ರಜಾಸತ್ತೆಯನ್ನು ಮೂರು ಪ್ರಮುಖ ಪಕ್ಷಗಳ ನಡುವೆ ಫ್ರೆಂಡ್ಲಿ ಮ್ಯಾಚ್‌ಗೆ ಇಳಿಸುವ ಆಳುವ ವರ್ಗದ ಪಿತೂರಿಯನ್ನು ಈ ಹೋರಾಟ ವಿಫಲಗೊಳಿಸಿದೆ.

ಆಸ್ಟ್ರೇಲಿಯ ವಿಶ್ವ ಚಾಂಪಿಯನ್

ಇಂಡಿಯಾದ 'ಸಪ್ಪೆ' ಸಾಧನೆಗೆ ಕಾರಣವೇನು?



ಕೊನೆಗೂ ಮುಗಿಯಿತು ಇಡೀ ಮಾಜಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ತಗುಲಿದ್ದ ವಿಶ್ವಕಪ್ ಕ್ರಿಕೆಟ್ ಪಂದ್ಯದ ಜ್ವರ. ಈ ಶತಮಾನದ ಕೊನೆಯ ವಿಶ್ವಕಪ್ ಕ್ರಿಕೆಟ್ ಉದ್ದಕ್ಕೂ ಹೆಚ್ಚು ಕಡಿಮೆ ಎಲ್ಲಾ ತಂಡಗಳೂ ಏರಿಳಿತಗಳನ್ನು ಕಂಡವು. 'ಸಮ'(ಟೈ) ಆದ ರೋಮಾಂಚಕಾರಿ ದಕ್ಷಿಣ ಆಫ್ರಿಕಾ- ಆಸ್ಟ್ರೇಲಿಯಾ ಸೆಮಿಫೈನಲ್ ನಂತರ ಭಾರಿ ಕುತೂಹಲ ಕೆರಳಿಸಿದ್ದ ಫೈನಲ್ ಇಡೀ ಪಂದ್ಯದ ಅತ್ಯಂತ 'ಸಪ್ಪೆ' ಮ್ಯಾಚ್ ಆಗಿತ್ತು. ಪಾಕಿಸ್ತಾನ ಅಷ್ಟು ಕೆಟ್ಟದಾಗಿ ಫೈನಲ್‌ನಲ್ಲಿ ಸೋತಿದ್ದು ಇಡೀ ಪಂದ್ಯಕ್ಕೆ ಮಸಿ ಬಳಿಯುವಂತಿತ್ತು. ಯಾರು ಏನೇ ಹೇಳಲಿ ಆಸ್ಟ್ರೇಲಿಯಾಕ್ಕೆ ಚಾಂಪಿಯನ್ ಆಗುವ ಎಲ್ಲಾ ಅರ್ಹತೆಗಳಿದ್ದವು. ದಕ್ಷಿಣ ಆಫ್ರಿಕಾವನ್ನು ಸೂಪರ್ ಸಿಕ್ಸ್‌ನಲ್ಲಿ ಸೋಲಿಸಿದ್ದು ಸಾಲದೆ? ಆದರೂ ದಕ್ಷಿಣ ಆಫ್ರಿಕಾದ ಮಹಾನ್ ತಂಡದ ಜತೆ ಸಹಾನುಭೂತಿ ಇರದಿರಲೂ ಸಾಧ್ಯವಿಲ್ಲ. ಆಸ್ಟ್ರೇಲಿಯಾ ಪಂದ್ಯದಲ್ಲಿ ಕೆಟ್ಟದಾಗಿ ಆರಂಭಿಸಿದರೂ ಉದ್ದಕ್ಕೂ ತೋರಿಸಿದ ಹೋರಾಟದ ಮನೋಭಾವ ಮಾನಸಿಕ ಸ್ಥೈರ್ಯ, ಛಲ, ಟೀಮ್ ಸ್ಪಿರಿಟ್ ಸ್ಮರಣೀಯ. ಯಾವುದೇ ಪಂದ್ಯದ ತಿರುಳೇ ಇದಲ್ಲವೆ.

ಪೊಳ್ಳು ನೆಪಗಳು ಬೇಡ!

ಅದಿರಲಿ. ದೇಶದ ಕೋಟಿಗಟ್ಟಲೆ 'ಆಲ್ ದ ಬೆಸ್ಟ್' 'ಕಮಾನ್ ಇಂಡಿಯಾ'ಗಳನ್ನು ಹೊತ್ತು ಸಾಗಿದ ಇಂಡಿಯಾ ಟೀಮಿನ ಅವಮಾನಕಾರಿ ಆಟದ ಬಗ್ಗೆ ಆತ್ಮಪರೀಕ್ಷೆ ಅಗತ್ಯ. ಈ ಬಾರಿಯ ವಿಶ್ವಕಪ್‌ನ ಪಂದ್ಯದ ಹೊಸ ನಿಯಮಗಳನ್ನು ನಮ್ಮ ಸೋಲಿಗೆ ದೂರುವುದು ಮೂರ್ಖತನ. ಸತತವಾಗಿ ಉತ್ತಮ ಆಟ ಆಡಿದ, ಬರಿಯ ಅದೃಷ್ಟದಿಂದ ಕಪ್ ಬಾರದಂತೆ ಈ ನಿಯಮಗಳನ್ನು ರಚಿಸಲಾಗಿತ್ತು. ಈ ನಿಯಮಗಳಿಂದಾಗಿಯೇ ಪಂದ್ಯ ರೋಮಾಂಚಕಾರಿಯಾಗಿತ್ತು. ಪ್ರತಿ ಮ್ಯಾಚ್ ಕುತೂಹಲಕಾರಿಯಾಗಿತ್ತು. ಅತ್ಯಂತ ಉತ್ತಮ ಬ್ಯಾಟ್ಸ್‌ಮನ್‌ಗಳು, ಬೌಲರುಗಳನ್ನು ಹೊತ್ತ ಭಾರತದ ತಂಡ ಸೆಮಿಫೈನಲ್‌ಗೂ ತಲುಪದ್ದು ಯಾಕೆ? ವಿಶ್ವಕಪ್‌ನ ಆಸೆ ಹೊತ್ತು ಹೋದ ಟೀಮು ಆರನೇ ಸ್ಥಾನಕ್ಕೆ ಅದೂ ಬಿಕ್ಕಿ ಬಿಕ್ಕಿ ಏರಿದ್ದು ಏಕೆ?

ಭಾರತದ ಟೀಮಿನ ಸೋಲಿಗೆ ಇದೇ ಕಾರಣವೆನ್ನುವುದು ಕಷ್ಟ. ಏನಿಲ್ಲದಿದ್ದರೂ ನಮ್ಮ ತಂಡದ ಆಟಗಾರರ ಸಾಮರ್ಥ್ಯ ನೋಡಿದರೆ ಸೆಮಿಫೈನಲ್‌ಗೆ ಬರುವುದಂತೂ ಕಷ್ಟವಾಗಲಾರದಿತ್ತು. ಇಂಗ್ಲೆಂಡಿಗೆ ತೆರಳುವ ಮೊದಲೇ ಕ್ರಿಕೆಟ್‌ನ ಅತ್ಯಂತ ಕೆಟ್ಟದಾದ ವ್ಯಾಪಾರೀಕರಣದಿಂದ ಭಾರಿ ದುಡ್ಡು ಮಾಡಿದ ಸಂತೃಪ್ತಿ ಮನೋಭಾವ, ಎಲ್ಲಾ ತಂಡದ ಸದಸ್ಯರಿಗೆ ಗೆಲ್ಲಲು ಆಟವಾಡುವ ಸ್ಫೂರ್ತಿ ಇರಲಿಲ್ಲ ಎನ್ನುವುದು ತೀರಾ ತಪ್ಪಾದ ಟೀಕೆ ಆಗಲಿಕ್ಕಿಲ್ಲ. ಇದಲ್ಲದೆ ವೈಯಕ್ತಿಕ 'ರೆಕಾರ್ಡ್'ಗೆ ಪ್ರಾಮುಖ್ಯತೆ ಕೊಡುವುದು, ಆತ್ಮವಿಶ್ವಾಸ, ಮಾನಸಿಕ ಸ್ಥೈರ್ಯ, ಟೀಮ್ ಮನೋಭಾವ, ಕೊನೆಯವರೆಗೂ ಹೋರಾಡುವ ಕೆಚ್ಚು-ಇವುಗಳ ಅಭಾವ ಭಾರತದ ತಂಡವನ್ನು ಕಾಡಿದೆ ಎಂದು ಧಾರಾಳವಾಗಿ ಹೇಳಬಹುದು

ಇನ್ನೇನು ಕಾರಣ?

ಇದು ಕ್ರಿಕೆಟ್‌ಗೆ ಮಾತ್ರವಲ್ಲ ಹಾಕಿ ಮುಂತಾದ ಎಲ್ಲಾ ಪಂದ್ಯಗಳಿಗೂ ಅನ್ವಯಿಸುವುದು. ಪಂದ್ಯಗಳಿಗೆ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಿಗೆ ಅನ್ವಯಿಸುವಂತಹದ್ದು. ಆದರಲ್ಲೂ ವೈಯಕ್ತಿಕ ಸಾಧನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ, 'ಟೀಮ್' ಅಥವಾ ಸಾಮೂಹಿಕ ಮನೋಭಾವದ ಅಭಾವ. ಇದು ಮಾತ್ರವಲ್ಲ ಇತರ ಎಲ್ಲಾ ಕ್ಷೇತ್ರಗಳಂತೆ ನಮ್ಮ ಪಂದ್ಯಗಳಿಗಿರುವ 'ಕ್ಯಾಚ್‌ಮೆಂಟ್ ಏರಿಯಾ' ಸೀಮಿತವಾದದ್ದು, ಹೊಟ್ಟೆ ಬಟ್ಟೆಗೆ ತೊಂದರೆ ಇಲ್ಲದೆ ನೆಮ್ಮದಿಯಿಂದ ಆಟ ಆಡಬಲ್ಲ ಶೇಕಡಾ 5 ರಿಂದ 10 ಇರುವ ಮಧ್ಯಮ, ಉಚ್ಚ ಮಧ್ಯಮ ವರ್ಗ ನಮ್ಮ ಆದಿವಾಸಿಗಳು, ಸಮಾಜದ ಕೆಳಜಾತಿ ವರ್ಗದವರಿಗೆ ಹೊಟ್ಟೆ-ಬಟ್ಟೆ- ಆರೋಗ್ಯಕ್ಕೆ ಬೇಕಾದ್ದೆಲ್ಲಾ ಸಿಕ್ಕಿ ಆಟ ಆಡುವಷ್ಟು ವಿರಾಮ ಸಿಕ್ಕರೆ ನಮ್ಮ ಪಂದ್ಯಗಳಲ್ಲೆಲ್ಲಾ ಭಾರಿ ಕ್ರಾಂತಿ ಆದೀತು. ಈ ಸಂತೃಪ್ತ ಮನೋಭಾವ, ಸಾಮೂಹಿಕ ಮನೋಭಾವದ ಮತ್ತು ಛಲದ ಅಭಾವ ನಮ್ಮ ಪಾಳೆಯಗಾರಿ ಸಂಸ್ಕೃತಿಯ ದೇಣಿಗೆ ಅಲ್ಲವೆ?


ಕ್ರೀಡಾ ನೀತಿ ಹೇಗಿರಬೇಕು?

ಆದರಲ್ಲೂ ಇದ್ದ ಬದ್ದ ಎಲ್ಲಾ ಕ್ರೀಡಾ ಸಂಪನ್ಮೂಲಗಳು ಕ್ರಿಕೆಟ್‌ಗೆ ಹರಿಯುತ್ತಿದ್ದರೂ ಇಂತಹ ಅವಸ್ಥೆಯಾದರೆ ಇನ್ನು ಇತರ ಕ್ರಿಡೆಗಳ ಅವಸ್ಥೆ ಏನು? ನಾವು ವಿಶ್ವ ಛಾಂಪಿಯನ್ ಆಗಿದ್ದ ಹಾಕಿಯಲ್ಲಂತೂ ನಮ್ಮ ಸಾಧನೆ ಎಲ್ಲಾ ರೀತಿಯಲ್ಲೂ ಸೊರಗುತ್ತಿದೆ. ಎಲ್ಲರಿಗೂ (ಅಥವಾ ಹೆಚ್ಚು ಕಡಿಮೆ ಎಲ್ಲರಿಗೂ) ಆಟ ಆಡುವ ಸೌಲಭ್ಯಗಳು, ಆರೋಗ್ಯ, ವಿರಾಮ, ಸಿಗುವಂತಾಗುವ ಸಾಮಾಜಿಕ ನೀತಿಯ ಆಧಾರಿತ ಕ್ರೀಡಾ ನೀತಿ ಇಂದಿನ ತುರ್ತು ಅಗತ್ಯ. ಇದಕ್ಕೆ ಬೇಕಾದ ಸಂಪನ್ಮೂಲಗಳು ಸಾರ್ವಜನಿಕ ವೆಚ್ಚದಿಂದಲೇ ಬರಬೇಕು. ಕ್ರಿಕೆಟ್‌ಗೆ ಹರಿಯುತ್ತಿರುವ ಅಗಾಧ ಹಣ, ಕ್ರಿಕೆಟ್‌ನಲ್ಲಂತೂ ... ಚಾಂಪಿಯನ್ ಮಾಡಲಿಲ್ಲ. ಇತರ ಪಂದ್ಯಗಳಲ್ಲೂ ... ಏನೂ ಮಾಡಲಾಗದು-ಅದು ಪೆಪ್ಸಿ, ... ಸಿಗರೇಟುಗಳನ್ನು ಮಾರಿಸೀತು. ಕೆಲವು ಆಟಗಾ... ಕೋಟಿಗಟ್ಟಲೆ ಸಂಪಾದಿಸಬಹುದು. ಪೆದ್ದು ಪೆದ್ದಾಗಿ ... ನೋಡುಗರನ್ನು ಕೇಳುಗರನ್ನು ಬಯಸುವ ವ್ಯಾಪಾರಿ ... ಇನ್ನೇನು ಮಾಡೀತು? ಅಂಧ ದೇಶಾಭಿಮಾನ, ಜ... ಮನೋಭಾವನೆಯನ್ನು ಪ್ರೇರೇಪಿಸಿತಷ್ಟೇ. ಉತ್ತಮ ಕ್ರೀ... ಮನೋಭಾವವನ್ನಲ್ಲ. ವ್ಯಾಪಾರಸ್ತರ ಖಾ... ಸಂಪನ್ಮೂಲಗಳು ಕ್ರೀಡೆಗೆ ಏನೂ ಮಾಡಲಾರವು ... ಈ ವಿಶ್ವಕಪ್ ಕ್ರಿಕೆಟ್ ಪಂದ್ಯದ ಅನುಭವ.

ಈ ಅನುಭವ ಸರಿಯಾದ ಕ್ರೀಡಾ ನೀತಿಗೆ ... ಮಾಡಿಕೊಡಬಹುದೆ?



ವಿಶ್ವಕಪ್ ಗೆದ್ದ ಆನಂದಭರಿತ ಆಸ್ಟ್ರೇಲಿಯ...



ಹಿರಿಯ ಸಾಹಿತಿಯ ಹಿರಿತನದ ಮಾತುಗಳು

ಉದಾರೀಕರಣ ಜನರ ಉದ್ಯೋಗವನ್ನು ನಾಶಮಾಡುತ್ತವೆ ಇದನ್ನು ಒಗ್ಗಟ್ಟಿನಿಂದ ತಡೆಯಬೇಕು

-ಡಾ. ಎಲ್. ಆರ್. ಹೆಗಡೆ

"ಆರ್ಥಿಕ ಕ್ಷೇತ್ರದಲ್ಲಿ ಉದಾರೀಕರಣದ ಮಾತು ಹೆಚ್ಚಾಗಿ ಕೇಳಿಬರುತ್ತಿದೆ. ಬಹು ರಾಷ್ಟ್ರೀಯ ಕಂಪನಿಗಳು ನಾಡಿನ ಕಚ್ಚಾಮಾಲುಗಳ ಸ್ವಾಮಿತ್ವವನ್ನು ಪಡೆದು ಇಲ್ಲಿಯ ಜನರ ಉದ್ಯೋಗ- ಸ್ವಾತಂತ್ರ್ಯವನ್ನು ಹರಣ ಮಾಡುವಂತ ಭೀತಿಯ ಸನ್ನಿವೇಶದಲ್ಲಿ ಹಾವಿನ ಹೆಡೆಯ ಅಡಿಯಲ್ಲಿರುವ ಕಪ್ಪೆಗರಿಗಳಂತೆ ಆಗುವುದನ್ನು ತಪ್ಪಿಸಲು ಲೇಖಕರು ಜನರಲ್ಲಿ ಹೊಸದೊಂದು ಜಾಗೃತಿಯ ಆಂದೋಲನವನ್ನು ಮುಖ್ಯವಾಗಿ ಪರಿವಹನ ಮಾಧ್ಯಮಗಳಾಗಿರುವ ಪತ್ರಿಕೆ, ಗ್ರಂಥರೂಪ, ರೇಡಿಯೋ, ಚಲನಚಿತ್ರ, ಯಕ್ಷಗಾನ ಪ್ರಯೋಗ ಮುಂತಾದ ಸಾಧ್ಯವಾದ ಮಾಧ್ಯಮಗಳಿಂದ ಪ್ರಸಾರಗೊಳಿಸಬೇಕು. ಈ ವಿಷಯದಲ್ಲಿ ಜನರು ಸಂಘಟಿತರಾಗಿ ಒಗ್ಗಟ್ಟಿನಿಂದ ಇದ್ದರೆ ಮಾತ್ರ ಯಾವುದೇ ಸರ್ಕಾರ ವಿದ್ದರೂ ಅದು ಬಹುರಾಷ್ಟ್ರೀಯ ಹಿಡಿತಕ್ಕೆ ಆಸ್ಪದ ಕೊಡದಂತೆ ಮಾಡಲು ಸಾಧ್ಯವಿರುತ್ತದೆ" ಈ ಮಾತು ಯಾವುದೇ ರಾಜಕಾರಣಿಯದಾಗಲಿ, ಯುವಜನ ನಾಯಕರದಾಗಲಿ ಅಲ್ಲ. ನಿಶ್ಚಯವಾಗಿಯೂ ಇದು ಡಾ.ಎಲ್.ಆರ್. ಹೆಗಡೆಯವರ ಮಾತುಗಳು.

ಡಾ. ಎಲ್.ಆರ್. ಹೆಗಡೆಯವರು ನಾಡಿನ ಹಿರಿಯ ಜಾನಪದ ವಿದ್ವಾಂಸರು, ಸಂಶೋಧಕರು. ಸುಮಾರು 75 ವರ್ಷದ ಇವರು 1999 ರ ಉ.ಕ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣದ ಮಾತುಗಳಿವು.

3-4 ತಿಂಗಳ ಹಿಂದೆ ಕನಕಪುರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಸ್.ಎಲ್. ಭೈರಪ್ಪನವರ ಮಾತುಗಳು ನಿಮಗೆಲ್ಲಾ ನೆನಪಿದೆ. ಪಕ್ಕಾ ಬಿಜೆಪಿಯ ವಕ್ತಾರರಂತೆ ಮಾತನಾಡಿದ ಅವರು ಅನೇಕರ ಸಂಶಯವನ್ನು (ಇವರು ತಮ್ಮ ಕೆಲವು ಕಾದಂಬರಿಗಳಲ್ಲಿ ಪ್ರಗತಿ ಪರರಂತೆ ಬರೆದಿದ್ದಾರಲ್ಲಾ? ನಿಜವಾಗಿಯೂ ಇವರು ಪ್ರಗತಿಪರರೇ? ಎಂಬ ಸಂಶಯ) ಪರಿಹರಿಸಿ ತಾನೊಬ್ಬ ಸನಾತನವಾದಿ ಎಂಬುದನ್ನು ಸಾರಿ ಹೇಳಿದರು. ವೈದಿಕಶಾಹಿಗಳು ಹೇಳುತ್ತಾ ಬಂದ ನಿಲುವುಗಳನ್ನು ಸಾಹಿತ್ಯದ ಭಾಷೆಯಲ್ಲಿ ಮತ್ತೊಮ್ಮೆ ಸಾರಿದರು. ಬಹುಸಂಖ್ಯಾತರನ್ನು ಕಾಡುತ್ತಿದ್ದ ಈ ದೇಶದ ಆರ್ಥಿಕತೆ ಅವರಿಗೆ ಒಂದು ಸಮಸ್ಯೆಯಾಗಿ ಕಾಡಲೇ ಇಲ್ಲ. ಲೇಖಕನ ನಿರ್ಲಿಪ್ತತನದ ಅವಶ್ಯಕತೆಯ ಬಗ್ಗೆ ಪುಟಗಟ್ಟಲೆ ವಿವರವನ್ನು ಕೊಟ್ಟರು. ಇಂತಹ ಅಖಿಲ ಭಾರತ ಮಟ್ಟದ (!?) ಭಾಷಣದೊಂದಿಗೆ ಹೆಗಡೆಯವರ ಭಾಷಣವನ್ನು ಹೋಲಿಸಿದರೆ ಈ ಹಿರಿಯ ಸಾಹಿತಿಯ ಹಿರಿತನದ ಮಾತಿನ ಮಹತ್ವ ಅರ್ಥವಾಗುತ್ತದೆ.

ತಮ್ಮ ಭಾಷಣದಲ್ಲಿ 80-90 ರ ದಶಕದ ಸಾಹಿತ್ಯದ ಬಗ್ಗೆ ಬರೆಯುತ್ತಾ " ಕೆಲವು ಬುಡಕಟ್ಟು ಸಮಾಜ ಬಿಟ್ಟರೆ, ಎಲ್ಲಾ ಸಮಾಜದಲ್ಲಿಯೂ ಹೆಣ್ಣು ಪರತಂತ್ರಳು, ರಾಜ್ಯಘಟನೆಯಲ್ಲಿ ಸಮಾನತೆಯು, ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿರುವುದಾದರೂ ಮ್ಯಾನ್ ಈಸ್ ಮೋರ್ ಈಕ್ವಲ್ ಎಂಬಂತೆ ಪುರುಷ ಪ್ರಧಾನ ಸಮಾಜವು ನಡೆದು ಕೊಳ್ಳುವುದೇ ಹೆಚ್ಚು. ಇತ್ತೀಚಿನ ಬಂಡಾಯ ಸಾಹಿತಿಗಳು ಹಲವಾರು ಸಾಮಾಜಿಕ ಅನ್ಯಾಯಗಳ ವಿರುದ್ಧ ಸಿಡಿದೆದ್ದಿರುವುದು ಅವರ ಸಾಹಿತ್ಯ ರಚನೆಯಿಂದ ತಿಳಿದು ಬರುತ್ತಿದೆ. ಪುರೋಹಿತ ಶಾಹಿಯ ಕಪಿಮುಷ್ಟಿಯಿಂದ ಮೂಢ ನಂಬಿಕೆಗಳ ಸರಪಳಿಯಿಂದ ಸಾಮಾನ್ಯ ಅಶಿಕ್ಷಿತ ಜನರನ್ನು ಬಿಡುಗಡೆ ಮಾಡುವ ಪ್ರಯತ್ನಗಳು ಇಂಥ ಸಮಾಜ ಸುಧಾರಕರಿಂದ ನಡೆಯುತ್ತಿವೆ" ಎಂದು ಬಂಡಾಯ ಸಾಹಿತ್ಯದ ಜನಪರ ಕಾಳಜಿಯನ್ನು ಸಾಧನೆ ಯನ್ನು ಶ್ಲಾಘಿಸಿದರು. ಆದರೆ ಅಂದು ಭೈರಪ್ಪನವರಿಗೆ ಇದ್ಯಾವುದೂ ಗೋಚರವಾಗದೆ ದಲಿತ-ಬಂಡಾಯ ಸಾಹಿತ್ಯ ಕಳಪೆಯಾಗಿ ಕಂಡಿತು ಅನ್ನುವುದಕ್ಕಿಂತ ಅದು ಸಾಹಿತ್ಯವೇ ಅಲ್ಲ ಎನ್ನುವ, ಸಾಹಿತ್ಯದ ದಿಕ್ಕುತಪ್ಪಿಸಿತು ಎನ್ನುವ ನಿಲುವಿಗೆ ಅಂತಿಮವಾಗಿ ಬಂದರು. ಯಾಕೆ ಈ ವಾಸ್ತವವನ್ನು ಅಲ್ಲಗಳೆಯುವ ಹಠ (ಸಂಘ ಪರಿವಾರಗಳ ಸದಸ್ಯರುಗಳಂತೆ).

ಒಬ್ಬ ಲೇಖಕ ಪ್ರಗತಿಪರವಾಗಿ-ವಿರೋಧಿಯಾಗಿ ಬರೆಯಲು ಕಾರಣಗಳಿವೆ. ದುಡಿವ, ಸಾಮಾನ್ಯರ ಜೊತೆ ಯಾವ ಸಂಪರ್ಕವೂ ಇಲ್ಲದೆ ಒಬ್ಬ ಬುದ್ಧಿಜೀವಿಯಾಗಿ ಕುಳಿತು ಬರೆಯುವ ಲೇಖಕರು ಭೈರಪ್ಪನವರಂತೆ ಯೋಚಿಸುತ್ತಾರೆ. ಇವರಿಗೆ ಬಡತನ, ಜಾತಿ, ಅಸ್ಪೃಶ್ಯತೆ ಇವೆಲ್ಲ ಕಾದಂಬರಿಯನ್ನು ಜನಪ್ರಿಯಗೊಳಿಸಲು ಬೇಕಾದ ಸರಕುಗಳು ಅಷ್ಟೆ. ಹೀಗೆ ಆಳುವ ವರ್ಗಕ್ಕೆ ಪೂರಕವಾದ ಮಾತುಗಳನ್ನು ಆಡುತ್ತಾರೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರುಗಳಾಗುತ್ತಾರೆ. ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕಾರ ಪಡೆಯುತ್ತಾರೆ. ಆದರೆ ದಿನ ನಿತ್ಯ ಸಾಮಾನ್ಯ ಗ್ರಾಮೀಣರ ಬದುಕಿನ ಜೊತೆ ಬೆರೆತು, ಅವರ ನೋವು ನಲಿವಿಗೆ ಕುಗ್ಗಿದ- ಹಿಗ್ಗಿದ ಡಾ.ಎಲ್.ಆರ್. ಹೆಗಡೆಯಂಥವರು 80... ವರ್ಷಗಳಾದರೂ ವಾಸ್ತವ ದೊಂ... ಮಾತನಾಡುತ್ತಾರೆ ಮತ್ತು ಇವರು ಅಖಿಲ ಭಾ... ಮಟ್ಟದ ಸಮ್ಮೇಳನಗಳಿಗೆ ಅಧ್ಯಕ್ಷರಾಗುವುದ... ದೊಡ್ಡ ದೊಡ್ಡ ಪ್ರಶಸ್ತಿಗಳು ಇವರಿಗೆ ಲಭಿಸುವ...

ಕನಕಪುರದಲ್ಲಿ ಅಧ್ಯಕ್ಷರ ಭಾಷಣವನ್ನು ವಿಮ... ಗೋಷ್ಠಿಗಳಲ್ಲಿ ಮಾತನಾಡಿದರೆಂದು ಅನೇ... ವಿರೋಧಿಸಿದರು. ಸ್ವತಃ ಭೈರಪ್ಪನವರೇ ಸಮಾರು... ಭಾಷಣದಲ್ಲಿ ಕೆಂಡಕಾರಿದರು. ಆದರೆ ... ಹೆಗಡೆಯವರು ತಮ್ಮ ಭಾಷಣದಲ್ಲಿ "..... ಉಪನ್ಯಾಸದಲ್ಲಿನ (ಅಧ್ಯಕ್ಷ ಭಾಷಣದ... ತಪ್ಪುಗಳನ್ನು ಮುಂದೆ ಆಯಾ ಗೋಷ್ಠಿಗ... ಮಾತನಾಡುವ ವಿದ್ವಾಂಸರು ನಿರ್ದಾಕ್ಷಿಣ್ಯ... ಖಂಡಿಸಿ ತಮ್ಮ ಪ್ರಾಮಾಣಿಕ ಅಭಿಪ್ರಾಯಗ... ಮಂಡಿಸಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇ... ಎಂದು ವಿನಯವಾಗಿ ಹೇಳಿದರು.

ಹೀಗೆ ಡಾ.ಎಲ್ಲಾರ್ ಹೆಗಡೆಯವರ ಮಹ... ಕೆಲವು ಮಾತುಗಳು ಭಾಷಣಕ್ಕಾಗಿ ಮಾತ್ರ ಬರೆ... ಬದುಕಿನಲ್ಲಿ ಅವರು ಅದನ್ನು ಬರೆದವರು.

ಹಾಗಾಗಿ ಭೈರಪ್ಪನಂಥವರು ಅಖಿಲಭಾ... ಮಟ್ಟದ ಖ್ಯಾತಿಯ ಲೇಖಕರಾದ... ಡಾ.ಹೆಗಡೆಯವರ ವಿನಯದ ಮು... ಪ್ರಾಮಾಣಿಕತೆಯ ಮುಂದೆ ಸಣ್ಣವರಾಗಿ ಬಿಡು...

- ವಿಠ್ಠಲ ಭಂಡ...

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ